
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

14 ಜೂನ್ 2017 ಪುಟ 16 ರೂ. 15/-

ನಕ್ಸಲ್ಬರಿ ಮುಗಿಯದ ಇತಿಹಾಸ





ಅಗಲಿದ ಅಮ್ಮ

ಮೈಸೂರು

ಕಾವಿ ಸಚ್ಚಿದಾನಂದನ ಹಂಕಾರಿ ಬರ್ತ್‌ಡೆ!

ಕೊಪ್ಪಳ

ಸಿದ್ದು ವಿರುದ್ಧ ‘ಕೈ’ ಕೋಲ್ಡ್‌ವಾರ್

ದಕ್ಷಿಣ ಕನ್ನಡ

ಸಂಘ ಪರಿವಾರದಲ್ಲಿ ಕೆಟ್ ಪಂದ್ಯಾಟ!

ಚಿತ್ರದುರ್ಗ

ಮಾದಾರ ಸ್ವಾಮಿಯ ಸಂಧಾನದ ಬಯಲಾಟ!

ಸಂಘ ಪರಿವಾರದ ಬೂಸಿ ಜಾಲತಾಣಗಳು ಮತ್ತು ಅವುಗಳ ಕುಕೃತ್ಯಗ



■ಸುರೇಶ್ ಭಟ್ ಬಾಕ್ರಬೈಲ್

ವಿಶ್ವದ ಇತಿಹಾಸವನ್ನು ಬಲ್ಲವರು ಭಾರತದ ಇಂದಿನ ರಾಜಕೀಯ ವಿದ್ಯಮಾನಗಳಿಗೂ ಕಳೆದ ಶತಮಾನದ ಜರ್ಮನಿಯ ವಿದ್ಯಮಾನಗಳಿಗೂ ಬಹಳಷ್ಟು ಸಾಮ್ಯತೆಗಳಿರುವುದನ್ನು ಗಮನಿಸದೆ ಇರಲಾರರು. ನಾಜಿ ಪಕ್ಷದ ನಾಯಕ ಅಡಾಲ್ಫ್ ಹಿಟ್ಲರ್ ತಾನು ಯಹೂದಿಗಳ ಹುಟ್ಟಡಗಿಸುವೆ, ಜರ್ಮನಿಯನ್ನು 'ಆರ್ಯರಾಷ್ಟ್ರ'ವಾಗಿ ಪರಿವರ್ತಿಸುವೆ, ಗತಕಾಲದ ವೈಭವವನ್ನು ಮರುಸ್ಥಾಪಿಸುವೆ, ನಿರುದ್ಯೋಗ ನಿವಾರಿಸುವೆ ಇವೇ ಮೊದಲಾದ ಆಕ್ರಾಕರ್ಷಕ ಘೋಷಣೆಗಳಿಂದ ಜನರಿಗೆ ಸ್ವರ್ಗಲೋಕವನ್ನೆ ತೋರಿಸಿ ಚುನಾವಣೆ ಗೆದ್ದ ನಂತರ ಸರ್ವಾಧಿಕಾರ ಚಲಾಯಿಸಿದ ಕಥೆಗೂ ಭಾರತದ ಇಂದಿನ ಪರಿಸ್ಥಿತಿಗೂ ಹೆಚ್ಚು ವ್ಯತ್ಯಾಸಗಳಿಲ್ಲ. ರಾಜಕೀಯ ಮಹತ್ವಾಕಾಂಕ್ಷಿ ಹಿಟ್ಲರ್ ಹೇಗೆ ಸಂಸತ್‌ಭವನಕ್ಕೆ ಕಿಚ್ಚು ಹಾಕಿಸಿ ಅದನ್ನು ಇತರರ ತಲೆಗೆ ಕಟ್ಟಿ, ಆ ಸಂದರ್ಭದ ಗೊಂದಲವನ್ನು ಬಳಸಿಕೊಂಡು ಎಲ್ಲಾ ಅಧಿಕಾರವನ್ನು ತನ್ನಲ್ಲಿ ಕೇಂದ್ರೀಕರಿಸಿದ; ಹೇಗೆ ಸಮಾಜದ ಎಲ್ಲಾ ಪ್ರಮುಖ ಕ್ಷೇತ್ರಗಳಲ್ಲಿ ತನ್ನ ನಿಷ್ಠಾವಂತರನ್ನೆ ತುಂಬಿದ; ಹೇಗೆ ಎಲ್ಲಾ ಮಾಧ್ಯಮಗಳನ್ನು ತನ್ನ ಮುಷ್ಟಿಯೊಳಗಿರಿಸಿಕೊಂಡ; ಹೇಗೆ ಪ್ರತ್ಯೇಕ ಪ್ರಚಾರ ಸಚಿವಾಲಯವೊಂದನ್ನು ಹುಟ್ಟುಹಾಕಿ ಅದಕ್ಕೆ ಗೋಬೆಲ್ಸ್ ಎಂಬಾತನನ್ನು ಮಂತ್ರಿಯಾಗಿ ನೇಮಿಸಿ ಮಾಧ್ಯಮಗಳು ತನ್ನನ್ನು ಮತ್ತು ತನ್ನ ಸರಕಾರವನ್ನು ಸದಾ ಸ್ತುತಿಸುವಂತೆಯೂ, ಎಂದೂ ಟೀಕಿಸದಂತೆಯೂ, ಸುಳ್ಳುಗಳನ್ನು ಹಬ್ಬಿಸುವಂತೆಯೂ ಮಾಡಿದ ಎಂಬ ಕಥಾನಕ ನಿಜಕ್ಕೂ ಕುತೂಹಲಕಾರಿಯಾಗಿದೆ.

ಇಂದು ಭಾರತದಲ್ಲಿಯೂ ಇದೇ ಇತಿಹಾಸದ ಪುನರಾವರ್ತನೆ ಆಗುತ್ತಿದೆ. ತನ್ನ ನಿಷ್ಠಾವಂತ ಕಾರ್ಯಕರ್ತ ನರೇಂದ್ರ ಮೋದಿಯ ಮೂಲಕ ಭಾರತವನ್ನು 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸಲು ಹೊರಟಿರುವ ಆರೆಸ್ಸೆಸ್ ದೃಶ್ಯ ಶ್ರಾವ್ಯ ಮುದ್ರಣ ಮಾಧ್ಯಮಗಳು ಮತ್ತು ಅಂತರ್ಜಾಲವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ತನ್ನ ತತ್ವ, ಸಿದ್ಧಾಂತ, ನಿಲುವುಗಳ ಜೊತೆ ಸುಳ್ಳುಗಳನ್ನು ರಾಕೆಟ್ ವೇಗದಲ್ಲಿ ಹರಡುತ್ತಿದೆ. ಇಂದು ಭಾರತದ ಬಹುತೇಕ ಮಾಧ್ಯಮಗಳು ಬಲಪಂಥೀಯಪರ ಕಾರ್ಪೊರೇಟುಗಳ ಮಾಲಿಕತ್ವದಲ್ಲಿರುವುದು ಕಾಕತಾಳೀಯ ಘಟನೆಯಲ್ಲ; ಅದು ಉದ್ದೇಶಪೂರ್ವಕ ಹಾಗೂ ಪೂರ್ವಯೋಜಿತ. ಇಂತಹ ಮಾಲಿಕರು ಮತ್ತು ಅವುಗಳೊಳಗೆ ತೂರಿಕೊಂಡಿರುವ ಮತೀಯವಾದಿ ಆಂಕರ್‌ಗಳು, ಸುದ್ದಿ ಸಂಪಾದಕರು, ವರದಿಗಾರರಿಂದಾಗಿ ಮುಖ್ಯವಾಹಿನಿಯ ಬಹುತೇಕ ಮಾಧ್ಯಮಗಳು ತಮ್ಮ ಪತ್ರಿಕಾಧರ್ಮಕ್ಕೆ ತಿಲಾಂಜಲಿಯಿತ್ತು ಏಕಪಕ್ಷೀಯ ಕರಪತ್ರಗಳಾಗಿವೆ. ಟೈಮ್ಸ್ ನೌ, ಝೀ ನ್ಯೂಸ್, ರಿಪಬ್ಲಿಕ್‌ಗಳಂಥವು ಖೊಟ್ಟಿ ಸುದ್ದಿಗಳನ್ನು ಪರಿಶೀಲನೆಗೊಳಪಡಿಸದೆ ಸೀದಾ ಚರ್ಚೆಗೆತ್ತಿಕೊಳ್ಳುತ್ತಿವೆ, ಸರ್ಕಾರದ ನಡೆಗಳನ್ನು ಪರಾಮರ್ಶೆಗೊಳಪಡಿಸದೆ ಕಣ್ಮುಚ್ಚಿಕೊಂಡು ಎಲ್ಲವನ್ನೂ ಹೊಗಳುತ್ತಿವೆ, ಪ್ರತಿಪಕ್ಷಗಳ ಬಾಯ್ಮುಚ್ಚಿಸಲು ಯತ್ನಿಸುತ್ತಿವೆ, ಸಮಾಜದಲ್ಲಿ ಯುದ್ಧೋನ್ಮಾದದ ವಾತಾವರಣವನ್ನು ಸೃಷ್ಟಿಸುತ್ತಿವೆ. ಭಿನ್ನಾಭಿಪ್ರಾಯ ವ್ಯಕ್ತಪಡಿಸುವವರಿಗೆಲ್ಲ ಸಾರಾಸಗಟಾಗಿ ದೇಶದ್ರೋಹಿಗಳು, ಮಾವೋವಾದದ ಬೆಂಬಲಿಗರು ಮತ್ತು ಭಯೋತ್ಪಾದನೆಗೆ ಉತ್ತೇಜನ ನೀಡುವವರೆಂಬ ಹಣೆಪಟ್ಟಿ ಕಟ್ಟಲಾಗುತ್ತದೆ! ನಿಷ್ಪಕ್ಷಪಾತಿಗಳಾಗಿರಬೇಕಾದ ಆ್ಯಂಕರ್‌ಗಳು ತಮ್ಮ ರಾಜಕೀಯ ಒಲವನ್ನು ಬಹಿರಂಗವಾಗಿ ಪ್ರದರ್ಶಿಸುತ್ತಾರೆ. ಇವರ ವಾದ, ಆರ್ಭಟ, ಕಿರುಚಾಟಗಳ ವೈಖರಿಯನ್ನು ನೋಡಿದಾಗ ಇವರು ಮೋದಿ ಸರ್ಕಾರದ ಪರವಾಗಿ ಜಿಹಾದ್ ನಡೆಸುತ್ತಿರುವಂತೆ ಭಾಸವಾಗುತ್ತಿದೆ.

ಅಂತರ್ಜಾಲದ ದುರ್ಬಳಕೆ

ಅಂತರ್ಜಾಲದ ಅದ್ಭುತ ಸಾಧ್ಯತೆಗಳನ್ನು ಮನಗಂಡಿರುವ ಸಂಘ ಪರಿವಾರ ಅದರ ಸಂಪೂರ್ಣ ಲಾಭವನ್ನು ಪಡೆದುಕೊಳ್ಳುತ್ತಿದೆ. 2014ರ ಚುನಾವಣೆಗಳ ಕಾಲದಲ್ಲಿ ಉತ್ತುಂಗಕ್ಕೇರಿದ ಅದರ ಪ್ರಚಾರಾಂದೋಳನ ಇಂದಿಗೂ ಮುಂದುವರಿದಿದೆ. ಇಂದು ಅದರ ಬಾಡಿಗೆ ಬಂಟರು ಫೇಸ್‌ಬುಕ್, ಟ್ವಿಟರ್, ವಾಟ್ಸಾಪ್, ಬ್ಲಾಗ್ ಮುಂತಾದ ಗುಂಪುಗಳಲ್ಲಿ ದಿನದ 24 ಗಂಟೆಗಳ ಕಾಲವೂ ಸಕ್ರಿಯವಾಗಿರುವುದರೊಂದಿಗೆ ಅನೇಕ ಸಾಮಾಜಿಕ ಜಾಲತಾಣಗಳನ್ನೂ ನಡೆಸುತ್ತಿದ್ದಾರೆ. ಇಂತಹ ಬೂಸಿತಾಣಗಳಿಗೆ ಕೆಲವು ನಿರ್ದಿಷ್ಟ ಕಸುಬುಗಳನ್ನು ನಿಗದಿಪಡಿಸಲಾಗಿದೆ. ಅವು ಯಾವುವೆಂದರೆ ಪ್ರತಿಪಕ್ಷಗಳ ನಾಯಕರು, ಮಾನವಹಕ್ಕು ಸಂಘಟನೆಗಳು, ಮಾನವಹಕ್ಕು ಕಾರ್ಯಕರ್ತರ ಬಗ್ಗೆ ನಿರಂತರ ಅಪಪ್ರಚಾರ, ವಿರೋಧಿಗಳ ಮೇಲೆ ಕೆಸರೆರಚುವುದು, ಅವರ ವಿರುದ್ಧದ ಸುಳ್ಳು ಸುದ್ದಿಗಳನ್ನು ಹರಡುವುದು, ಹಿಂದೂತ್ವವಾದ ಮತ್ತು ಹಿಂದೂತ್ವ ಸಂಘಟನೆಗಳ ಬಗ್ಗೆ ಸದಭಿಪ್ರಾಯ ಮೂಡಿಸುವುದು, ಅನ್ಯ ಸಿದ್ಧಾಂತಗಳು ಹಾಗೂ ಅನ್ಯ ಧರ್ಮಗಳ ವಿರುದ್ಧ ದ್ವೇಷದ ಭಾವನೆಯನ್ನು ಹುಟ್ಟುಹಾಕುವುದು, ಸಮಾಜವನ್ನು ಮತೀಯ ನೆಲೆಯಲ್ಲಿ ಧ್ರುವೀಕರಿಸುವುದು, ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರ ಸಂಸ್ಕೃತಿಯನ್ನು ಹೇರುವುದು, ಬಹುಸಂಖ್ಯಾತರಿಗೆ ಅಲ್ಪಸಂಖ್ಯಾತರಿಂದ ಅಪಾಯವಿದೆ ಎನ್ನುವ ಮೂಲಕ ಭಯದ ವಾತಾವರಣ ನಿರ್ಮಿಸುವುದು, ಪಾಕಿಸ್ತಾನವನ್ನು ಶಾಶ್ವತ ಶತ್ರುವಾಗಿರಿಸಿ ಸಮಾಜದಲ್ಲಿ ಯುದ್ಧೋನ್ಮಾದ ಸೃಷ್ಟಿಸುವುದು, ಸುಳ್ಳು ವದಂತಿಗಳ ಮೂಲಕ ಜನರನ್ನು ರೊಚ್ಚಿಗೆಬ್ಬಿಸುವುದು ಇತ್ಯಾದಿ. ಇಂತಹ ಖೊಟ್ಟಿ ಸುದ್ದಿ ಕಾರ್ಖಾನೆಗಳ ಮೇಲೆ ಮೋದಿ ಸರ್ಕಾರದ ಕೃಪಾಕಟಾಕ್ಷ ಇರುವುದರಿಂದ ಅವುಗಳನ್ನು ಹೇಳುಕೇಳುವವರಿಲ್ಲ ಎಂಬಂತಾಗಿದೆ. ಆಪ್‌ಇಂಡಿಯಾ. ಚೊಮ್, ಇಂಡಿಯಾರೈಸಿಂಗ್.ಕಾಮ್, ದಿ ಫ್ರಸ್ಟ್ರೇಟೆಡ್ ಇಂಡಿಯನ್. ಕಾಮ್, ವೈರಲ್‌ಇಂಡಿಯನ್.ಕಾಮ್, ಇಂಟರ್‌ನೆಟ್ ಹಿಂದೂ.ಕಾಮ್, ಇನ್ಸಿಸ್ಟ್‌ಪೋಸ್ಟ್.ಕಾಮ್, ಒನ್ ಇಂಡಿಯನ್.ಕಾಮ್, ಪೋಸ್ಟ್‌ಕಾರ್ಡ್.ನ್ಯೂಸ್, ಕಾಮ್, ದಿಲಾಟ್‌ಪಟ್.ಕಾಮ್, ಸ್ವರಾಜ್ಯಮ್ಯಾಗ್.ಕಾಮ್, ದೈನಿಕ್ ಭಾರತ್.ಕಾಮ್, ಶಂಕನಾದ್.ನೆಟ್, ಬೀಯಿಂಗ್ ಇಂಡಿಯನ್.ನೆಟ್, ಸತ್ಯಜೀವಿ.ಕಾಮ್, ಹಿಂದೂತ್ವ.ಇನ್ಫೋ ಮುಂತಾದ ಬೂಸಿತಾಣಗಳಿಗೆ ಬಿಜೆಪಿಯ ಐಟಿ ವಿಭಾಗದ ಜತೆ ನಿಕಟ ಸಂಬಂಧಗಳಿರುವ ವಿಚಾರ ಒಂದು ತೆರೆದ ರಹಸ್ಯ. ಅಂದಹಾಗೆ ಅನೇಕ ಬೂಸಿತಾಣಗಳು ತಮ್ಮ ರೋಚಕ ಸುಳ್ಳು ಸುದ್ದಿಗಳು, ಲೈಂಗಿಕ ಸಲಹೆ ಇತ್ಯಾದಿಗಳ ಮೂಲಕ ಹೆಚ್ಚೆಚ್ಚು ಜಾಹೀರಾತುಗಳನ್ನು ಪಡೆದು ಕೋಟಿ ಗಟ್ಟಲೆ ದುಡ್ಡು ಸಂಪಾದಿಸುತ್ತಿರುವುದು ಗುಟ್ಟಾಗಿ ಉಳಿದಿಲ್ಲ.


ಬೂಸಿತಾಣಗಳಲ್ಲಿ ಉತ್ಪತ್ತಿಯಾಗುವ ಸುಳ್ಳು ಸುದ್ದಿಗಳನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಹಬ್ಬಿಸಲಾಗುತ್ತದೆ. ತಾವು ಪಕ್ಷಪಾತರಹಿತವಾಗಿ ಕಾರ್ಯಾಚರಿಸುತ್ತೇವೆಂದು ಹೇಳಿಕೊಳ್ಳುತ್ತಾ ಇವು ನಿಜವಾಗಿಯೂ ಮಾಡುವ ಕೆಲಸಗಳೆಂದರೆ ತಪ್ಪು ಮಾಹಿತಿಗಳನ್ನು ನೀಡುವುದು, ತಪ್ಪು ವ್ಯಾಖ್ಯಾನಗಳನ್ನು ಮಾಡುವುದು, ಸತ್ಯಾಂಶದ ತಿರುಚುವಿಕೆ, ಮಾಹಿತಿಗಳಿಗೆ ತಿದ್ದುಪಾಡು, ನಿಂದನೆ ಮತ್ತು ಚಾರಿತ್ರ್ಯವಧೆ. ಇದೆಲ್ಲದರ ಅಂತಿಮ ಉದ್ದೇಶ ಜನರ ಮನಸ್ಸುಗಳನ್ನು ತಿದ್ದುವ ಮೂಲಕ ಅವರು ಕೇವಲ ಬಲಪಂಥೀಯ ವಿಚಾರಧಾರೆಗಳನ್ನು ಮಾತ್ರ ಸ್ವೀಕರಿಸಿ ಇನ್ನಿತರ ವಿಚಾರಧಾರೆಗಳನ್ನು ತಿರಸ್ಕರಿಸುವಂತೆ ಮಾಡುವುದಾಗಿದೆ. ಇದನ್ನೆಲ್ಲ ಸಾಬೀತುಪಡಿಸುವಂತಹ ಅಸಂಖ್ಯಾತ ಉದಾಹರಣೆಗಳಿವೆ:

* ಮೆಕ್ಸಿಕೊದಲ್ಲಿ ನಡೆದ ಚೂರಿ ಇರಿತದ ವೀಡಿಯೊವನ್ನು ತಿರುಚಿ ಅದು ಕೇರಳದಲ್ಲಿ ಆರೆಸ್ಸೆಸ್ ಸದಸ್ಯನನ್ನು ಹತ್ಯೆ ಮಾಡುತ್ತಿರುವ ದೃಶ್ಯಗಳು ಎಂದು ಬಿಂಬಿಸಲಾಯಿತು.

* ಬಾಂಗ್ಲಾದೇಶದ ವೀಡಿಯೊವೊಂದರಲ್ಲಿ ಮಾರ್ಫಾಟುಗಳನ್ನು ಮಾಡಿ ಅದು ಪ.ಬಂಗಾಲದಲ್ಲಿ ಮುಸ್ಲಿಮರು ಹಿಂದೂ ವ್ಯಕ್ತಿಯೊಬ್ಬನನ್ನು ಕೊಲೆ ಮಾಡುತ್ತಿರುವ ಚಿತ್ರ ಎಂಬ ಸುಳ್ಳು ಸುದ್ದಿಯನ್ನು ಹಬ್ಬಿಸಲಾಯಿತು.

* ಜವಹರ್‌ಲಾಲ್ ನೆಹರು ರಾಷ್ಟ್ರೀಯ ವಿಶ್ವವಿದ್ಯಾನಿಲಯದಲ್ಲಿ ಎರಡು ವರ್ಷಗಳ ಹಿಂದೆ ನಡೆದಿದ್ದ ವಿದ್ಯಾರ್ಥಿ ಚುನಾವಣಾ ವಿಜಯದ ಸಂಭ್ರಮಾಚರಣೆಯ ಚಿತ್ರವನ್ನು ಹಾಕಿ ಅದು ಜೆಎನ್‌ಯು ವಿದ್ಯಾರ್ಥಿಗಳು ಸುಕ್ಮಾ ದಾಳಿಯನ್ನು ಸಂಭ್ರಮಿಸುತ್ತಿರುವುದು ಎನ್ನಲಾಯಿತು.

* ಮೋದಿ ಸರ್ಕಾರದ ನಡೆಗಳನ್ನು ಪ್ರಶ್ನಿಸುತ್ತಿರುವ ಎನ್‌ಡಿ ಟಿವಿಯ ರವೀಶ್ ಕುಮಾರ್‌ರ ಸೋದರಿಯನ್ನು ಭ್ರಷ್ಟಾಚಾರದ ಆರೋಪದಲ್ಲಿ ಅಮಾನತು ಮಾಡಲಾಗಿದೆ ಎಂಬ ಅಪ್ಪಟ ಸುಳ್ಳು ಸುದ್ದಿಯನ್ನು ಹರಿಬಿಡಲಾಯಿತು.



ಕೆಲವೊಂದು ನಿರ್ದಿಷ್ಟ ಜಾಲತಾಣಗಳ ಕುಕೃತ್ಯಗಳು

ಚುಸ್ಕಾಟೈಮ್ಸ್.ಕಾಮ್ ಮತ್ತು ಇಂಡಿಯಾ.ಕಾಮ್ ಎಂಬ ತಾಣಗಳಲ್ಲಿ ಬಾಲಿವುಡ್ ತಾರೆ ಆಲಿಯಾ ಭಟ್ ಆಕೆಯ ತಂದೆ ಮಹೇಶ್ ಭಟ್ ತೊಡೆ ಮೇಲೆ ಕುಳಿತಿರುವ ಮಗುವಿನಂತೆ ಚಿತ್ರಿಸಿರುವ ಫೋಟೊ ಒಂದನ್ನು ಹಾಕಲಾಯಿತು. ಅದರ ಕೆಳಗಿನ ನಾಲ್ಕು ಭಾಗಗಳ ಲೇಖನದ ಟೈಟಲ್ ಹೀಗಿದೆ: 'ತನ್ನ ಕನ್ಯತ್ವ ಹರಣ ಮಾಡಿದಾತ ತನ್ನ ತಂದೆ ಎಂದು ತಪ್ಪೊಪ್ಪಿಕೊಂಡ ಸುಪ್ರಸಿದ್ಧ ನಟಿ'. ಆದರೆ ಕಾರಾ ಡೆಲ್ವಿನ್ ಎಂಬ ಆ ವಿದೇಶೀ ನಟಿಯ ಹೆಸರನ್ನು ಬಯಲುಗೊಳಿಸುವುದು ಮಾತ್ರ ಕೊನೆಯ ಭಾಗದಲ್ಲಿ! ಇಂತಹ ಕಾಲ್ಪನಿಕ ಸುದ್ದಿಗಳು ತಕ್ಷಣ ವೈರಲ್ ಆಗುತ್ತವೆ.

ಇನ್‌ಸಿಸ್ಟ್‌ಪೋಸ್ಟ್.ಕಾಮ್ ಎಂಬ ಬೂಸಿತಾಣ ಬಿಜೆಪಿ, ಆರೆಸ್ಸೆಸ್, ಮೋದಿಗಳನ್ನು ಹೊಗಳುತ್ತಾ ಅವರ ಕೃತ್ಯಗಳನ್ನು ಸಮರ್ಥಿಸುವುದರೊಂದಿಗೆ ಲೈಂಗಿಕ ವಿಷಯಗಳಿಗೆ ಸಂಬಂಧಿಸಿದ ಪುಂಖಾನುಪುಂಖ ಲೇಖನಗಳನ್ನು ಪ್ರಕಟಿಸುತ್ತದೆ. ಪ್ರಸಕ್ತವಾಗಿ ಇನ್‌ಸಿಸ್ಟ್‌ಪೋಸ್ಟ್ ಜಾಲತಾಣವನ್ನು ಅಂಕಿತ್ ಪಾಂಡೆ ಎಂಬಾತ ನಡೆಸುತ್ತಿದ್ದಾನೆ. ಈತನಿಗೆ ಬಿಜೆಪಿಯ ಹಿರಿಯ ನಾಯಕರಾದ ಅಮಿತ್ ಶಾ, ಸ್ಮೃತಿ ಇರಾನಿ ಮತ್ತು ಬಿಜೆಪಿಯ ಐಟಿ ವಿಭಾಗ ಮುಖ್ಯಸ್ಥ ಅಮಿತ್ ಮಾಲವೀಯ ಜೊತೆ ನಿಕಟ ಸಂಬಂಧಗಳಿರುವಂತಿದೆ. ಏಕೆಂದರೆ ಆತನ ಫೇಸ್‌ಬುಕ್, ಇನ್ಸ್ಟಾಗ್ರಾಂ ಅಕೌಂಟ್‌ಗಳು ಇವರ ಜ… ತೆಗೆಸಿಕೊಂಡ ಚಿತ್ರಗಳಿಂದ ಕಂಗೊಳಿಸುತ್ತಿವೆ. … ವೀಕ್ಷಕರನ್ನು ಆಕರ್ಷಿಸುವ ಸಲುವಾಗಿ ಫೇಸ್‌… ಒಪ್ಪಂದ ಮಾಡಿಕೊಳ್ಳಲಾಗಿದೆ. ಇನ್‌ಸಿ… ಲೇಖನಗಳನ್ನು ಅದರ ಸ್ವಂತದ ಫೇಸ್‌ಬುಕ್ … ಹಾಕುವುದರೊಂದಿಗೆ 'ಐಸಪೋರ್ಟ್‌ನಮೋ… ಕೋಟಿಗೂ ಅಧಿಕ ಓದುಗರು) ಮತ್ತು … ಪರಿವಾರ್.ಆರ್ಗ್ (10 ಲಕ್ಷಕ್ಕೂ ಅಧಿಕ ಓದು… ಕೂಡಾ ಪ್ರಕಟಿಸಲಾಗುತ್ತದೆ. ಇವೆರಡೂ … ಇನ್‌ಇಂಡಿಯಾ.ಇನ್ ಮತ್ತು ನ್ಯೂಸ್‌ರೂಮ್‌ಪೋ… ಎಂಬ ಇನ್ನೂ ಎರಡು ಜಾಲತಾಣಗಳನ್ನು ಹಂಚಿ… ಇನ್‌ಸಿಸ್ಟ್‌ಪೋಸ್ಟ್ ಫೇಸ್‌ಬುಕ್ ಪುಟವನ್ನು … ಅಧಿಕ ಮಂದಿ ವೀಕ್ಷಿಸುತ್ತಾರೆ. ವೀಕ್ಷಕರನ್ನು … ಇನ್‌ಸಿಸ್ಟ್‌ಪೋಸ್ಟ್ ಮತ್ತು ಚುಸ್ಕಾಟೈಮ್ಸ್.ಕಾಮ್ … ಕಳುಹಿಸುವ ವ್ಯವಸ್ಥೆಯನ್ನೂ ಮಾಡಲಾಗಿದೆ. … ಅಸಂಖ್ಯಾತ ಪುಟಗಳನ್ನು ಹೊಂದಿರುವ … ಇನ್‌ಸಿಸ್ಟ್‌ಪೋಸ್ಟ್ ಬೂಸಿತಾಣ ಗುಂಪು ಇಂದ… ಸ್ಥಾನದಲ್ಲಿದೆ. ಅಂಕಿತ್ ಪಾಂಡೆ ಕೈಕೆಳಗೆ ಕೆಲಸ … ವವರು ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯ… ಸದ್ಯ ಪದವೀಧರರಾದ ಯುವಜನರು. ಇದ… ತೀರಾ ದುರದೃಷ್ಟಕರವಷ್ಟೆ ಅಲ್ಲದೆ ಅತ್ಯಂತ … ಕಾರಿಯೂ ಆಗಿದೆ.

ಇಂದು ಎಲ್ಲಾ ಸುಳ್ಳುಸುದ್ದಿಗಳ ಉಗ… ಹಿಂದೂತ್ವ.ಇನ್ಫೋ ಎಂಬ ಬೂಸಿತಾಣ. ಇದೊ… ಅಪಾಯಕಾರಿ ತಾಣ ಏಕೆಂದರೆ ಹಿಂದಿ ಭಾಷ… ಇದು ಸಣ್ಣ ಪೇಟೆಪಟ್ಟಣಗಳಿಗೆ ಮತ್ತು ಹಳ್ಳಿ… ತಲಪುತ್ತದೆ. ಆಗಸ್ಟ್ 18, 20… ನೋಂದಣಿಯಾಗಿರುವ ಈ ತಾಣದ … ಮಾಲಿಕತ್ವ ಮೊದಲಾದ ವಿವ… ಮರೆಮಾಚಲಾಗಿದೆ. ಆದರೆ ವೇಬ್ಯಾಕ… ಎಂಬ ಸಂಸ್ಥೆ ಹಿಂದೂತ್ವ.ಇನ್ಫೋದ … 7, 2015ರ ಪುಟವನ್ನು ಕ್ಲಿಕ್ಕ… ಫೋಟೊದಲ್ಲಿ ವಿಶಾಲ್ ಕಶ್ಯಪ್ ಮತ್ತು … ಜಿಂದಾಲ್ ಎಂಬ ಇಬ್ಬರು … ಹೆಸರುಗಳನ್ನು ಕಾಣಬಹುದು. ಹಿಂದೂ… ಜಾಲತಾಣದಲ್ಲಿ ಪ್ರಕಟಗೊಳ್ಳುವ… ಲೇಖನಗಳು ಇವರದೆ ಆಗಿವೆ. … ಇಂಗ್ಲಿಷ್‌ನಲ್ಲಿ ಬರೆದರೆ ಜಿಂದಾಲ್ … ಬರೆಯುತ್ತಾನೆ. ಕೋರ… ಲಿಂಕೆಡ್.ಇನ್‌ಗಳಲ್ಲಿ ಜಿಂದಾ… ಹಿಂದೂತ್ವ.ಇನ್ಫೋ … ಹಿಟ್‌ಪೆಹಿಟ್.ಕಾಮ್‌ಗಳ ಸಂಸ್ಥಾಪ… ಪರಿಚಯಿಸಲಾಗಿದೆ.

ಈತ ಜೈಹಿಂದೂಸ್ತಾನ್‌ಕಿಸೇ… ಜನ್‌ಧನ್ ಯೋಜ್ನಮೋದಿ ಎಂಬ… ಫೇಸ್‌ಬುಕ್ ಪುಟಗಳನ್ನು ನಡೆಸು… ತಿಳಿಯುತ್ತದೆ. ಏಕೆಂದರೆ ಇಲ್ಲಿ ಆತನ … ವಿಳಾಸ ಇದೆ. ಇವೆರಡೂ … ಹಿಂದೂತ್ವ.ಇನ್ಫೋ ಲೇಖ… ಹಂಚಿಕೊಳ್ಳುತ್ತಿವೆ. ಈತ ಇನ್ನೂ ಅನೇಕ … ಪುಟಗಳನ್ನು ನಡೆಸುತ್ತಿದ್ದಾನೆ. ಉದಾಹರಣೆಗೆ … ಪಿಎಮ್ ಬೆಸ್ಟ್, ಐ ಸಪೋರ್ಟ್ ಅನುರಾಗ್… ಲಯನ್ ನೇತಾ ಜಿ. ಫಾರಿನರ್ಸ್ ಲವ್ ಹಿಂ… ಎಮ್‌ಎಸ್‌ಟಿಎನ್ ಲವ್ಸ್ ಪ್ರಾಚಿ, ಬಾಬಿ … ಫ್ಯಾನ್; ವಿಡಿಯೋಸ್ ಹಿಂದೂತ್ವ ಇನ್ಫೋ; ದಿ… ಫ್ಯಾನ್ಸ್, ಹಿಟ್ ಪೆ ಹಿಟ್, ವಿ ಸಪೋರ್ಟ್ ಹಿಂದೂ… ಯೂನಿಟಿ, ಯುಪಿ ಫಾರ್ ಯೋಗಿ, ಭಾಗವ… ಪ್ರೆಸಿಡೆಂಟ್, ಮಂದಿರ್ ಮಾತಾ ವೈಷ್ಣೋ… ಮೂಲಕ ಈತ ಇನ್ನೂ ಅನೇಕ ಗುಂಪುಗಳಿ… ಹಾಗೂ ಮಾಹಿತಿಗಳನ್ನು ಕಳುಹಿಸುತ್ತಾನೆ.

ಇಂತಹದೇ ಇನ್ನೊಂದು ಬೂಸಿ … ಪೋಸ್ಟ್‌ಕಾರ್ಡ್.ನ್ಯೂಸ್‌ನ ಸಂಸ್ಥಾಪಕರು ಮಹೇ… ಹೆಗ್ಡೆ ವಿವೇಕ್ ಶೆಟ್ಟಿ ಮತ್ತು ಅಂಕಿತಾ ರಾ… ಟ್ವಿಟರ್‌ನಲ್ಲಿ ಮಹೇಶ್ ಹೆಗ್ಡೆಯ ಬರಹಗಳನ್ನು … ಓದುತ್ತಾನೆ. ಉಳಿದವರ ಬರಹಗಳನ್ನು … ಗೋಯಲ್ ಮತ್ತಿತರ ಮಂತ್ರಿಗಳು … ಪೋಸ್ಟ್‌ಕಾರ್ಡ್.ನ್ಯೂಸ್‌ನಲ್ಲಿ ಪ್ರಕಟವಾಗುವ … ವಿವೇಕ್ ಶೆಟ್ಟಿ, ಮಹೇಶ್ ಹೆಗ್ಡೆ ತಮ್ಮ ವೈಯ… ಫೇಸ್‌ಬುಕ್ ಖಾತೆಗಳಲ್ಲಿ ಪ್ರಚಾರ ನೀಡುತ್ತಿರುತ್ತಾ… ರಾಜವರ್ಧನ್ ಹಾಕಿರುವ ಚಿತ್ರಗಳಲ್ಲಿ ಆಕೆ ಸುಷ… ರಾಜನಾಥ್ ಸಿಂಗ್ ಮೊದಲಾದ ಬಿಜೆಪಿ ನಾಯ… ನಿಂತಿರುವ ಫೋಟೊಗಳನ್ನು ಕಾಣಬಹುದು. … ಮಟ್ಟಿಗೆ ಈ ಜಾಲತಾಣ ಮೊದಲ 500 ಜಾ… ಪಟ್ಟಿಯಲ್ಲಿದೆ. ಇದರಲ್ಲಿ ಪ್ರಕಟವಾಗಿರುವ ಬೂಸಿ… ಕೆಲವೊಂದು ಸ್ಯಾಂಪಲ್‌ಗಳು ಇಲ್ಲಿವೆ:

ಜಾನುವಾರು ಮಾರಾಟ ನಿಷೇಧದ ಹಿಂದಿರುವ ಮಸಲತ್ತು

ಕಂಡಹಾಗೆ




• ಗೌರಿ ಲಂಕೇಶ್
editorlankesh@gmail.com

ಮೋದಿ ಸರ್ಕಾರ ಮತ್ತೆ ಗೋ ರಾಜಕೀಯಕ್ಕೆ ...ಳಿದೆ. ಮೂರು ವರ್ಷಗಳ ಹಿಂದೆ ಮೋದಿ ಪ್ರತಿ ... ಎರಡು ಕೋಟಿ ಉದ್ಯೋಗಗಳನ್ನು ಸೃಷ್ಟಿಸುವುದಾಗಿ ...ಭರವಸೆ ಕೊಟ್ಟಿದ್ದರೂ ಆತನ ಆಡಳಿತಾವಧಿಯಲ್ಲಿ ...ದ್ಯೋಗ ಅವಕಾಶಗಳು ಕ್ಷೀಣಿಸುತ್ತಿದ್ದು ಯುವಜನತೆ ...ಗಾಲಾಗಿದ್ದಾರೆ. ಇದೇ ಹೊತ್ತಿನಲ್ಲಿ ಕೋಟ್ಯಾಂತರ ...ದ್ಯೋಗಗಳನ್ನೇ ನಾಶಮಾಡಬಲ್ಲಂತಹ ಹೊಸ ...ಯಮವನ್ನು ಮೋದಿ ಜಾರಿಗೆ ತರಲು ಹೊರಟಿದ್ದಾನೆ. ...ೇ ಜಾನುವಾರು ಮಾರಾಟ ನಿಷೇಧ ನಿಯಮ.

ಈ ಹೊಸ ನಿಯಮ ಪ್ರಾಣಿಗಳ ರಕ್ಷಣೆಗೆಂದು ಮೋದಿ ...ರ್ಕಾರ ಹೇಳುತ್ತಿದ್ದರೂ ಚಡ್ಡಿಗಳ ಉದ್ದೇಶ ಇದರ ಮೂಲಕ ...ಲ್ಪಸಂಖ್ಯಾತರು ಮತ್ತು ದಲಿತರನ್ನು ಬಲಿ ...ಮಕೊಳ್ಳುವುದಾಗಿದೆ. ಆದರೆ ವಾಸ್ತವವಾಗಿ ಈ ಕ್ರಮವು ...ನ್ನ ರೈತರನ್ನೇ ದೊಡ್ಡ ಸಂಖ್ಯೆಯಲ್ಲಿ ಬಲಿ ...ದುಕೊಳ್ಳಲಿದೆ. ನಮ್ಮ ಗ್ರಾಮೀಣ ಜನ ...ನುವಾರುಗಳನ್ನು ಸಾಕುವುದು ಅವು ಪವಿತ್ರ ಎಂಬ ...ಬಿಕೆಯಿಂದಲ್ಲ, ಬದಲಾಗಿ ತಾವು ಬಿತ್ತಿದ ಬೆಳೆಗಳು ... ಬರುವತನಕ ದಿನನಿತ್ಯ ಒಂದಿಷ್ಟು ಕಾಸು ಕೈಯಲ್ಲಿ ...ಡಲಿ ಎಂಬ ಕಾರಣಕ್ಕೆ ದನ, ಎಮ್ಮೆ ಕಟ್ಟಿಕೊಂಡು ...ಲು ಮಾರುತ್ತಾರೆ. ಸಗಣಿಯನ್ನು ಗೊಬ್ಬರವಾಗಿ ...ಪಯೋಗಿಸುತ್ತಾರೆ. ಜಾನುವಾರು ಮುದಿಯಾದಾಗ ...ನ್ನು ಮಾರಿ, ಜೊತೆಗೊಂದಿಷ್ಟು ಹಣವನ್ನು ಸೇರಿಸಿ ...ಸ ಜಾನುವಾರು ಖರೀದಿಸುತ್ತಾರೆ. ಒಂದು ಅಂದಾಜಿನ ...ರ ಹೈನುಗಾರಿಕಾ ವಲಯದಲ್ಲಿ ಶೇ. 40 ಆದಾಯ ...ುವುದು ಮುದಿ ಜಾನುವಾರುಗಳ ಮಾರಾಟದಿಂದ. ...ಾಗಲೇ ನಮ್ಮ ಗ್ರಾಮೀಣ ಪ್ರದೇಶಗಳ ಆರ್ಥಿಕ ವ್ಯವಸ್ಥೆ ...ಹೋಗಿದೆ. ಅಂತಹದರಲ್ಲಿ ರೈತರು ಕೈಖರ್ಚಿಗೆಂದು ...ಕೊಂಡಿರುವ ಜಾನುವಾರುಗಳನ್ನು ಮಾರಾಟ ಮಾಡದಂತೆ ...ದರೆ ಅವರೆಲ್ಲ ಏನು ಮಾಡಬೇಕು? ನಾಟಿ ತಳಿಗಳಿಗಿಂತ ...ಚ್ಚು ಹಾಲು ಕೊಡುವ ಜರ್ಸಿ ಮತ್ತು ಎಚ್ಎಫ್ ...ಗಳಿಗೆ ಯಾವ ಉಪಯೋಗಕ್ಕೂ ಬಾರದ ಹೋರಿ ... ಹುಟ್ಟಿದರೆ ಅದನ್ನು ಏನು ಮಾಡಬೇಕು? ಭರ್ತಿ ...ಲ್ಲು, ಮೇವು ಕೇಳುವ ಅವುಗಳು ಸಾಯುವತನಕ ...ಪಿಗಳು ಅವನ್ನು ನೋಡಿಕೊಳ್ಳಬೇಕೆ? ಅದಕ್ಕೆಂದು ...ರು ಹಣವನ್ನು ಎಲ್ಲಿಂದ ತರಬೇಕು? ಹೋಗಲಿ, ...ತಹ ನಿರುಪಯುಕ್ತ ಪ್ರಾಣಿಗಳನ್ನು ಸಾಕಿದರೂ ಅವು ...ಗ ಏನು ಮಾಡಬೇಕು? ಇಂತಹ ಯಾವ ಪ್ರಶ್ನೆಗಳನ್ನೂ ...ಗಣನೆಗೆ ತೆಗೆದುಕೊಳ್ಳದ ಮೋದಿ ಸರ್ಕಾರ ರೈತರ ...ಟಿಕೆಗೆ ಕೊಡಲಿ ಏಟು ಕೊಟ್ಟಿದೆ.

...ಜಾನುವಾರುಗಳು ಬರೀ ಹೈನುಗಾರಿಕೆಗೆ ಮಾತ್ರ ...ಪಯುಕ್ತವಲ್ಲ. ಅವು ಆಹಾರ ಮತ್ತು ತೊಗಲು ...ದ್ಯಮೆಗಳಿಗೂ ಅತ್ಯವಶ್ಯಕ. ಮಾಂಸ ಮತ್ತು ಜಾನುವಾರು ...ದಾರರ ಸಂಘದ ವಕ್ತಾರ ಫೌಜಾನ್ ಅಲಾವಿ ಅವರು ...ುವ ಪ್ರಕಾರ "ಶೇ 90ರಷ್ಟು ಜಾನುವಾರುಗಳ ಮಾರಾಟ ...ಯುವುದೇ ಪ್ರಾಣಿಗಳ ಮಾರುಕಟ್ಟೆಗಳಲ್ಲಿ. ಅಂತಹ ...ುಕಟ್ಟೆಯಲ್ಲಿ ಮಾಂಸದ ಉದ್ದೇಶಕ್ಕಾಗಿ ಜಾನುವಾರು ...ರಾಟವನ್ನು ನಿಷೇಧಿಸಿದರೆ ದೇಶಾದ್ಯಂತ ಎರಡೂವರೆ ಕೋಟಿ ಜನ ನಿರುದ್ಯೋಗಿಗಳಾಗುತ್ತಾರೆ. ಅವರಲ್ಲಿ ಹೆಚ್ಚಾಗಿ ಮುಸಲ್ಮಾನರು ಮತ್ತು ದಲಿತರೇ ಇದ್ದಾರೆ."

ಒಂದು ಅಂದಾಜಿನ ಪ್ರಕಾರ ತೊಗಲು ಉದ್ಯಮದಲ್ಲಿ ಬರೋಬ್ಬರಿ ಎಂಟು ಕೋಟಿ ಜನ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮುದಿ ಜಾನುವಾರುಗಳನ್ನು ಮಾರಾಟ ಮಾಡಿದ ನಂತರ ಅವುಗಳ ಮಾಂಸ ಬಡವರಿಗೆ ಕಡಿಮೆ ವೆಚ್ಚದ ಆಹಾರವಾದರೆ, ಅವುಗಳ ಚರ್ಮ ತೊಗಲು ಉದ್ಯಮಕ್ಕೆ ಹೋಗುತ್ತವೆ. ಜಾನುವಾರು ಹತ್ಯೆಯನ್ನು ನಿಷೇಧಿಸಿದರೆ ಅದು ತೊಗಲು ಉದ್ಯಮದ ಮೇಲೂ ದೊಡ್ಡ ಪರಿಣಾಮ ಬೀರಲಿದೆ. ಈಗಾಗಲೇ ಮಹಾರಾಷ್ಟ್ರದಲ್ಲಿ ಗೋಹತ್ಯೆಯನ್ನು ನಿಷೇಧಿಸಿರುವುದರಿಂದ ಅಲ್ಲಿನ ಪ್ರಖ್ಯಾತ ಖೊಲ್ಲಾಪುರಿ ಚಪ್ಪಲಿ ಉತ್ಪಾದನಾ ವಲಯ ತತ್ತರಿಸಿಹೋಗಿದೆ. ಅಷ್ಟೇ ಅಲ್ಲ, ಗೋಹತ್ಯೆ ನಿಷೇಧದಿಂದಾಗಿ ಆ ರಾಜ್ಯದಲ್ಲಿ ಈಗ 'ಪವಿತ್ರ ಗೋವುಗಳಿಗೆ' ನಯಾಪೈಸೆಯ ಬೆಲೆಯೂ ಇಲ್ಲದಿರುವುದರಿಂದ ರೈತರು ಮುದಿ ದನಗಳನ್ನು ಕೊಟ್ಟಿಗೆಗಳಿಂದ ಓಡಿಸುತ್ತಿದ್ದಾರೆ. ಅವು ನೀರು ಮೇವೂ ಇಲ್ಲದೆ ಸಾಯುತ್ತಿದ್ದಾವೆ.



ಕೃಪೆ: ಸತೀಶ್ ಆಚಾರ್ಯ

ಗೋಶಾಲೆಗಳೂ ಅತಾರ್ಕಿಕವಾದದ್ದು. ಅಲ್ಲಿ ಮುದಿ ಜಾನುವಾರುಗಳನ್ನು ಸಾಕಲು ಬಹಳಷ್ಟು ಹಣ, ಸಿಬ್ಬಂದಿ ಬೇಕಾಗುತ್ತದೆ. ಅದನ್ನೆಲ್ಲ ತರುವುದು ಎಲ್ಲಿಂದ? ಸಗಣಿ ಗಂಜಲ ಮಾರಿ ಗಳಿಸಿದ ಹಣದಲ್ಲಿ ಗೋವುಗಳನ್ನು ಸಾಕಬಹುದು ಎನ್ನುವುದು ಪೆದ್ದುತನದ ಪರಮಾವಧಿಯಾಗುತ್ತದೆ. ಈಗ ಸರ್ಕಾರಿ ಶಾಲೆ ಮತ್ತು ಆಸ್ಪತ್ರೆಗಳ ದುಃಸ್ಥಿತಿಗಿಂತಲೂ ಈ ಗೋಶಾಲೆಗಳದ್ದಾಗುತ್ತದೆ.

ಆದರೆ ಮೋದಿ ಸರ್ಕಾರಕ್ಕೆ ಮತ್ತು ಮೋದಿ ಭಕ್ತರಿಗೆ ಇವ್ಯಾವುವೂ ಮುಖ್ಯವಲ್ಲ, ಬದಲಾಗಿ "ನಿಮ್ಮ ಹೆತ್ತ ತಾಯಿ ಮುದುಕಿ ಆದಳು ಎಂದಮಾತ್ರಕ್ಕೆ ಆಕೆಯನ್ನು ಮನೆಯಿಂದ ಓಡಿಸುತ್ತೀರಾ? ಕಟುಕರಿಗೆ ಮಾರುತ್ತೀರಾ?" ಎಂದು ಅಬ್ಬರಿಸುತ್ತಾರೆ. ಅವರು ಹಾಗೆ ಕೇಳುವಾಗ ತಮ್ಮ ಹೆತ್ತ ತಾಯಂದಿರಿಗೇ ತಾವು ಅವಮಾನ ಮಾಡುತ್ತಿದ್ದೇವೆ ಎಂಬ ಅರಿವೂ ಇರುವುದಿಲ್ಲ.

ಯಾಕೆಂದರೆ ಯಾರೂ ದನಗಳನ್ನು ಹಣ ಕೊಟ್ಟು ಮಾರುಕಟ್ಟೆಯಲ್ಲಿ ಖರೀದಿಸುವಂತೆ ಹೆತ್ತ ತಾಯಿಯನ್ನು ಖರೀದಿಸುವುದಿಲ್ಲ. ಯಾರೂ ಹೆತ್ತ ತಾಯಿಯ ಮೊಲೆಹಾಲನ್ನು ಪ್ರತಿ ನಿತ್ಯ ಕರೆದು ಮಾರುವುದಿಲ್ಲ, ಹಸು ಹಾಲು ಕೊಡುವುದನ್ನು ನಿಲ್ಲಿಸಿದಾಗ ಅದು ಮತ್ತೆ ಗರ್ಭ ಧರಿಸಿ, ಕರುವನ್ನು ಈದು ಹಾಲು ಕೊಡುವಂತಾಗಲಿ ಎಂದು ಅದಕ್ಕೆ ಕೃತಕವಾಗಿ ವೀರ್ಯದಾನ ಮಾಡಿಸುವಂತೆ ಅಥವಾ ಕಟ್ಟುಮಸ್ತಾದ ಹೋರಿಯೊಂದಿಗೆ ಕೂಡುವಂತೆ ಯಾರೂ ಹೆತ್ತ ತಾಯಿಗೆ ಮಾಡುವುದಿಲ್ಲ, ಆದ್ದರಿಂದ ಹಸುವನ್ನು ಮಾತೆ ಎಂದು ಕರೆದು ಹೆತ್ತ ತಾಯಿಗೆ ಹೋಲಿಸುವುದು ಧಾರ್ಮಿಕ ಹುಚ್ಚಾಟವಲ್ಲದೆ ಮತ್ತಿನ್ನೇನಲ್ಲ.

ಈಗಾಗಲೇ ಮೋದಿಯ ಈ ಕ್ರಮದ ವಿರುದ್ಧ ದೇಶದಾದ್ಯಂತ ವಿರೋಧ ವ್ಯಕ್ತವಾಗಿದೆ. ಸಿದ್ದರಾಮಯ್ಯ, ಪಿಣರಾಯಿ ವಿಜಯನ್, ಮಮತಾ ಬ್ಯಾನರ್ಜಿ ತರಹದ ಮುಖ್ಯಮಂತ್ರಿಗಳು ತಕರಾರು ಎತ್ತಿದ್ದಾರೆ. ಹಲವಾರು ಕಡೆ 'ಬೀಫ್ ಫೆಸ್ಟ್'ಗಳು ಜರುಗಿವೆ. ಮದ್ರಾಸ್ ಹೈಕೋರ್ಟ್ ಈ ಅಧಿಸೂಚನೆಗೆ ತಡೆಯಾಜ್ಞೆ ಕೊಟ್ಟಿದೆ. ಹಾಗೆಯೇ ಚೆನ್ನೈನಲ್ಲಿ ಸೂರಜ್ ಎಂಬ ವಿದ್ಯಾರ್ಥಿ ಅಂಬೇಡ್ಕರ್ ಪೆರಿಯಾರ್ ಸ್ಟಡಿ ಸರ್ಕಲ್ ಆಯೋಜಿಸಿದ್ದ 'ಬೀಫ್ ಫೆಸ್ಟ್'ನಲ್ಲಿ ಭಾಗವಹಿಸಿದ್ದಕ್ಕೆ ಎಬಿವಿಪಿ ಗೂಂಡಾಗಳು ಆತನ ಮೇಲೆ ದಾಳಿ ಮಾಡಿದ್ದಾರೆ. ಜಾನುವಾರು ಮಾರಾಟ ನಿಷೇಧ ಕಾಯಿದೆ ಜಾರಿಗೆ ಬರುವ ಮುನ್ನವೇ ಕಳೆದ ಎರಡು ವರ್ಷಗಳಲ್ಲಿ ದೇಶದಾದ್ಯಂತ ಹತ್ತಾರು ಜನ ಸ್ವಘೋಷಿತ ಗೋರಕ್ಷಕರ ದಾಳಿಗಳಿಗೆ ಗುರಿಯಾಗಿ ತಮ್ಮ ಪ್ರಾಣವನ್ನೇ ಕಳೆದುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಕಾಯಿದೆ ಜಾರಿಗೆ ಬಂದರೆ ಅಂತಹ ಕೊಲೆಗಳು ಖಂಡಿತವಾಗಿಯೂ ಹೆಚ್ಚಾಗುತ್ತವೆ.

ಸ್ವಘೋಷಿತ 'ಪ್ರಧಾನ ಸೇವಕ', 'ದೇಶಭಕ್ತ', 'ದೇಶೋದ್ಧಾರಕ' ಮೋದಿ ಯಾಕೆ ಕೋಟ್ಯಾಂತರ ಜನರ ಜೀವನೋಪಾಯಕ್ಕೆ ಅಪಾಯ ತಂದಿಡಬಲ್ಲ ಇಂತಹ ನಿಷೇಧಕ್ಕೆ ಮುಂದಾದ ಎಂಬ ಪ್ರಶ್ನೆ ಹಲವರನ್ನು ಕಾಡುತ್ತಿದೆ. ಸಗರಿ ಆರ್ ರಾಮಸಾದ್ ಎಂಬುವವರು 'ದಿವೈರ್.ಇನ್'ನಲ್ಲಿ ಬರೆದಿರುವ ಲೇಖನದ ಪ್ರಕಾರ "ಈಗ ಯೂರೋಪಿಯನ್ ಯೂನಿಯನ್, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಮತ್ತು ಅಮೆರಿಕ ದೇಶಗಳ ಖಾಸಗಿ ಕಂಪನಿಗಳು ತಮ್ಮಲ್ಲಿ ಅಗಾಧ ಪ್ರಮಾಣದಲ್ಲಿ ಲಭ್ಯವಿರುವ ಹಾಲಿನ ಪುಡಿಯನ್ನು ಭಾರತಕ್ಕೆ ರಫ್ತು ಮಾಡಲು ತುದಿಗಾಲ ಮೇಲೆ ನಿಂತಿವೆ. ಆದರೆ ಅದನ್ನು ಭಾರತೀಯ ಹೈನುಗಾರಿಕಾ ಸಂಘಟನೆಗಳು ವಿರೋಧಿಸುತ್ತಿವೆ." ಆದ್ದರಿಂದ ಮೋದಿ ಸಾಹೇಬ ಜಾನುವಾರು ಮಾರಾಟ ನಿಷೇಧದ ನೆಪದಲ್ಲಿ ಭಾರತದ ಹೈನುಗಾರಿಕೆ ಉದ್ಯಮವನ್ನೇ ನಾಶ ಮಾಡಿ ವಿದೇಶಿ ಕಂಪನಿಗಳಿಗೆ ಲಾಭ ಮಾಡಿಕೊಡಲು ಹೊರಟಿರುವುದು ಮೂರ್ಖನಿಗೂ ಅರ್ಥವಾಗುತ್ತದೆ. ಇದು ಮೋದಿಯ ದೇಶಸೇವೆಯ ವರಸೆ.

ಮೋದಿಯ ಈ ಕುತಂತ್ರ ಜಾರಿ ಆಗದಂತೆ ತಡೆಯಲು ಎಲ್ಲಾ ರಾಜ್ಯಗಳ ರೈತ ಸಂಘಟನೆಗಳು ಹೋರಾಟಕ್ಕೆ ಧುಮುಕಬೇಕಿದೆ. ಯಾಕೆಂದರೆ ಇದು ಕೇವಲ ಮುಸಲ್ಮಾನರ ಮತ್ತು ದಲಿತರ ವಿರುದ್ಧದ ಕಾಯಿದೆ ಅಲ್ಲ, ಹೆಚ್ಚಿನ ಸಂಖ್ಯೆಯಲ್ಲಿ ರೈತರಾಗಿರುವ ಹಿಂದೂಗಳನ್ನೇ ನಾಶ ಮಾಡುವ ಯೋಜನೆ. ■

...ದ ವಾರ ಉತ್ತರ ಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ ದಲಿತರ ಕೇರಿಗೆ ...ಟಿ ಕೊಡುವ ಮುನ್ನ ಅಲ್ಲಿನ ದಲಿತರಿಗೆ ಸೋಪು ಮತ್ತು ಶಾಂಪು ಪ್ಯಾಕೆಟ್‌ಗಳನ್ನು ...ಟ್ಟು ಸ್ವಚ್ಛವಾಗಿರುವಂತೆ ಅಧಿಕಾರಿಗಳು ಆದೇಶಿಸಿದ್ದರು. ಇದನ್ನು ವಿರೋಧಿಸಿ ...ಸಂಗಿ *ವಾಂಖೇಡೆ* ಎಂಬುವವರು 'ಹೀಯರ್ ಈಸ್ ಮೈ ಆಫರ್' ಎಂಬ ...ವನ ಬರೆದಿದ್ದರು. ಅದರ ಅನುವಾದ ಇಲ್ಲಿದೆ.

...ಮನುವಿಗೊಂದು ಉಡುಗೊರೆ



...ನ್ನ ಅಸ್ಪೃಶ್ಯನೆಂದ ಆ ಮನುವಿಗೆ
...ನನ್ನದೊಂದು ಉಡುಗೊರೆಯಿದೆ
...ನಿಷ್ಮ ಮತಿಗೆಟ್ಟ ಮನಸ್ಸುಗಳು
...ಕುಲದ ಬಲೆಯನು ಹೆಣೆದು
...ನಮ್ಮನ್ನು ಬಹಿಷ್ಕೃತಗೊಳಿಸಿಹವು
...ನಿಷ್ಮ ಮನದ ಕಶ್ಮಲದಿಂದಲ್ಲ
...ತುಳಿತಕ್ಕೊಳಗಾದ
...ನಮ್ಮ ಮೈ ಗಾಯಗಳಿಂದ
...ಹೊಳೆಯುತಿಹವು

...ನ್ನ ನಾಯಕನೊಲಿಸಲು
...ಶಾಂಪು ಸಾಬೂಣಗಳ
...ನೀಡಿರುವೆ ನಮಗಿಂದು
...ಎಂದಾದರೂ ತೊಳೆದಿರುವೆಯಾ
...ನಿಷ್ಮ ಹೊಲಸು ನಾಲಗೆಗಳನ್ನು
...ಅಸ್ಪೃಶ್ಯತಾಚಾರ

ಅತ್ಯಾಚಾರಕ್ಕೆ ಕರೆಕೊಟ್ಟ
ಆ ದುರ್ನಾತದ ನಾಲಗೆಗಳನ್ನು?
ವರ್ಣಾಶ್ರಮ, ಮನುವಾದಗಳ
ಬೋಧಿಸಿದ ಆ ಮನು ಮೇದಸ್ಸುಗಳನ್ನು?

ನಿನ್ನ ಉಡುಗೊರೆಯಲ್ಲಿ
ನನ್ನ ಘನತೆಯನೆ ಧಿಕ್ಕರಿಸಿರುವ
ನನ್ನ ಉಡುಗೊರೆಯಿದೋ
ನಿನ್ನಾತ್ಮಗಳ ತಿರಸ್ಕಾರಕ್ಕೆ!

ನನ್ನ ಬಾಬಾಸಾಹೇಬರ ಅನುಯಾಯಿಗಳೇ
ನಮ್ಮ ನಿತ್ಯ ಜಾಡಮಾಲಿಗಳು
ತುಳಿತಕ್ಕೊಳಗಾಗಿ ಬಹಿಷ್ಕೃತರಾದ
ನಮ್ಮ ಗಾಯಗಳ ಶಮನಗೊಳಿಸಿಹರು!
ನಿಮ್ಮ ಕರುಣೆಯ ಅಗತ್ಯವಿಲ್ಲ ನಮಗೆ!
ನಿನಗೂ ಆ ಸ್ನಾನದ ಅಗತ್ಯವಿದೆ
ನಮ್ಮ ಮೊರೆವ ವಿಪ್ಲವಗಳಲ್ಲಿ
ಸರ್ವೋದಯ ಸಮಾನತೆಯ
ಸಮತಂತ್ರಗಳ ಉದ್ಘೋಷಣೆಗಳ ನೀಡುತಿಹೆವು!

ಜಗದ ಝಾಡಮಾಲಿಗಳಾದವರು ನಾವು
ಎರಡು ಹೊತ್ತಿನ ರೊಟ್ಟಿಗಾಗಿ
ಈ ಜನತಂತ್ರದಲ್ಲಿ
ನಾವು ಬರಿಹೊಟ್ಟೆಯಲಿ ಮಲಗಿದ ದಿನ
ನಿಮ್ಮ ಅಜ್ಞಾನಕ್ಕೆ ಸಾಬೂಣದ ಶಾಂಪುಗಳೇ
ಅನ್ನ ಒದಗಿಸುವವು!

ಆ ನಿಮ್ಮ ನಾಯಕನು ಬಂದಿಹನು
ನಾಡಿನ ಗಮನ ಸೆಳೆಯಲೆಂದು
ಅಪ್ಪಣೆಯಾಗಿದೆ ನಮಗೆಲ್ಲಾ
ಸ್ವಚ್ಛವಾಗಿ ನಿಲ್ಲಿರೆಂದು
ಮಿರಮಿರನೆ ಮಿನುಗಿರೆಂದು!
ಏನಾಗುವುದೆಂದು ಬಲ್ಲಿರಾ
ಈ ನಮ್ಮ ಮೌನ
ಆಸ್ಫೋಟನೆಗೊಳ್ಳುವಂದು!?

ಚಿತ್ತೈಸು ನಮ್ಮ ಗುಡಿಸಲಿಗೆ
ಓ ನಾಡ ದೊರೆಯೇ!
ನಿನ್ನ ಗರ್ಭಗುಡಿಗಿಂತಲೂ
ಶುದ್ಧವಾಗಿಹುದು
ಮನದ ಕಶ್ಮಲವನೊಗೆದೊಮ್ಮೆ
ಮಾತನಾಡು
ಮುಖವರಳಿಸು ಒಮ್ಮೆ
ನಿನ್ನೆದೆಯಲ್ಲಿ ನರಕನರ್ತನ ಮಾಡುತ್ತಿರುವ
ಆ ಮನುವನ್ನು ಸುಟ್ಟು
ಅದೋ ಬೆಳಗಾಗಿಹುದು ಇಲ್ಲಿ
ಇದು ನನ್ನ ಮೌನ ಮುರಿಯುವ ಸಮಯ!


ಹೊರಟುಹೋಗುವುದಕ್ಕೆ ಮುನ್ನ
ತಗೋ ಈ ಬುದ್ಧ ಅಂಬೇಡ್ಕರ್ ಎಂಬ
ಸಾಬೂಣಗಳನ್ನು
ಜಾತಿವಿಜಾತಿಯ ತ್ಯಜಿಸು
ಮನು ತುಂಬಿದ ಕುತರ್ಕವನು
ತಲೆಯಿಂದ ಇಳಿಸು
ಮನದ ದಾಸ್ಯದಿಂದ ಹೊರಗೆ ಬಾ
ನಿನ್ನೊಳಗಿನ ದೇವರನ್ನೊಮ್ಮೆ ತೊಳೆದು
ಸ್ವಚ್ಛಗೊಳಿಸು
ನಮ್ಮ ಸೂರ್ಯ ನಿಮ್ಮನ್ನು ಕೂಡಾ
ಬೆಳಗುತಿರುವನಲ್ಲ
ಈ ಜಗಕೆ ಎರಡೆರಡು ಸೂರ್ಯರ
ಅವಶ್ಯಕತೆಯಿಲ್ಲ!


ಅನುವಾದ: ಪುನೀತ್ ಅಪ್ಪು


ದಕ್ಷಿಣ ಕನ್ನಡ


ಸಂಘ ಪರಿವಾರದಲ್ಲಿ ಟಿಕೆಟ್ ಪಂದ್ಯಾಟ!


ದಕ್ಷಿಣ ಕನ್ನಡವೆಂದರೆ ಹಿಂದೂತ್ವದ ಶಕ್ತಿಕೇಂದ್ರವೆಂದು ಬೀಗುವ ಸಂಘಿ ಸೈತಾನರಿಗೆ ಮತ್ತೊಮ್ಮೆ ಮಣ್ಣು ಮುಕ್ಕಿದರೆ ಕೇಸರಿ ಬಾವುಟ ಕೆಳಗಿಳಿಸಿ ಶಾಶ್ವತವಾಗಿ ಕಟ್ಟಿಡಬೇಕಾಗ ಬಹುದೆಂಬ ಭಯ ಕಾಡುತ್ತಿದೆ. ಕಳೆದ ನಾಲ್ಕು ವರ್ಷದ ಕಾಂಗ್ರೆಸ್ ದರ್ಬಾರಿನಲ್ಲಿ ಹಿಂದೂತ್ವದ ಹೇಯ-ಬರ್ಬರ ಬೀದಿ ನಾಟಕಗಳೇನೂ ಕಮ್ಮಿಯಾಗಿಲ್ಲ. ದಕ್ಷಿಣ ಕನ್ನಡಕ್ಕೆ ಬೆಂಕಿ ಇಕ್ಕುವ, ರಕ್ತ ಹರಿಸುವ ಮಾತುಗಾರಿಕೆ ನಳಿನ್, ಕಲ್ಲಡ್ಕ ಭಟ್ಟ, ಕಾರಂತ್, ಚಕ್ರವರ್ತಿ ವಗೈರೆ ದೇಶಭ್ರೋಕ್ತರಿಂದ ನಡೆದೇ ಇದೆ.
















ಕರಾವಳಿಯ ದಕ್ಷಿಣ ಕನ್ನಡದಲ್ಲಿ ಅಸೆಂಬ್ಲಿ ಎಲೆಕ್ಷನ್ ತೂಫಾನ್ ಏಳುವ ಎಲ್ಲ ಸೂಚನೆಗಳು ಗೋಚರಿಸ ಲಾರಂಭಿಸಿದೆ. ಲಾಟ್-ಫುಟ್ ರಾಜಕಾರಣದ ಎತ್ತರೆತ್ತರದ ತೆರೆಗಳು ಈಗಲೇ ದಕ್ಷಿಣ ಕನ್ನಡಕ್ಕೆ ಅಪ್ಪಳಿಸಲು ಶುರುವಾಗಿದೆ. ದಕ್ಷಿಣ ಕರಾವಳಿಯನ್ನು ಮತಾಂಧ ಆಡಂಬೋಲ ಮಾಡಿಕೊಂಡಿರುವ ಸಂಘಿ ಸಂಚುಕೋರರಿಗೆ 2018ರ ಚುನಾವಣೆ 'ಧರ್ಮ' ಸಂಕಟಕ್ಕೆ ಸಿಲುಕಿಸಿಬಿಟ್ಟಿದೆ. ಕಳೆದ ಬಾರಿ 8 ಕ್ಷೇತ್ರದಲ್ಲಿ ಸುಳ್ಯ ಒಂದನ್ನು ಬಿಟ್ಟರೆ ಮತ್ತೆಲ್ಲಿಯೂ ಚೆಡ್ಡಿ ರಿಂಗ್ ಮಾಸ್ಟರ್ ಕಲ್ಲಡ್ಕ ಪ್ರಭಾಕರ್ ಭಟ್, ಹಿಂಸೋನ್ಮಾದಿ ಜಗದೀಶ್ ಕಾರಂತ್, ಬೆಂಕಿ ಭಂಡ ನಳಿನ್ ಕುಟೀಲ್ ಅಂಡ್ ಕಂಪನಿಗೆ ಗೆಲ್ಲಲು ಸಾಧ್ಯವಾಗದೆ ಮಕಾಡೆ ಮಲಗಿಬಿಟ್ಟಿತ್ತು.

ಹಿಂದಾದ ಮುಖಭಂಗಕ್ಕೆ ಮುಯ್ಯಿ ತೀರಿಸಿಕೊಳ್ಳ ಬೇಕಾದ ದರ್ದಿಗೆ ಹಿಂದೂತ್ವದ ಹರಾಮಿ ಕೂಟವೀಗ ಬಿದ್ದಿದೆ. ಅಮಾಯಕ ಶೂದ್ರರ ಕಾಲಾಳಾಗಿಸಿಕೊಂಡು ಮತಾಂಧ ಕಾಳಗ ಮಾಡಿಸಿ ದುರ್ಲಾಭ ಎತ್ತುತ್ತ ಬಂದ ಪುರೋಹಿತಶಾಹಿ ಚೆಡ್ಡಿ ಸಂತಾನ 2013ರ ಮುಂಚಿನ ವೈಭವ ಕಾಣುವ ರಹಸ್ಯ ಕಾರ್ಯಾಚರಣೆ ನಡೆಸುತ್ತಿದೆ. ದಕ್ಷಿಣ ಕನ್ನಡವೆಂದರೆ ಹಿಂದೂತ್ವದ ಶಕ್ತಿಕೇಂದ್ರವೆಂದು ಬೀಗುವ ಸಂಘಿ ಸೈತಾನರಿಗೆ ಮತ್ತೊಮ್ಮೆ ಮಣ್ಣು ಮುಕ್ಕಿದರೆ ಕೇಸರಿ ಬಾವುಟ ಕೆಳಗಿಳಿಸಿ ಶಾಶ್ವತವಾಗಿ ಕಟ್ಟಿಡಬೇಕಾಗ ಬಹುದೆಂಬ ಭಯ ಕಾಡುತ್ತಿದೆ. ಕಳೆದ ನಾಲ್ಕು ವರ್ಷದ ಕಾಂಗ್ರೆಸ್ ದರ್ಬಾರಿನಲ್ಲಿ ಹಿಂದೂತ್ವದ ಹೇಯ-ಬರ್ಬರ ಬೀದಿ ನಾಟಕಗಳೇನೂ ಕಮ್ಮಿಯಾಗಿಲ್ಲ, ದಕ್ಷಿಣ ಕನ್ನಡಕ್ಕೆ ಬೆಂಕಿ ಇಕ್ಕುವ, ರಕ್ತ ಹರಿಸುವ ಮಾತುಗಾರಿಕೆ ನಳಿನ್, ಕಲ್ಲಡ್ಕ ಭಟ್ಟ, ಕಾರಂತ್, ಚಕ್ರವರ್ತಿ ವಗೈರೆ ದೇಶಭ್ರೋಕ್ತರಿಂದ ನಡೆದೇ ಇದೆ.

ಬಿಜೆಪಿ ಗ್ರಾಪಂ-ತಾಪಂ-ಜಿಪಂ ಚುನಾವಣೆಯಲ್ಲಿ ಕಾಂಗ್ರೆಸ್‌ಗಿಂತ ಹೆಚ್ಚು ಸ್ಥಾನ ಗಳಿಸಿದೆ; ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಭರ್ಜರಿ ಮತ ಬಾಚಿದೆ. ಆದರೂ ಸಂಘಿ ಸಂಘಟನೆ ಸರದಾರರಿಗೆ ಬರುವ ಅಸೆಂಬ್ಲಿ ಹೋರಾಟದಲ್ಲಿ ಗೆಲ್ಲುವ ನೈತಿಕ ಸ್ಥೈರ್ಯ-ಕೆಚ್ಚು ಎರಡೂ ಇಲ್ಲದಾಗಿದೆ! ಗೋಪ್ರಾಣ, ಹಿಂದೂ ಹೆಣ್ಣಿನ ಮಾನ ಪಣಕ್ಕಿಟ್ಟು ಮಸಲತ್ತು ಮಸೆದು ಹಿಂದೂಗಳ ಪ್ರಚೋದಿಸಿದರೂ ಜನ ಮನ ಗೆಲ್ಲಲು ಆಗುತ್ತಿಲ್ಲ, ಕೌ ಬ್ರಿಗೇಡ್ ರಕ್ಕಸರಿಗೆ ಹಿಂದೂಗಳೇ ಬಲಿಯಾಗುತ್ತಿದ್ದಾರೆ. ಸಂಘ ಪರಿವಾರದ ಬುದ್ಧಿಪೂರ್ವಕ ಮಿಸ್ಟೇಕ್‌ಗೆ ಹರೀಶ್ ಪೂಜಾರಿ, ಪ್ರಶಾಂತ ಪೂಜಾರಿಯಂಥ ಹಿಂದೂ ಹುಡುಗರ ಪ್ರಾಣಹರಣವಾಗಿದೆ!

ಕಲ್ಲಡ್ಕ-ಕಾರಂತ-ಕುಟೀಲನಂಥ ನಾಯಕಾಗ್ರೇಸರ ಕುಚೋದ್ಯಕ್ಕೆ, ಪ್ರಚೋದನೆಗೊಂಡು ಹೋಮ್‌ಸ್ಟೇ ದಾಳಿ, ಚರ್ಚ್ ದಾಳಿ, ಪಬ್ ದಾಳಿ ಮಾಡಿದ ಹುಂಬ ಹಿಂದೂ ಹುಡುಗರೀಗ ಜೈಲು ಪಾಲಾಗಿ ಪಡಬಾರದ ಪಾಡು ಪಡುತ್ತಿದ್ದಾರೆ. ಬಿಜೆಪಿ ಅಧಿಕಾರದಲ್ಲಿದ್ದಾಗಲೇ ಹಿಂದೂತ್ವಕ್ಕೆ 'ಬೆಲೆ' ಸಿಗಲಿಲ್ಲ, ತಮ್ಮನ್ಯಾರೂ ಬಚಾಯಿಸಲಿಲ್ಲ ಎಂಬ ಸಿಟ್ಟು ಶೂದ್ರ ಭಜರಂಗಿ ಪಡೆಯಲ್ಲಿದೆ. ಇವರೆಲ್ಲ ಇವತ್ತಿಗೂ ಕಲ್ಲಡ್ಕ, ಕಾರಂತ್, ನಳೀನ್, ಸದಾನಂದ ಗೌಡ, ಪುರಾಣಿಕ್.... ವಗೈರೆ 'ಧರ್ಮಾತ್ಮರ' ಬಗ್ಗೆ ಅನುಮಾನ ಪಡುತ್ತಿದ್ದಾರೆ!

ಬಿಜೆಪಿ ಅಧಿಕಾರದಲ್ಲಿದ್ದಾಗ ನಡೆದ ಬ್ರಹ್ಮಾಂಡ ಭ್ರಷ್ಟಾಚಾರ ಹಿಂದೂತ್ವದ ಹುಡುಗರ ಬಾಯಿ ಬಂದ್ ಮಾಡಿದೆ. ಹೀಗಾಗಿ ಜಿಲ್ಲೆಯ ಬಿಜೆಪಿ-ಆರ್‌ಎಸ್‌ಎಸ್ ಹೆಡ್ ಮಾಸ್ತರ್‌ಗಳಿಗೆ ಮತ್ತೆ ಬಿಜೆಪಿ ಮೆರೆಯಬಹುದೆಂಬ ಆತ್ಮವಿಶ್ವಾಸವೇ ಇಲ್ಲದಾಗಿದೆ. ಆದರೂ ಮೋದಿ ಮೋಡಿಯ ಭ್ರಮೆಗೆ ಬಿದ್ದಿರುವ ಪುಢಾರಿಗಳ ಎಮ್ಮೆಲ್ಲೆಗಿರಿ ತೆವಲುಗಾರಿಕೆಯಿಂದಾಗಿ ಸಂಘಪರಿವಾರದಲ್ಲಿ ಟಿಕೆಟ್ ಪಂದ್ಯಾವಳಿ ಒಂದರ ಹಿಂದೊಂದರಂತೆ ನಡೆಯುತ್ತಿದೆ.

ನೇತ್ರಾವತಿ ತಿರುವು ಯೋಜನೆ ಮುಂದಿಟ್ಟುಕೊಂಡು ಬಿಜೆಪಿಗರು ಮಾಡಿದ ಬಯಲಾಟ ಭೂಮ್‌ರಾಂಗ್ ಆಗಿದೆ! ನೇತ್ರಾವತಿ ಯೋಜನೆ ಬಗ್ಗೆ ಕೇಂದ್ರ ಮಂತ್ರಿ ಹಲ್ಮುಖಿ ಸದಾಗೌಡ, ಕೂಗುಮಾರಿ ಸಂಸದೆ ಶೋಭಾ ಕರಂದ್ಲಾಜೆ, ಬೆಂಕಿ ನವಾಬ ಕುಟೀಲನಂಥ ದೊಡ್ಡವರ ಸಣ್ಣತನ ಬಿಜೆಪಿಯನ್ನು ಲಗಾಡಿ ತೆಗೆಸಿದೆ. ಹಾಗಂತ ಜಿಲ್ಲೆಯ ಕಾಂಗ್ರೆಸೇನೂ ಸುಭದ್ರ ಸ್ಥಿತಿಯಲ್ಲಿಲ್ಲ. ಅರಳು ಮರಳು ಜನಾರ್ದನ ಪೂಜಾರಿ ಸ್ವ-ಪಕ್ಷಕ್ಕೆ ಸಿಕ್ಕಸಿಕ್ಕಲ್ಲಿ ಸಾಕಷ್ಟು ಹಾನಿ ಮಾಡುತ್ತಿದ್ದಾರೆ. ಮತ್ತೊಂದೆಡೆ ಮೊಯ್ಲಿ ಮಹಾತ್ಮ ದೂರದಿಂದಲೇ ಇಲ್ಲಿಯ ಕಾಂಗ್ರೆಸ್ ಒಳಗೆ ಕೈಯಾಡಿಸಿ ರಾಡಿಯೆಬ್ಬಿಸಿಬಿಟ್ಟಿದ್ದಾರೆ.

ಏಳು ಕಾಂಗ್ರೆಸ್ ಶಾಸಕ ಸಾಹೇಬರಲ್ಲಿ ಮೂವರು ಗೂಟದ ಕಾರಲ್ಲಿ ಅಂಡಲೆಯುತ್ತಿದ್ದಾರೆ. ಒಬ್ಬ ಮಂತ್ರಿಗಿರಿ ಮೂರು ವರ್ಷ ಅನುಭವಿಸಿ ಈಗ 'ಖಾಲಿ' ಇದ್ದಾನೆ. ಈ ರಮಾನಾಥ ರೈ ಯು.ಟಿ. ಖಾದರ್, ಅಭಯಚಂದ್ರ ಜೈನ್, ಶಕುಂತಲಾ ಶೆಟ್ಟಿಗಳಿಂದ ಕಾಂಗ್ರೆಸ್‌ಗಾದ ಲಾಭ ಅಷ್ಟಕ್ಕಷ್ಟೇ. ಇದರ ಅಧಿಕಾರ ಬಲ ಸ್ವ-ಕ್ಷೇತ್ರಕ್ಕಷ್ಟೇ ಸೀಮಿತವಾಗಿಹೋಗಿದೆ. ಸ್ವ-ಪಕ್ಷ ಕಟ್ಟುವ ಸೋಷಿಯಲ್ ಇಂಜಿನಿಯರಿಂಗ್ ಕಲೆ ಕಾಂಗ್ರೆಸಿಗರಲ್ಲಿ ಇಲ್ಲ, ಕಾಂಗ್ರೆಸ್‌ಗೆ ಆದರ ಅಧಿಕಾರಸ್ಥ ಮಂತ್ರಿ-ಶಾಸಕ-ಎಮ್ಮೆಲ್ಸಿ-ನಿಗಮ-ಮಂಡಳಿ ಪೀಠಸ್ಥರೇ ಒಂಥರಾ ಗೆದ್ದಲಿನಂತಾಗಿದ್ದಾರೆ. ಇಡೀ ಜಿಲ್ಲೆಯಲ್ಲಿ ಹಾಗೇ ಸುಮ್ಮನೆ ಒಂದು ಸುತ್ತು ಹಾಕಿದರೆ ಹಾಲಿ ಶಾಸಕರ, ಭಾವೀ ಶಾಸಕನಾಗುವ ತೆವಲಲ್ಲಿ ನಿದ್ದೆಗೆಡುತ್ತಿರುವವರ ಜಾತಕ ಕಾಣಿಸುತ್ತದೆ; ಪ್ರಬಲ ಎದುರಾಳಿ ಬಿಜೆಪಿ ಮತ್ತು ಕಾಂಗ್ರೆಸ್ ಸಮತೂಕ-ತಾಕತ್ತಿನಲ್ಲಿರುವುದು ಅರ್ಥವಾಗುತ್ತದೆ. ಜಿಲ್ಲೆಯ ಎಂಟೂ ಅಸೆಂಬ್ಲಿ ಕ್ಷೇತ್ರದ ಸದ್ಯದ ರಾಜಕೀಯ ರಂಗತಾಲೀಮಿನ ಒಂದು ನೋಟ ಇಲ್ಲಿದೆ...

ಮೂಡಬಿದಿರೆ

ದಕ್ಷಿಣ ಕನ್ನಡದಲ್ಲಿ ಎಂದೆಂದೂ ಬಿಜೆಪಿ ಗೆಲ್ಲದ ಕ್ಷೇತ್ರವೆಂದರೆ ಈ ಮೂಡಬಿದಿರೆ. ಬಿಜೆಪಿ ಭೂಪರು ಮೂಡಬಿದಿರೆಯನ್ನು ಕಮ್ಯುನಲ್ ಕಣವಾಗಿಸಿ ಗೆಲ್ಲಲು ಕರಾಮತ್ತು ಮಾಡಿದಂತೆಲ್ಲ ಎಡವಿ ಬೀಳುತ್ತಿದ್ದಾರೆ. ಭಜರಂಗದಳದ ಭಯಂಕರ ಲೀಡರ್ ಆಗಿದ್ದ ಸುಖಾನಂದ ಶೆಟ್ಟಿ 'ಬಲಿದಾನ' ಆಗಿದೆ; ಈಚೆಗಷ್ಟೇ ದನ ಸಾಗಾಟಗಾರರ ಅಡ್ಡ ಹಾಕುವ ಕಸುಬುದಾರರ ಮುಂದಾಳಾಗಿದ್ದ ಬಿಲ್ಲವರ ಹುಡುಗನೊಬ್ಬನ ಆಹುತಿಯೂ ಆಗಿದೆ. ಇದರಿಂದೆಲ್ಲ ಬಿಜೆಪಿಗೆ ಲಾಭವಾಗುವ ಲಕ್ಷಣವಿಲ್ಲ. ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ಧ್ವಜ ಹಾರಿಸಿದ 'ಸಂಘಿ ಸಾಹಸಿ' ಸತ್ಯಜಿತ್ ಸುರತ್ಕಲ್ ಎಂಬ ಕೇಬಲ್ ದಂಧೆ ದೊರೆ ಬಿಜೆಪಿ ಟಿಕೆಟ್‌ಗೆ ಕಟಿಪಿಟಿ ನಡೆಸಿದ್ದಾನೆ. ಹಿಂದೆ ಹಲವು ಬಾರಿ ಇದೇ ಮೂಡಬಿದ್ರೆ, ಪಕ್ಕದ ಸುರತ್ಕಲ್ ಕ್ಷೇತ್ರ ಬಿಜೆಪಿ ಟಿಕೆಟ್ ಟ್ರೇನ್ ತಪ್ಪಿಸಿಕೊಂಡಿರುವ ಸತ್ಯಜಿತ್ ಬೆನ್ನಿಗೆ ಭಜರಂಗದಳವಿದೆ. ಆದರೆ ಕಾರಂತ-ಕಲ್ಲಡ್ಕರಿಗೆ ಈ ಶೂದ್ರನಿಗೆ ಚಾನ್ಸ್ ಕೊಡುವ ಮನಸ್ಸಿಲ್ಲ.

ಹಿಂದೆಲ್ಲ ಸೋತ ಜಗದೀಶ್ ಅಧಿಕಾರಿ ಎಂಬ ಪೊಕ್ಕು ಪುಢಾರಿ, ಪೊಕ್ಕು ಪುಢಾರಿ ಉಮಾನಾಥ ಕೋಟ್ಯಾನ್ ಆಸೆಗಣ್ಣು ಬಿಡುತ್ತಿದ್ದಾರೆ. ಎಂಪಿಗಳಿಗೆ ಅಸೆಂಬ್ಲಿ ಟಿಕೆಟ್ ಬಿಜೆಪಿ ಕೊಡೋದಾದ್ರೆ ನಾನೇ ಬಿದ್ರೆಯ ಕ್ಯಾಂಡಿಡೇಟ್ ಅಂತಿದ್ದಾನೆ ಬೆಂಕಿ ನವಾಬ ಕುಟೀಲು. ಸಂಘಿ ಯಜಮಾನರಿಗೇ ಮೂಡಬಿದಿರೆ ಬಿಡಿಸಲಾಗದ ಒಗಟಾಗಿದೆ. ಇಂತಿಪ್ಪ ಬಿದ್ರದ ಟಿಕೆಟ್ ಗೊಂದಲ ಬಿಜೆಪಿಗರಿಗೆ ದೊಡ್ಡ ತಲೆನೋವೇ. ಬಿಜೆಪಿಯ ದಿವಾಳಿಕೋರತನವೋ ಅಥವಾ ಕ್ಷೇತ್ರದ ಜನರ ಜಾತ್ಯತೀತ ಮನೋಭಾವವೋ ಗೊತ್ತಿಲ್ಲ, ಕಾಂಗ್ರೆಸ್‌ನ ಅಭಯಚಂದ್ರ ಜೈನ್ ಎಂಬ ಜೈನ ಪಾಳೇಗಾರಿಕೆ ಪಳಿಯುಳಿಕೆ ಮೂಡಬಿದ್ರೆಯಲ್ಲಿ ಸತತ ಒಂದೂ ಮುಕ್ಕಾಲು ದಶಕದಿಂದ ಸಾಮ್ರಾಜ್ಯ ಸ್ಥಾಪಿಸಿಕೊಂಡು ಕುಂತಿದ್ದಾನೆ. ಹಸೀ-ಹಸೀ ಹುಂಬನಾದ ಅಭಯ್ ತನ್ನ ಕುಸ್ತಿ ಕಲೆ ಕ್ಷೇತ್ರ ಅವಾಯಕರ ಮೇಲೆ ಪ್ರದರ್ಶಿಸಿ 'ಜನಪ್ರಿಯತೆ' ಹೆಚ್ಚಿಸಿಕೊಂಡಿದ್ದಾನೆ.

ಕ್ಷೇತ್ರದಲ್ಲಿ ತನ್ನ ಬಗೆಗಿರುವ ಭಾವನೆ ಈ ಮಾಜಿ ಮಂತ್ರಿಗೆ ಸರಿಯಾಗಿ ಅರ್ಥವಾಗಿರಬೇಕು. ಹಾಗಾಗಿ ಒಂದು ವರ್ಷದ ಹಿಂದೆ ಅಂದರೆ ಮಂತ್ರಿಯಾಗಿದ್ದಾಗಲೇ ಮತ್ತೆ ಮೂಡಬಿದ್ರೆಯಿಂದ ಎಮ್ಮೆಲ್ಲೆಗಿರಿಗೆ ಸ್ಪರ್ಧಿಸದ ನಿರ್ಧಾರಕ್ಕೆ ಬಂದಿದ್ದ. ಚುನಾವಣೆ ಇನ್ನೇನು ಎಂಟ್ಹತ್ತು ತಿಂಗಳಿರುವ ಈ ಹೊತ್ತಲ್ಲಿ ಅಭಯ್‌ಗೆ ಮತ್ತೆ ಹುಕ್ಕಿ ಬಂದಂತಿದೆ. ಕ್ಷೇತ್ರದಾದ್ಯಂತ ಅಂಡಲೆಯಲು ಶುರು ಮಾಡಿದ್ದಾನೆ. ಮೊಯ್ಲಿ ಮಹಾತ್ಮ ಸಿಎಂ ಆಗಿದ್ದಾಗ ಮಾಲತಿ ಮೊಯ್ಲಿಯ ಕಿಚನ್ ಕ್ಯಾಬಿನೆಟ್ ಸೇರುವ ಮೂಲಕ ಪ್ರಸಿದ್ಧಿಗೆ ಬಂದ ಅಭಯ್ ಈ ಬಾರಿ ಗೆಲ್ಲೋದು ಅಷ್ಟು ಸುಲಭವೇನಲ್ಲ. ಬಿಲ್ಲವರ ಬಾಹುಳ್ಯದ ಮೂಡಬಿದ್ರೆ-ಮುಲ್ಕಿ ಕ್ಷೇತ್ರದ ಕ್ಯಾಂಡಿಡೇಟ್ ಕಾಂಗ್ರೆಸ್ ಬದಲಿಸುವುದು ಅನಿವಾರ್ಯ. ಇದು ಆ ಪಕ್ಷದ ಹಿರಿಯರಿಗೂ ಅರ್ಥವಾಗಿದೆ. ಹಾಗಾಗಿಯೇ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್ ಮಟ್ಟುರನ್ ಕ್ಯಾಂಡಿಡೇಟ್ ಮಾಡುವ ಚರ್ಚೆ ತಣ್ಣಗೆ ನಡೆದಿದೆ. ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಮಿಥುನ್ ರೈ ಎಂಬ ಬಂಟರ ತುಂಟ ತಾನೂ ಒಂದು ಕೈ ನೋಡುವ ಉಮೇದಿಯಲ್ಲಿದ್ದಾನೆ.

ಮಂಗಳೂರು ಉತ್ತರ

ಈ ಕ್ಷೇತ್ರ ಕಾಂಗ್ರೆಸ್ ಕೈಲಿದೆ. ಮೊಯ್ದೀನ್ ಬಾವಾ ಶಾಸಕನಾಗಿ ಕಾಂಗ್ರೆಸ್ ಮತ್ತು ಕ್ಷೇತ್ರ ಎರಡರಲ್ಲೂ ಬೇರು ಬಿಳಲು ಬಿಟ್ಟು ಬೆಳೆದಿದ್ದಾರೆ. ಕಮ್ಯುನಲಿ ಸೆನ್‌ಸೇಟಿವ್ ಕ್ಷೇತ್ರವಾದ ಮಂಗಳೂರು ಉತ್ತರ (ಸುರತ್ಕಲ್) ಸಂಘಿಗಳ ಭರವಸೆಯ ಕ್ಷೇತ್ರದಲ್ಲಿ ಒಂದು. ವಿಧಾನಸಭೆ ಅಧಿವೇಶನದಲ್ಲಿ ಬ್ಲೂಫಿಲಂ ನೋಡಿದ ಬಿಜೆಪಿಯ ಬ್ಲೂಬಾಯ್ಸ್‌ತ್ರಯಿರಲ್ಲಿ ಒಬ್ಬ ಸದ್ರಿ ಸುರತ್ಕಲ್‌ನ ಮಾಜಿ ಶಾಸಕ-ಮಾಜಿ ಮಂ ಕೃಷ್ಣ ಪಾಲೇಮಾರ್. ಬಿಲ್ಡರ್ಸ್ ಮಾಫಿಯಾ- ರಿಯಲ್ ಎಸ್ಟೇಟ್ ಗ್ಯಾಂಗ್‌ನ ಕಿಂಗ್‌ಪಿನ್‌ನಂತಿರುವ ಪಾಲೇಮಾ ಎಂದರೆ ಸ್ಥಳೀಯ ಸೂರಿಲ್ಲದ ಬಡಜನ ಬೆಚ್ಚಿಬೀಳುತ್ತಾ ಮಂತ್ರಿಯಾಗಿದ್ದಾಗ ಈತ ಮಾಡಿದ ದೋನಂಬರ್ ದಂಧೆ ಅನೈತಿಕ ಭಾನ್ಗಡಿಗೆ ಚೆಡ್ಡಿ ಕಾರ್ಯಕರ್ತರೇ ಹೇ ಹೋಗಿದ್ದರು. ಕಟ್ಟರ್ ಹಿಂದೂತ್ವವಾದಿಗಳೇ ಪಾಲೇಮಾರ್ ಬುದ್ಧಿ ಕಲಿಸಲು ತೀರ್ಮಾನಿಸಿ ಆ್ಯಂಟಿ ಮಾಡಿದ್ದರು.

ಈಗ ಕಪ್ಪುಹಣ ಬಲದಿಂದ ಕ್ಷೇತ್ರದಲ್ಲಿ ಮ ಬಿಜೆಪಿಯಲ್ಲಿ ಆಗಿರುವ ಡ್ಯಾಮೇಜ್ ಕಂಟ್ರೋಲ್ ಪಾಲೇಮಾರ್ ಪ್ರಯತ್ನ ನಡೆಸಿದ್ದಾನೆ. ದಾನ-ಧರ್ಮ-ಸೇ ದೇಣಿಗೆ ಎಂದೆಲ್ಲ ಕ್ಷೇತ್ರದಲ್ಲಿ ಓಡಾಟ ಜೋರು ನಡೆಸಿದ್ದಾ ಈದ್ಗಾ ಕುಖ್ಯಾತಿಯ ಸತ್ಯಜಿತ್ ರೈ ಎಂಬ ಭಜರಂ ಸುರತ್ಕಲ್ ಟಿಕೆಟ್‌ನ ಬಹು ವರ್ಷದ ಆಕಾಂಕ್ಷಿ. ಆದ ರಂಗ್‌ರಂಗೀಲಾ ಪಾಲೇಮಾರ್‌ಗೆ ಚೆಡ್ಡಿ ವಲಯದಲ್ಲಿರುವ ಪ್ರಭಾವ ಈ ಸತ್ಯಜಿತ್‌ಗೆ ಇಲ್ಲ. ಹೀಗಾಗಿ ಆತ ಪಾಲೇಮಾ ಇರುವವರೆಗೆ ತನಗೆ ಸುರತ್ಕಲ್ ಟಿಕೆಟ್ ದಕ್ಕದೆಂದು ಪಕ್ಕ ಮೂಡಬಿದ್ರೆ ಶಾಸಕನಾಗುವ ಹಗಲುಕನಸು ಕಾಣುತ್ತಿದ್ದಾ ಒಂದಿಷ್ಟು ಕೆಲಸ ಮಾಡಿ ಎಲ್ಲ ಧರ್ಮದ ಜನರೊಂದಿ ಬೆರೆಯುತ್ತಿರುವ ಶಾಸಕ ಬಾವಾನ ಮಣಿಸೋರು ಸುಲಭ ಎಂಬುದು ಪಾಲೇಮಾರ್‌ಗೂ ಗೊತ್ತು. ಪಾಲೇಮಾರ್ ಇತಿಹಾಸ-ಭೂಗೋಳ ಬಲ್ಲ ಸುರತ್ಕಲ್ ಜನ ಈಗಲ ಮೂಗು ಮುರಿಯುತ್ತಲೇ ಇದ್ದಾರೆ.







ಮಂಗಳೂರು ದಕ್ಷಿಣ




ಸತತವಾಗಿ ಮಂಗಳೂರು ದಕ್ಷಿಣದಲ್ಲಿ ಸೋಲುತ್ತಿ ಕಾಂಗ್ರೆಸ್ ಪರಂಪರೆಗೆ ಬ್ರೇಕ್ ಹಾಕಿದ್ದು ಜೆ.ಆರ್. ಲೋಬೋ ಎಂಬ ನಿವೃತ್ತ ಸರ್ಕಾರಿ ಅಧಿಕಾರಿ. ಜಿಲ್ಲಾಧಿಕಾರಿ ಕಚೇರಿಯ ಎಚ್‌ಕ್ಯೂಎ, ಕಾರ್ಪೊರೇಷನ್ ಕಮೀಷನರ್ ಆಗಿ ಗಳಿ ಜನಮನ್ನಣೆ ಲೋಬೋಗೆ ಶಾಸಕನಾಗಲು ನೆರವಾಯ ಶಾಸಕನಾಗಿ ಆತ ಅಂಥ ಹೇಳಿಕೊಳ್ಳುವ ಕೆಲ ಅಭಿವೃದ್ಧಿಯೇನೂ ಮಾಡಿಲ್ಲ, ಆರಕ್ಕೆ ಏರದ ಮೂ ಇಳಿಯದ ಸ್ವಭಾವದ ಈ ಕ್ಯಾಥೋಲಿಕ್ ಕ್ರೈಸ್ತನಿಗೆ ಹಾ ಶಾಸಕನೆಂಬ ನೆಲೆಯಲ್ಲಿ ಮತ್ತೆ ಕಾಂಗ್ರೆಸ್ ಟಿಕೆ ಸಿಗಬಹುದು. ಎಐಸಿಸಿ ಮಾಂಡಲೀಕ ಆಸ್ಕರ್ ಫರ್ನಾಂಡಿ ಕೃಪಾಕಟಾಕ್ಷ ಲೋಬೋಗಿದೆ. ಆದರೆ ಬಿಷಪ್‌ಗಳ ಲಾಬಿ ಎಮ್ಮೆಲ್ಸಿ ಐವಾನ್ ಡಿಸೋಜಾ ಕಣ್ಣು ಮಂಗಳೂರು ದಕ್ಷಿ


ಮೇಲೆ ಬಿದ್ದಿದೆ. ಹಿಂದೊಮ್ಮೆ ಇಲ್ಲಿಂದ ಸೋತಿರುವ ಎಡಬಿಡಂಗಿ ಐವಾನ್ ತಾನು ಸಿಎಂ ಸಿದ್ದುರ ದಳದ ದೋಸ್ತಿ ಎನ್ನುತ್ತಿದ್ದಾನೆ.

ಮಂಗಳೂರು ದಕ್ಷಿಣದಲ್ಲಿ ಬಿಜೆಪಿಗೆ ಗೆಲ್ಲುವ ತಾಕತ್ತಿನ ಹುರಿಯಾಳುಗಳೇ ಇಲ್ಲದಾಗಿದೆ. ಮಾಜಿ ಶಾಸಕ ಯೋಗೀಶ್ ಭಟ್ ಸತತ ಮೂರು ಬಾರಿ ಇಲ್ಲಿಂದ ಗೆದ್ದಾತ. ಕಳೆದ ಬಾರಿ ಸೋತನಂತರ ತಾನಿನ್ನು ಎಲೆಕ್ಷನ್ ರಾಜಕೀಯಕ್ಕೆ ಇಳಿಯಲ್ಲ ಎಂದು ಹೇಳಿದ್ದರು. ಆದರೆ ಈಗ ಎದ್ದು ಕುಂತಿದ್ದಾರೆ. ಸ್ವಯಂಪ್ರೇರಿತನಾಗಿ ಚೆಡ್ಡಿ-ಹಿಂದೂತ್ವದ ಸಭೆ-ಕಾರ್ಯಕ್ರಮದಲ್ಲಿ ಕುರ್ಚಿ ಎಳೆದು ಕೂರುತ್ತಾರೆ. ಈತ ಹೀಗೆ ಕುರ್ಚಿ ಎಳೆದು ಕೂತಾಗೆಲ್ಲ ಕಲ್ಲಡ್ಕನ ಕಣ್ಣು ಕೆಂಪೇರುತ್ತದೆ. ಕರಾವಳಿ ಬಿಜೆಪಿ ಟಿಕೆಟ್ ಕಮಿಟಿ ಸುಪ್ರಿಮೋ ಕಲ್ಲಡ್ಕ ಭಟ್‌ನ ಆಯ್ಕೆ ಚೆಡ್ಡಿ ಗರಡಿಯಲ್ಲಿ ಪಳಗಿದ ಉದ್ಯಮಿ ವೇದವ್ಯಾಸ ಕಾಮತ್. ಕಾಮತ್ ಕೈಲಿರುವ ಕಾಸು ಕಲ್ಲಡ್ಕನ ಬಾಯಲ್ಲಿ ನೀರೂರಿಸಿದೆ ಎಂದು ತಮಾಷೆ ಮಾಡುವ ಭಜರಂಗಿಗಳೂ ಇದ್ದಾರೆ.

ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾ ಮರ್ಡರ್ ಆರೋಪಿ ನರೇಶ್ ಶೆಣೈ ಸಖ್ಯದ ವೇದವ್ಯಾಸ ಕಾಮತ್‌ಗೆ ಅದೇ ಮುಳುವಾಗುವ ಸಾಧ್ಯತೆಯಿದೆ. ಇದನ್ನು ಪಾಪ್ಪಾ ಮಾಡಿಕೊಂಡಿರುವ ಬೆಂಗಳೂರು ಉದ್ಯಮಿ ಬದ್ರಿನಾಥ ಕಾಮತ್ ಎಂಬ ಹಣವಂತ ಮಂಗಳೂರು ದಕ್ಷಿಣದ ಶಾಸಕನಾಗುವ ಆಸೆಯಲ್ಲಿದ್ದಾನೆ. ಈತನಿಗೆ ಬೆಂಗಳೂರಿನ ಕೇಶವಕೃಪದಲ್ಲಿ ತರತರದ ನಂಟುಗಳಿವೆ. ಬಿಜೆಪಿಯ ಕೈಗಾರಿಕಾ ಪ್ರಕೋಷ್ಟವೆಂಬ ವಿದೂಷಕ ತಂಡದ ಹೆಡ್ ಈತ. ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬ್ರಿಜೇಶ್ ಚೌಟ, ಎಮ್ಮೆಲ್ಸಿ ಗಣೇಶ್ ಕಾರ್ಣಿಕ್ ಹೆಸರು ಬಿಜೆಪಿ ಡಮ್ಮಿ ಲಿಸ್ಟ್‌ನಲ್ಲಿದೆ.



ಮಂಗಳೂರು

ಈ ಕ್ಷೇತ್ರ ಸಿದ್ದು ಸರ್ಕಾರದ ಕ್ರಿಯಾಶೀಲ ಮಂತ್ರಿ ಯು.ಟಿ. ಖಾದರ್ ಎರಡನೇ ಬಾರಿ ಪ್ರತಿನಿಧಿಸುತ್ತಿದ್ದಾರೆ. ಮುಸ್ಲಿಮ್ ಬಾಹುಳ್ಯದ ಉಳ್ಳಾಲದಲ್ಲಿ ಖಾದರ್ ಹಿಂದೂ ಮತದಾರರ ಜತೆಗೂ ಸುಮಧುರ ಸಂಬಂಧ ಇಟ್ಟುಕೊಂಡಿದ್ದಾರೆ. ಜಾತ್ಯತೀತ ಮನೋಧರ್ಮದ ಖಾದರ್‌ಗೆ ಮುಖಾಮುಖಿಯಾಗಿ ನಿಲ್ಲುವ ಶಕ್ತಿಶಾಲಿ ಕ್ಯಾಂಡಿಡೇಟ್ ಬಿಜೆಪಿಯಲ್ಲಿ ಇಲ್ಲ. ಬಿಜೆಪಿಗರು ಸಂಘಿಗಳು ಅದೆಷ್ಟೇ ಕಿತಾಪತಿ ಮಾಡಿದರೂ ಹಿಂದೂಗಳನ್ನು ಖಾದರ್‌ರಿಂದ ದೂರ ಮಾಡಲಾಗಿಲ್ಲ. ಹಾಗಂತ ಬಿಜೆಪಿ ಆಕಾಂಕ್ಷಿಗಳೇನೂ ಕಮ್ಮಿಯಿಲ್ಲ. ಮಾಜಿ ಶಾಸಕ ಜಯರಾಮ ಶೆಟ್ಟಿ, ಮಂಡಲ ಸಮಿತಿ ಅಧ್ಯಕ್ಷ ಸಂತೋಷ್ ಕುಮಾರ್ ಬೋಳಿಯಾರ್ ಎಂಬ ಹಿಂದೂತ್ವ ತಂಟೆಕೋರ, ಚಂದ್ರಹಾಸ ಉಳ್ಳಾಲ, ಸತೀಶ್ ಕುಂಪಲ, ಚೆಡ್ಡಿ ಸಾಬಿ ರಹೀಮ್ ಉಚ್ಚಿಲ್ ಬಿಜೆಪಿ ಟಿಕೆಟ್‌ಗಾಗಿ ಸಾಲುಗಟ್ಟಿ ನಿಂತಿದ್ದಾರೆ.

ಬಂಟ್ವಾಳ

ಬೆಳ್ಳಿಪ್ಪಾಡಿ ಬೇಬಿಯಣ್ಣ ಎಂದೇ ಬಂಟ್ವಾಳದಲ್ಲಿ ಹೆಸರುವಾಸಿಯಾಗಿರುವ ಬಿ. ರಮಾನಾಥ ರೈ ಈಗ ಡೈಟಿಂಗ್, ಜಾಗಿಂಗ್‌ನಿಂದ ಸ್ಲಿಮ್ ಆಗಿದ್ದಾರೆ. ಆದರೆ ಅದ್ಯಾಕೋ ಗುತ್ತಿನ ಮನೆ ಗುತ್ತುಗಾರಿಕೆಯ ಅಹಂ ಕರಗಿಲ್ಲ. ಅರಣ್ಯ-ಪರಿಸರದಂಥ ಹೊಣೆಗಾರಿಕೆಯ ಇಲಾಖೆಯ ಮಂತ್ರಿಯಾಗಿರುವ ರೈಗಳು 'ಬಂಟ್ವಾಳ ಮಂತ್ರಿ' ಎಂಬಷ್ಟರಮಟ್ಟಿಗೆ ಕ್ಷೇತ್ರದ ಗಾಂರಿ ರಾಜಕಾರಣದಲ್ಲಿ ತಲ್ಲೀನರಾಗಿರುತ್ತಾರೆ. ಕ್ಷೇತ್ರದ ಅಭಿವೃದ್ಧಿ ಬಗ್ಗೆಯೂ ಗಮನ ಹರಿಸಿ ಜನರ ಒಲವು ಗಳಿಸಿರುವ ರೈಗಳು ತಮ್ಮ ಸುತ್ತ ತಿರುಗುವ ಕ್ಷುದ್ರ ಗ್ರಹಗಳ ಬಗ್ಗೆ ಎಚ್ಚರ ವಹಿಸಬೇಕಿದೆ.


ಒಂದಂತೂ ಖರೆ. ಬಂಟ್ವಾಳದ ಎಲ್ಲ ಜಾತಿ-ಧರ್ಮದವರ ಸಂಪರ್ಕದ ಬೇಬಿಯಣ್ಣನ ಸೋಲಿಸಲು ಬಿಜೆಪಿಗರು ಏಳು ಕೆರೆ ನೀರು ಕುಡಿಯಬೇಕು. ಅಷ್ಟು ಆಳಕ್ಕೆ ಇಳಿದಿದೆ ರೈ ಬೇರುಗಳು ಬಂಟ್ವಾಳದ ಹಳ್ಳಿ-ಹಳ್ಳಿಗಳಲ್ಲಿ. ಒಮ್ಮೆ ಅಚಾನಕ್ ಗೆದ್ದಿದ್ದ ಬಿಜೆಪಿಯ ಗೋಣಿನಾಗನೆಂಬ ಮೈನ್ಸ್, ಶಿಪ್ಪಿಂಗ್ ಉದ್ಯಮಿ ಈಗ ನಿತ್ತ ತಲೆ ಹಾಕಿಯೂ ಮಲಗುವುದಿಲ್ಲ. ಕ್ಯಾಂಪ್ಕೊದ ಅಧ್ಯಕ್ಷನಾಗಿದ್ದಾಗ ನಡೆದ ಗೋಣಿಚೀಲ ಹಗರಣದಿಂದಾಗಿ 'ಗೋಣಿ ನಾಗ'ನೆಂದೇ ಪರಿಚಿತನಾಗಿರುವ ಈತ ಕೋಜಾ ಸರ್ಕಾರದಲ್ಲಿ ಮಂತ್ರಿಯೂ ಆಗಿದ್ದ. ಆ ನಂತರ ಬಿಜೆಪಿಯ ಗರ್ಭಗುಡಿಯಲ್ಲಿ ಉಸಿರುಗಟ್ಟಿ ಪಾರ್ಟಿ ಬಿಟ್ಟೂ ಹೋಗಿದ್ದ. ಈಗಾತನ ಕಣ್ಣು ಮಂಗಳೂರು ದಕ್ಷಿಣದ ಮೇಲೆ ಬಿದ್ದಿದೆ. ಅದು ಅಷ್ಟು ಸುಲಭದ ತುತ್ತೂ ಅಲ್ಲವೆಂಬುದೂ ಆತನಿಗೆ ಗೊತ್ತು, ಬಂಟ್ವಾಳದಲ್ಲಿ ಸ್ಪರ್ಧಿಸುವ ಧೈರ್ಯ ಗೋಣಿ ನಾಗನಿಗಿಲ್ಲ.

ಬಿಜೆಪಿಯ ಯಜಮಾನರು ಹಣವಂತ ಕೃಷಿಕ, ಉದ್ಯಮಿ, ಹೈನೋದ್ಯಮಿ ರಾಜೇಶ್ ನ್ಯಾಕ್ ಎಂಬ ಉಳಿಪಾಡಿಗುತ್ತು ಮನೆತನದ ಚೆಡ್ಡಿ ಚತುರನ ಬಿಟ್ಟುಕೊಂಡಿದ್ದಾರೆ. ಕಳೆದ ಬಾರಿ ರೈ ಎದುರು ಸೋತಿರುವ ರಾಜೇಶ್ ರಾಜಕಾರಣ ಅರೆಮನಸಿನದು. ಹಣದ ಬಲದಿಂದಲೇ ಸಾಮಾಜಿಕ-ಧಾರ್ಮಿಕ-ರಾಜಕೀಯ ಪುಢಾರಿಯಾಗಿ ಅವತರಿಸಿರುವ ನ್ಯಾಕ್ ನಯ-ವಿನಯದ ಥಳುಕಿ ಮನುಷ್ಯ. ಡಾನ್ ಕಲ್ಲಡ್ಕ ಭಟ್ಟ ರಾಜೇಶ್ ನ್ಯಾಕ್‌ರ ಆರ್ಥಿಕ ತಾಕತ್ತು ಕಂಡೇ ರಾಜಕಾರಣಕ್ಕೆ ಎಳೆದು ತಂದಿದ್ದಾರೆಂದು ಚೆಡ್ಡಿಗಳೇ ಪಿಸುಗುಡುವುದು ಮೋಜಾಗಿದೆ. ಕಲ್ಲಡ್ಕನ ದುಡ್ಡಿನ ದಾಹದ ಬಗ್ಗೆ ತರಹೇವಾರಿ ಕತೆಗಳಿವೆ. ರಾಜೇಶ್ ನ್ಯಾಕರ ವರ್ಚಸ್ಸು ಬಂಟ್ವಾಳ ಬಿಜೆಪಿಯಲ್ಲಿ ಇನ್ನಾರಿಗೂ ಇಲ್ಲ. ಇದನ್ನು ಮನಗಂಡಿರುವ ಕಲ್ಲಡ್ಕ ಭಟ್, ಯುದ್ದಿ ಮಹಾತ್ಮ ಆತನಿಗೆ "ನೀನೇ ಬಿಜೆಪಿ ಕ್ಯಾಂಡಿಡೇಟ್... ಎಲೆಕ್ಷನ್‌ಗೆ ರೆಡಿಯಾಗು...." ಅಂದಿದ್ದಾರೆ.

ನಿಧಾನಕ್ಕೆ ರಾಜೇಶ್ ನ್ಯಾಕ್ ಅಖಾಡಕ್ಕೆ ಬರುತ್ತಿದ್ದಾರೆ. ಆದರೆ ಭಜರಂಗದಳ ಭೂಪ-ಜಿಲ್ಲಾ ಬಿಜೆಪಿ ವಕ್ತಾರ ಜಿತೇಂದ್ರ ಕೊಟ್ಟಾರಿ ತನಗೆ ಟಿಕೆಟ್ ಕೊಡಿಯೆಂದು ಹಠ ಹಿಡಿದ್ದಾನೆ. ಮಂಗಳೂರಲ್ಲಿ ಬಿಲ್ಡರ್ ಆಗಿರುವ ಈ ಪ್ರಳಯಾಂತಕ ಬಂಟ್ವಾಳದಲ್ಲಿ ಭಜರಂಗಿ ಭಜನೆ ಮಾಡುತ್ತಾನೆ. ಹಣ ಹರಿಸಿ ಯುವಕರನ್ನು ಭಜರಂಗಿ ಕರಾಮತ್ತಿಗೆ ಛೂಬಿಟ್ಟು ಬಿಜೆಪಿ ಕ್ಯಾಂಡಿಡೇಟ್ ಕ್ಯಾಲಿಬರ್ ರೂಢಿಸಿಕೊಳ್ಳಲು ಹವಣಿಸುತ್ತಿದ್ದಾನೆ. ಸದ್ಯಕ್ಕಂತೂ ಭಜರಂಗಿ ತರಲೆಗಷ್ಟೇ ಸೀಮಿತನಾಗಿರುವ ಕೊಟ್ಟಾರಿಯನ್ನು ಕಲ್ಲಡ್ಕ ಮತಾಂಧ ಮಸಲತ್ತಿಗಷ್ಟೇ ಸೀಮಿತ ಮಾಡಿದ್ದಾನೆ. ಭಟ್ಟನ ನಂಬಿರುವ ಕೊಟ್ಟಾರಿ ಎಮ್ಮೆಲ್ಲೆ ಕನಸು ಕಾಣುತ್ತಿದ್ದಾನೆ, ಪಾಪ!

ಬೆಳ್ತಂಗಡಿ

ಬೆಳ್ತಂಗಡಿ ಬಿಜೆಪಿಯು ಬಡಿದಾಟ-ಭಿನ್ನಮತ ಜನ್ಮಕ್ಕಂಟಿದ ವ್ಯಾಧಿ. ಕ್ಷೇತ್ರದ ಬಹುಸಂಖ್ಯಾತ ಬಿಲ್ಲವ ಸಮುದಾಯದ ಪ್ರಭಾಕರ ಬಂಗೇರ ಎಂಬ ಮಾಜಿ ಶಾಸಕನ ಕಂಡರೆ ಚೆಡ್ಡಿ ಪ್ರತಾಪಸಿಂಹ ನಾಯಕ್ ಎಂಬ ಅಲ್ಪಸಂಖ್ಯಾತ ಕೊಂಕಣಿ ಕಂಠೀರವನಿಗೆ ಆಗದು. ನಾಯಕ್ ಸಂಘ ವಲಯದ ಪ್ರಭಾವಿ. ಹೀಗಾಗಿ ಪ್ರಭಾಕರ ಬಂಗೇರ ಬಿಜೆಪಿಯಲ್ಲಿ ಇದ್ದೂ ಇಲ್ಲದಂತಾಗಿದ್ದಾರೆ. ಸ್ಥಳೀಯ ಕಾಂಗ್ರೆಸ್ ಶಾಸಕ ವಸಂತ ಬಂಗೇರಾ ಬಿಲ್ಲವ ಧೀರ.. ಹೀಗಾಗಿ ಚೆಡ್ಡಿ ಬಳಗ ಬಿಲ್ಲವರ ಮತ ತಮಗೆ ಬರದೆಂದು ಲೆಕ್ಕಾಚಾರ ಹಾಕಿ ಗೌಡ ಸಮುದಾಯದ ರಂಜನ್ ಎಂಬ ಡೋನೇಷನ್ ಶಿಕ್ಷಣ ದಂಧೆದಾರನ ಮುಂಚೂಣಿಗೆ ತಂದು ನಿಲ್ಲಿಸಿಕೊಂಡಿದೆ.



ಈ ರಂಜನ್ ಗೌಡ ಮಾಜಿ ಮಂತ್ರಿ ಗಂಗಾಧರ ಗೌಡರ ಪುತ್ರರತ್ನ. 'ಗುಂ' ಸಂಪುಟದಲ್ಲಿ ಕೆಲವು ತಿಂಗಳು ಮಂತ್ರಿಯಾಗಿದ್ದ ಗಂಗಾಧರ ಗೌಡರಿಗೆ ಆ ನಂತರ ಬೆಳ್ತಂಗಡಿಯಲ್ಲಿ ಗೆಲ್ಲಲಾಗಲೇ ಇಲ್ಲ. ಜೆಡಿಎಸ್-ಬಿಜೆಪಿ ಎಂದೆಲ್ಲ ಅಂಡಲೆದ ವಸಂತ ಬಂಗೇರಾ ಕಾಂಗ್ರೆಸ್ ಪಾಲಾದ ಬಳಿಕವಂತೂ ಗಂಗಾಧರ ಗೌಡ ಕಾಂಗ್ರೆಸಲ್ಲಿ ಕಿಮ್ಮತ್ತು ಕಳಕೊಂಡುಬಿಟ್ಟರು. ವಸಂತ ಬಂಗೇರಾ ಜನಾನುರಾಗಿ ರಾಜಕಾರಣಿ. ಒಂದು ಕಾಲದಲ್ಲಿ ಸಿಡಿಮಿಡಿ ಹುಂಬನಾಗಿದ್ದ ಈತ ಈಗ ಮಾಗಿದ್ದಾರೆ. ಧರ್ಮಸ್ಥಳ ಸಂಸ್ಥಾನದ ದೋಖಾಗಳನ್ನು ಖಂಡಿಸುವ ಛಾತಿವಂತ ಜನನಾಯಕ ಈತ. ಬಿಜೆಪಿ-ಜೆಡಿಎಸ್-ಕಾಂಗ್ರೆಸ್ ಹೀಗೆ ಮೂರೂ ಪಾರ್ಟಿಯಿಂದ ಎಮ್ಮೆಲ್ಲೆ ಆಗಿರುವ ವಸಂತ ಬಂಗೇರಾ ಸೋಲಿಸುವ ತಾಕತ್ತು ಸ್ಥಳೀಯ ಬಿಜೆಪಿಗಿಲ್ಲ. ಅಂಥ ವಜನಿನ ಅಭ್ಯರ್ಥಿಯೂ ಆ ಪಕ್ಷದಲ್ಲಿ ಇಲ್ಲ.

ಕಳೆದ ಬಾರಿ ಸೋತಿರುವ ರಂಜನ್ ಗೌಡರನ್ನೇ ಕಣಕ್ಕಿಳಿಸುವ ಯೋಚನೆ ಚೆಡ್ಡಿ ತಂಡದ ಪ್ರತಾಪಸಿಂಹ ನಾಯಕ್ ಬಳಗದ್ದು. ವಸಂತ ಬಂಗೇರಾರ ಸಹೋದರ - ಮಾಜಿ ಶಾಸಕ- ಪ್ರಭಾಕರ ಬಂಗೇರಾರ ಕಣಕ್ಕಿಳಿಸಿದರೆ ಬಿಲ್ಲವರ ಓಟು ಒಡೆದು ಹೋಗಿ ಲಾಭವಾಗಬಹುದೆಂಬ ಲೆಕ್ಕಾಚಾರ ಪ್ರತಾಪಸಿಂಹ ನಾಯಕ್ ಬಳಗದ ವಿರೋಧಿ ಕ್ಯಾಂಪಿನದು. ಹಿಂದೆರಡು ಬಾರಿ ಅಣ್ಣನ ಸೋಲಿಸಿದ್ದ ಪ್ರಭಾಕರ ಬಂಗೇರಾ ಈಗ ನಿತ್ರಾಣವಾಗಿದ್ದಾರೆ. ಬಿಲ್ಲವರು ಈತನ ನಂಬುವುದಿಲ್ಲ. ಹೈಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡುವ ಹರೀಶ್ ಪೂಂಜ ಎಂಬ ಬಂಟರ ಆಸಾಮಿ ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟಿದ್ದಾರೆ. ರಂಜನ್ ಗೌಡ, ಪ್ರಭಾಕರ ಬಂಗೇರಾ, ಪೂಂಜ, ಪ್ರತಾಪ್ ನಾಯಕ್‌ಗಳೆಲ್ಲ ಕಾಂಗ್ರೆಸ್‌ನ ವಸಂತ ಬಂಗೇರಾ ಎದುರು ತುಂಬ ದುರ್ಬಲರು. ಆಕಸ್ಮಾತ್ ವಸಂತ ಬಂಗೇರಾಗೆ ವೈರಾಗ್ಯ ಬಂದರೆ ಹೆಂಡೋದ್ಯಮಿ ಹರೀಶ್ ಕುಮಾರ್ ಪೂಜಾರಿಯ ಬಹುದಿನದ ಕನಸು ನನಸಾಗಬಹುದು. ವಸಂತ ಬಂಗೇರಾ ಕಾಂಗ್ರೆಸ್ ಸೇರುವ ಮೊದಲು ಈ ಹರೀಶ್ ಕಾಂಗ್ರೆಸ್ ಕ್ಯಾಂಡಿಡೇಟೆಂದೇ ಪರಿಗಣಿತನಾಗಿದ್ದಾತ. ಆ ಯೋಗ ಆತನಿಗೆ ಪಾಪ ಬರಲೇ ಇಲ್ಲ...

ಪುತ್ತೂರು

ಪುತ್ತೂರಿನ ಟಿಕೆಟ್ ಮ್ಯಾಚ್ ದಿನಗಳೆದಂತೆ ಚಿತ್ರ-ವಿಚಿತ್ರ ಕುತೂಹಲ ಕೆರಳಿಸುತ್ತಿದೆ. ಈಗ ಪುತ್ತೂರಿನ ಶಾಸಕಿ ಕಮ್ ಸಂಸದೀಯ ಕಾರ್ಯದರ್ಶಿ ಎಂಬ ಮಂತ್ರಿ ದರ್ಜೆ ಸೌಲಭ್ಯದ ಸುಖದಲ್ಲಿರುವ ಶಕುಂತಲಾ ಶೆಟ್ಟಿ ಸಂಘಿ ಪರಿವಾರದ ಬೈ-ಪ್ರಾಡಕ್ಟ್. ಬಿಜೆಪಿ ಶಾಸಕಿಯಾಗಿದ್ದಾಗ ಆಕೆಗೆ ಡಾನ್ ಕಲ್ಲಡ್ಕ ಭಟ್ಟನ ದುಡ್ಡಿನ ದಾಹ ತಣಿಸಲಾಗದೇ ದೊಡ್ಡ ಜಗಳವೇ ಆಗಿತ್ತು. ಆ ವೈಮನಸ್ಸು ಎಲ್ಲಿಗೆ ಹೋಯ್ತೆಂದರೆ ಶಕು ಅಕ್ಕ ಬಿಜೆಪಿ ಬಿಟ್ಟೇ ಓಡುವಂಥ ಕಿರುಕುಳ ಕಲ್ಲಡ್ಕ ಭಟ್ಟ ಆಕೆಗೆ ಕೊಟ್ಟಿದ್ದ. ಆಕೆ ಕಲ್ಲಡ್ಕ ಭಟ್ಟನ ಭಾವನೂ-ಮಾಜಿ ಶಾಸಕನೂ ಆದ ಹಿರಿಯ ಸಂಘಿ ರಾಜಕಾರಣಿ ರಾಮ್ ಭಟ್ ಜತೆ ಸೇರಿ ಸ್ವಾಭಿಮಾನಿ ವೇದಿಕೆ ಕಟ್ಟಿ ಎಲೆಕ್ಷನ್ ಕಣಕ್ಕಿಳಿದರೂ ಗೆಲ್ಲಲಾಗಲಿಲ್ಲ. ಆಗಾಕೆ ಅನಿವಾರ್ಯವಾಗಿ ಕಾಂಗ್ರೆಸ್ ಸೇರಬೇಕಾಗಿ ಬಂತು.

ಪುತ್ತೂರಲ್ಲಿ ವಿನಯ್‌ಕುಮಾರ್ ಸೊರಕೆ ನಂತರ ಸತತವಾಗಿ ಸೋಲುತ್ತ ಹೋಗಿದ್ದ ಕಾಂಗ್ರೆಸ್‌ಗೂ ಶಕುಂತಲಾ ಶೆಟ್ಟಿಯಂಥ ಗಟ್ಟಿಗಳ ಅವಶ್ಯಕತೆಯಿತ್ತು. ಕಳೆದ ಚುನಾವಣೆಯಲ್ಲಿ ಆಕೆ ಬಿಜೆಪಿ ಮಣಿಸಿ ಸೇಡು ತೀರಿಸಿಕೊಂಡರು. ಆದರೆ ಆಕೆ ಗೆದ್ದ ಮರುಕ್ಷಣದಿಂದಲೇ ಕಾಪು ಹೇಮನಾಥ ಶೆಟ್ಟಿ ಎಂಬ ಎಮ್ಮೆಲ್ಲೆಗಿರಿ ತೆವಲುಗಾರನ ಟೀಮು ಕಾಡಲು ಶುರುಹಚ್ಚಿಕೊಂಡಿತು. ಮಂತ್ರಿ ರಮಾನಾಥ ರೈನಂಥವರೂ ಸತಾಯಿಸಿದರು. ಇದೆಲ್ಲ ನೇರ ಸಿಎಂ ಸಿದ್ದು ಗಮನಕ್ಕೆ ತಂದು ಗೂಟದ ಕಾರು ಶುಕು ಅಕ್ಕ ಇನಾಮಾಗಿ ಗಿಟ್ಟಿಸಿದರು. ಜನಪರ ಕೆಲಸಗಾರ್ತಿಯಾದ ಆಕೆಗೆ ಕಾಂಗ್ರೆಸಲ್ಲಿ ಬೇಜಾರು ಬಂದಿದೆ ಎಂಬ ಸುದ್ದಿಗಳು ಎದ್ದಿವೆ. ಹಾಗಾಗಿ ಆಕೆ ಮತ್ತೆ ಬಿಜೆಪಿಗೇ ಹೋಗ್ತಾರೆಂಬ ಊಹಾಪೋಹಗಳೂ ಇವೆ. ಕಾಂಗ್ರೆಸಲ್ಲಿ ಆಕೆಗೆ ಟಿಕೆಟ್ ತಪ್ಪಿಸುವ ಲಾಬಿ ಜೋರಾಗಿದೆಯಂತೆ. ಆದರೆ ಒಂದಂತೂ ಖರೆ. ಬಿಜೆಪಿ ಒಳಗೆ ಆಕೆಯನ್ನು ಬಿಟ್ಟುಕೊಳ್ಳಲು ಡಾನ್ ಕಲ್ಲಡ್ಕ ತಯಾರಿಲ್ಲ. ಶಕು ಅಕ್ಕ ಬಿಟ್ಟರೆ ಪುತ್ತೂರು ಕಾಂಗ್ರೆಸ್‌ಲ್ಲಿ ಸಮರ್ಥ ಅಭ್ಯರ್ಥಿಯೇ ಇಲ್ಲ.

ಬಿಜೆಪಿಗೂ ಅಷ್ಟೇ ಶಕು ಬಿಟ್ಟರೆ ಗತಿಯಿಲ್ಲ ಎಂಬಂತಾಗಿದೆ. ಕಳೆದ ಬಾರಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಸಂಜೀವ ಮಠಂದೂರು ಈಗ ಜಿಲ್ಲಾ ಬಿಜೆಪಿ ಅಧ್ಯಕ್ಷ. ಕೇಂದ್ರ ಮಂತ್ರಿ ಸದಾನಂದ ಗೌಡರ ಭಾವನಾದ ಈತನಿಗೆ ಟಿಕೆಟ್ ತರೋದು ಕಷ್ಟವಲ್ಲ. ಆದರೆ ಗೆಲ್ಲುವ ಇಮೇಜಿಲ್ಲ ಎಂಬುದು ಕಲ್ಲಡ್ಕ ಭಟ್ಟನ ಬಿಡಾರದ ಅಶರೀರವಾಣಿ ಅಭಿಪ್ರಾಯ! ಸಂಸದರಿಗೆ ಅಸೆಂಬ್ಲಿ ಟಿಕೆಟು ಕೊಡೋದಾದ್ರೆ ನಾನೇ ಕ್ಯಾಂಡಿಡೇಟ್ ಅಂತಿದ್ದಾಳೆ ಸೋಭಕ್ಕ.

ಪಕ್ಕದ ಸುಳ್ಯದವಳಾದ ಸೋಭಕ್ಕ ಇಲ್ಲಿ ಗೆಲ್ಲೋದು ಸಾಧ್ಯವಿಲ್ಲ ಎಂದು ಕಟ್ಟರ್ ಚೆಡ್ಡಿಗಳೇ ಹೇಳ್ತಾರೆ. ಸಂಸದ ನಳೀನ್ ಕುಟೀಲುನ ಮೂಲವೂ ಪುತ್ತೂರು. ಹೀಗಾಗಿ ಆತನೂ ಒಂದು ಕೈನೋಡುವ ಉಮೇದಿಯಲ್ಲಿದ್ದಾನೆ. ಕೋಡಿಬಂಡಾಡಿಯ ಬಿಸ್ನೆಸ್ ಮನ್ ಅಶೋಕ್‌ಕುಮಾರ್ ರೈ ಬಿಜೆಪಿ ಟಿಕೆಟ್‌ಗೆ ಬೇಕಾದ ಫಿಟ್‌ನೆಸ್ ಪ್ರಯತ್ನದಲ್ಲಿ ನಿರತನಾಗಿದ್ದಾನೆ. ದೇವಸ್ಥಾನ ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವವೇ ಮುಂತಾದ ಧಾರ್ಮಿಕ-ಮತಾಂಧ ಮಸಲತ್ತು ಮಸೆಯುತ್ತಿದ್ದಾನೆ.

ಸುಳ್ಯ

ಸುಳ್ಯ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರ. ಇಲ್ಲಿಂದ ಸತತ ಐದು ಬಾರಿ ಗೆದ್ದಿರುವ ಬಿಜೆಪಿಯ ಎಸ್. ಅಂಗಾರನನ್ನು ಬಲಿತ ದಲಿತನೆಂದೇ ಗುರುತಿಸಲಾಗುತ್ತಿದೆ. ಅರೆಭಾಷೆ ಗೌಡರ ಲಾಬಿಯ ಕೈಗೊಂಬೆಯಂತಾಗಿರುವ ಅಂಗಾರ ಆ ಸಂಘಿ ಸರದಾರ ಇಚ್ಛೆಯನ್ನರಿತು ಹೆಜ್ಜೆ ಹಾಕುತ್ತ ಸ್ವ-ಜೀರ್ಣೋದ್ಧಾರ ಸಕತ್ತಾಗಿ ಮಾಡಿಕೊಂಡಿದ್ದಾರೆ. ಗುಡ್ಡಗಾಡು ಸುಳ್ಯ ಬಿಜೆಪಿ ಪರ್ವದಲ್ಲಿ ಅಭಿವೃದ್ಧಿಯೇನೂ ಕಂಡಿಲ್ಲ. ಪೆದ್ದು ಅಂಗಾರನ ದೌರ್ಬಲ್ಯ ಅರ್ಥ ಮಾಡಿಕೊಂಡಿರುವ ಅಧಿಕಾರಶಾಹಿ, ಪುರೋಹಿತಶಾಹಿಗಳು ಆರಾಮಾಗಿ ಬೇಳೆ ಬೇಯಿಸಿಕೊಳ್ಳುತ್ತಿವೆ.

ಪೇಜಾವರ ಸ್ವಾಮೀಜಿ ಕಾರಿಗೆ ಸಾಬಿಗಳು ಕಲ್ಲು ಹೊಡೆದರೆಂದು ಎರಡು ದಶಕದ ಹಿಂದೆ ಸಂಘಿ ಸಂತಾನ ಹುಯಿಲೆಬ್ಬಿಸಿ ಸುಳ್ಯವನ್ನು ಮತಾಂಧ ಕಣವಾಗಿ ಹಣಿಗೊಳಿಸಿತ್ತು. ಆಗ ಸಿದ್ಧವಾದ ಹಿಂದೂತ್ವದ ಸಿದ್ಧಾಂತ-ಸೂತ್ರಗಳೂ ಈಗಲೂ ವರ್ಕೌಟ್ ಆಗುತ್ತಿರುವುದೇ ಸುಳ್ಯದ ದುರಂತ. ಆದರೆ ಮೊದಲಿನ ಹಿಂದೂತ್ವ ಬಲ ಬಿಜೆಪಿಗಿಲ್ಲ. ಕಳೆದ ಬಾರಿ ಕಾಂಗ್ರೆಸ್‌ನ ಡಾ. ರಘು ಎಂಬ ಸುಶಿಕ್ಷಿತ-ಜನಪರ-ಸಮಾಜಮುಖಿ ಸಣ್ಣ ಅಂತರದಲ್ಲಿ ಸೋತಿದ್ದರು. ಅಂಗಾರಗೆ ಎರಡೂವರೆ ದಶಕದ ಇನ್‌ಕಂಬೆನ್ಸಿ ಸುತ್ತಿಕೊಂಡಿದೆ. ಹೀಗಾಗಿ ಬಿಜೆಪಿ ಹೊಸಬರಿಗೆ ಹುಡುಕಾಡಿದರೂ ಅಚ್ಚರಿಯಿಲ್ಲ. ಆದರೆ ಅಂಗಾರನಷ್ಟು ನಿಷ್ಠ ಅನುಯಾಯಿ ಚೆಡ್ಡಿಗಳಿಗೆ ಸಿಗೋದು ಕಷ್ಟ.

ಮೇಲುವರ್ಗದ ಕಮ್ಯುನಲ್ ಫಂಡರು, ಗೋಲ್‌ಮಾಲ್ ಗುತ್ತಿಗೆದಾರರು, ಶಾಸಕನ ಲೆಟರ್‌ಹೆಡ್ ಬಳಸಿ ಲೇವಾದೇವಿ ಮಾಡುವ ಏಜೆಂಟರ ಕಪಿಮುಷ್ಟಿಗೆ ಸಿಲುಕಿರುವ ಅಂಗಾರ ಎಮ್ಮೆಲ್ಲೆ ಆಗಿರುವ ತನಕ ಸುಳ್ಯಕ್ಕೆ ಮುಕ್ತಿ ಇಲ್ಲ!

■ ನುಡುಪ

ಚಿತ್ರದುರ್ಗ: ಮಾದಾರ ಸ್ವಾಮಿಯ ಸಂಧಾನದ ಬಯಲಾಟ




ಅಂತೂಇಂತೂ ಬಿಜೆಪಿಯ ಯಡ್ಯೂರ್'ಅಪ್ಪಾಜಿ' ಹಾಗೂ ಈಶ್ವರ್'ಪಪ್ಪಾಜಿ'ಯ ಮ್ಯಾಚ್ಡ ಶೋ ಒಂದು ಹಂತಕ್ಕೆ ಬಂದು ನಿಂತಿದೆ. ಪಾರ್ಟಿ ಪ್ರೆಸಿಡೆಂಟು ಅಮಿತ್ ಶಾ 'ಯಡ್ಯೂರಪ್ಪಾಜಿಯೇ ಕರ್ನಾಟಕದ ಸಿಎಂ ಅಭ್ಯರ್ಥಿ' ಎಂಬುದಾಗಿ ಘೋಷಿಸಿದ ಬೆನ್ನಿಗೇ ಕೇಂದ್ರದ ನಾಜೂಕಯ್ಯ ಅರುಣ್ ಜೇಟ್ಲಿ ಕೂಡಾ 'ರಾಜ್ಯ ನಾಯಕರೆಲ್ಲ ಯಡ್ಯೂರಪ್ಪಾಜಿ ಬೆನ್ನಿಗೆ ನಿಂತ್ಕೊಬೇಕು' ಅನ್ನೋ ಕಟ್ಟಪ್ಪಣೆ ಹೊರಡಿಸುತ್ತಿದ್ದಂತೆಯೇ ಬ್ರಿಗೇಡ್ ಬಲೂನ್‌ನ ಗಾಳಿ ಜರ್ರನೆ ಇಳಿದು ಹೋಗಿತ್ತು. ಯಡ್ಯೂರಪ್ಪನ ರಭಸದಲ್ಲಿ ತಾನೆಲ್ಲಿ ಕೊಚ್ಚಿ ಹೋಗುತ್ತೇನೋ ಎಂಬ ಭಯಕ್ಕಷ್ಟೆ ರಾಯಣ್ಣನ ಬ್ರಿಗೇಡ್ ಕಟ್ಟಿಕೊಂಡು ಜಾತಿ ತುತ್ತೂರಿ ಊದಿದ್ದ ಈಶ್ವರಪ್ಪನೂ ತನಗೆ ಹಿಂದುಳಿದ ಮೋರ್ಚಾಗಳ ಉಸ್ತುವಾರಿ ದಕ್ಕುತ್ತಿದ್ದಂತೆಯೆ ಬ್ರಿಗೇಡ್‌ಗೆ ಗುಡ್‌ಬೈ ಹೇಳಿ ತಣ್ಣಗಾಗಿದ್ದಾರೆ. ಯಡ್ಯೂರಪ್ಪನ ಮೇಲಿದ್ದ ತಮ್ಮ ವೈಯಕ್ತಿಕ ಗೊಣಗಾಟಗಳ ಕಾರಣಕ್ಕೆ ಈಶ್ವರಪ್ಪನ 'ಹಿಂದ'ಕ್ಕೆ ಬಂದು ನಿಂತಿದ್ದವರು ಈಗ ಈಶ್ವರಪ್ಪನ ಯೂಟರ್ನ್ ಕಂಡು ದಿಕ್ಕೆಟ್ಟು ಹೋಗಿದ್ದಾರೆ. ಈಶು ನಂಬಿ ಕೆಟ್ಟೆವಲ್ಲಾ ಪರಮಾತ್ಮ ಅಂತ ಗೋಳಾಡುತ್ತಲೇ ಮೊನ್ನೆ ಬಿಜೆಪಿ ಉಸ್ತುವಾರಿ ಮುರಳೀಧರ್ ರಾವ್ ಭೇಟಿಯಾದ ಸೊಗಡು ಶಿವಣ್ಣ, ಎಸ್.ಎ.ರವೀಂದ್ರನಾಥ್, ಭಾನುಪ್ರಕಾಶ್, ಶಿವಯೋಗಿಸ್ವಾಮಿ ವಗೈರಾಗಳು ನಾವು ಯಡ್ಯೂರಪ್ಪ ನಾಯಕತ್ವಕ್ಕೆ ಬದ್ಧ ಆದ್ರೆ ಶೋಭಾ ಕರಂದ್ಲಾಜೆ ಕಿರಿಕಿರಿ ತಪ್ಪಿಸಿ ಎಂಬರ್ಥದ ಕಾಂಪ್ರಮೈಸಿಂಗ್ ಬೇಡಿಕೆ ಇಟ್ಟು ಬಂದಿದ್ದಾರೆ. ಯಡ್ಯೂರಪ್ಪನ ವೇಗಕ್ಕೆ ಬ್ರೇಕ್ ಹಾಕಬೇಕೆಂಬ ಇರಾದೆಯ ಕಾರಣಕ್ಕೆ ಈಶ್ವರಪ್ಪನಿಗೆ ಕೀಲಿ ಕೊಟ್ಟು ತಮಾಷೆ ನೋಡುತ್ತಿದ್ದ ಆರೆಸ್ಸೆಸ್‌ಗೂ ಸಮಾಧಾನವಾಗಿರೋದರಿಂದ ಬಂಡಾಯದ ಆಟಕ್ಕೆ ಸದ್ಯ ಫುಲ್‌ಸ್ಟಾಪ್ ಇಡಿಸಿದೆ. ಇಷ್ಟು ದಿನ ಬಿಜೆಪಿಯೊಳಗೆ ನಡೆದಿದ್ದೆಲ್ಲವೂ ವ್ಯವಸ್ಥಿತ ಹೈಡ್ರಾಮಾ. ಯಡ್ಯೂರಪ್ಪ, ಈಶ್ವರಪ್ಪ ಇನ್ನಿತರೆ ಪೋಷಕ ನಟರೆಲ್ಲ ಈ ಹೈಡ್ರಾಮಾದ ಬಲಿಪಶುಗಳಷ್ಟೆ. ಸೂತ್ರ ಹಿಡಿದು ಕೂತದ್ದು ಸಂಘ ಪರಿವಾರದ ಚಾಣಕ್ಯ ತಲೆಗಳು.

ಆದರೆ ಚಿತ್ರದುರ್ಗದ ಹೈವೇ ಮಠದ ಮಾದಾರ ಚೆನ್ನಯ್ಯ ಸ್ವಾಮೀಜಿ ಬಿಜೆಪಿ ರಾದ್ಧಾಂತದ ಅಷ್ಟೂ ಕ್ರೆಡಿಟ್ಟನ್ನು ತನ್ನ ಜೋಳಿಗೆಗೆ ತುಂಬಿಸಿಕೊಳ್ಳಲು ಬೆಂಗಳೂರಿನ ಬೀದಿಬೀದಿ ಸುತ್ತುತ್ತಿರೋದು ನಗೆಪಾಟಲಿಗೆ ಈಡಾಗಿದೆ. ಈಶ್ವರಪ್ಪ ಮತ್ತು ಯಡ್ಯೂರಪ್ಪ ತಮ್ಮ ಮಠಕ್ಕೆ ಭೇಟಿ ನೀಡಿದ್ದನ್ನೇ ಹೈಲೈಟು ಮಾಡಿಕೊಂಡು ಇವರಿಬ್ಬರ ಸಂಧಾನದ ಜವಾಬ್ದಾರಿಯನ್ನು ತನ್ನ ಹೆಗಲಿಗೇ ಏರಿಸಿದ್ದಾರೆ ಅಂತೇಳಿ ಬಿಟ್ಟಿ ಪ್ರಚಾರ ಗಿಟ್ಟಿಸಿದ ಮಾದಾರ ಚೆನ್ನಯ್ಯ ಸ್ವಾಮೀಜಿಯ ಪೊಲಿಟಿಕಲ್ ಹಕೀಕತ್ತುಗಳು ಈಗ ಒಂದೊಂದಾಗಿ ಬಯಲಾಗುತ್ತಿವೆ. ಮೋದಿ, ಅಮಿತ್ ಶಾನಂತಹ ಕಟ್ಟರ್ ಸರ್ವಾಧಿಕಾರಿಗಳೇ ವಕ್ಕರಿಸಿರುವ ಬಿಜೆಪಿ ಹೈಕಮಾಂಡೇ ಬಗೆಹರಿಸಲಾಗದ ಬಿಕ್ಕಟ್ಟನ್ನು ಮನುವ್ಯಾಧಿ ಸಂಘಿಗಳು ಮಾದಾರ ಚೆನ್ನಯ್ಯನಂತಹ ದಲಿತ ಸ್ವಾಮೀಜಿಗೆ ವಹಿಸಿಕೊಡೊತ್ತಾರೆ ಅನ್ನೋದೆ ಡೌಟು ಹುಟ್ಟಿಸುವ ಮೊದಲ ಅಂಶ. ಹಾಗೊಮ್ಮೆ ಸ್ವಾಮಿಯನ್ನು ಬಳಸಿಕೊಳ್ಳುವ ದರ್ದು ಬಂದಿದ್ದರೆ ಬಿಜೆಪಿಯು ಕರಾವಳಿಯ ಸಂಘ-ಭೀಷ್ಮ ಪೇಜಾವರರನ್ನು ಅಖಾಡಕ್ಕಿಳಿಸುತ್ತಿತ್ತೇ ವಿನಃ ತಮ್ಮ ಅಚಲ ನಿಷ್ಠೆಯ ಮನುವಾದಕ್ಕೆ ಅಪಚಾರವಾಗುವಂತ ಕಾರ್ಯಕ್ಕೆ ಕೈ ಹಾಕುತ್ತಿರಲಿಲ್ಲ.

ಅಲ್ಲದೇ, ಇಡೀ ಭಾನ್ಗಡಿಯ ಮೂಲ ಕರ್ತೃವೇ ಈ ಮಾದಾರ ಚೆನ್ನಯ್ಯ ಸ್ವಾಮೀಜಿ. ಯಡ್ಯೂರಪ್ಪನ ವಿರುದ್ಧ ಬಂಡೆದ್ದ ಈಶು ತಲೆಯೊಳಗೆ ಸಿದ್ದರಾಮಯ್ಯನ ಅಹಿಂದಾ ಐಡಿಯಾ ಇಂಜೆಕ್ಟ್ ಮಾಡಿ ರಾಯಣ್ಣ ಹೆಸರಿನ ಹಿಂದೆ ಬ್ರಿಗೇಡ್ ರೂಪ ತಳೆಯುವಂತೆ ಮಾಡಿದ್ದು ಮಾದಾರ ಚೆನ್ನಯ್ಯ ಸ್ವಾಮಿ ಅನ್ನೋದರಲ್ಲಿ ಅನುಮಾನವೇ ಇಲ್ಲ. ಯಾಕೆಂದರೆ ಈಶ್ವರಪ್ಪ ತನ್ನ ಬ್ರಿಗೇಡ್‌ನ ಆರಂಭಿಕ ಸಭೆಯನ್ನು ನಡೆಸಿದ್ದು ಇದೇ ಸ್ವಾಮೀಜಿಯ ಮಠದಲ್ಲಿ, ಸಾಲದೆಂಬಂತೆ, ಕಳೆದ ವರ್ಷದ ಡಿಸೆಂಬರ್‌ನಲ್ಲಿ ಬೆಳಗಾವಿಯ ನಂದಗಡದಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಬ್ರಿಗೇಡ್ ಪದಾಧಿಕಾರಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿ ಬಂದಿದ್ದ ಮಾದಾರ ಚೆನ್ನಯ್ಯ ಸ್ವಾಮಿ ಆನಂತರದ ಪ್ರತಿ ಬೆಳವಣಿಗೆಯಲ್ಲೂ ಈಶ್ವರಪ್ಪನ ಬೆನ್ನಿಗೆ ನಿಲ್ಲುತ್ತಲೇ ಬಂದಿದ್ದರು. ಹೀಗೆ ಸಮಸ್ಯೆಯ ಮೂಲವೇ ಆದ ಚೆನ್ನಯ್ಯ ಸ್ವಾಮೀಜಿಗೆ ಸಂಧಾನದ ಹೊಣೆ ಹೊರಿಸಲು ಬಿಜೆಪಿ ಹೈಕಮಾಂಡು ಮುಠ್ಠಾಳರ ಸಂತೆಯಲ್ಲ.

ಸಂಧಾನದ ಪುಕಾರು

ಆದರೆ ಕಾಗೆ ಕೂರುವುದಕ್ಕೂ, ಟೊಂಗೆ ಮುರಿಯುವುದಕ್ಕೂ ಸರಿ ಹೋಯ್ತು ಅಂತಾರಲ್ಲ ಹಾಗೇ



ಒಂದೆರಡು ವಿದ್ಯಮಾನಗಳು ಮಾದಾರ ಚೆನ್ನಯ್ಯ ಸ್ವಾಮಿಗೆ ಅನುಕೂಲವಾಗಿ ಘಟಸಿದ್ದನ್ನೇ ಮಠದ ಚೇಲಾಪಡೆಗಳು 'ಬಿಜೆಪಿ ಸಂಧಾನಕ್ಕೆ ಮಾದಾರ ಚೆನ್ನಯ್ಯರ ಮಧ್ಯಸ್ಥಿಕೆ' ಅಂತ ಹಬ್ಬಿಸಿದೆ. ಅಷ್ಟಕ್ಕೂ ಆದದ್ದು ಇಷ್ಟೆ. ಯಡ್ಯೂರಪ್ಪಗೆ ಲಗಾಮು ಹಾಕಬೇಕೆನ್ನುವ ಉದ್ದೇಶದಿಂದ ಸ್ವತಃ ಸಂಘ ಪರಿವಾರವೇ ಹುಂಬತನದ ಈಶ್ವರಪ್ಪನನ್ನು ಬಳಸಿಕೊಂಡಿತ್ತು. ಇದಕ್ಕೆಲ್ಲ ಸಂಘದ ಸಂತೋಷ್ ಕಾರಣ ಅನ್ನೋದು ಯಡ್ಯೂರಪ್ಪಗೂ ಅರ್ಥವಾಗಿ ಆರಂಭದಲ್ಲಿ ಕಿಡಿಕಾರಿದರೂ ಸಂಘದ ಖಡಕ್ ಎಚ್ಚರಿಕೆಯಿಂದ ಬಾಲ ಮುದುರಿ ಕೊಂಡಿದ್ದರು. ಅದೇ ಕಾರಣಕ್ಕೆ, ಟಿಕೆಟ್ ಹಂಚಿಕೆಯಲ್ಲಿ ತನ್ನದೇನೂ ಪಾತ್ರವಿಲ್ಲ, ಪಕ್ಷದ ಹೈಕಮಾಂಡ್ ಎರಡ್ಮೂರು ಸಲ ಸರ್ವೇ ನಡೆಸಿ ಅಮಿತ್ ಶಾ ಯಾರಿಗೆ ಹೇಳ... ಅವರಿಗೇ ಟಿಕೆಟ್ ನೀಡಲಾಗುತ್ತೆ ಎಂದು ಹೇಳುವ... ಮಟ್ಟಿಗೆ ಯಡ್ಯೂರಪ್ಪ ಮೆತ್ತಗಾಗಿದ್ದರು. ಸಂಘ ಪರಿವಾ... ಪ್ಲಾನು ಅಷ್ಟರಮಟ್ಟಿಗೆ ವರ್ಕ್‌ಔಟ್ ಆಗಿತ್ತು. ಎಲೆಕ್ಷ... ಇನ್ನು ಒಂದು ವರ್ಷವಷ್ಟೇ ಇರೋದ್ರಿಂದ ... ಬಂಡಾ(ಯದ)ಟವನ್ನು ಇನ್ನೂ ಮುಂದುವರೆಸಿದರೆ ... ಡ್ಯಾಮೇಜ್ ಆಗುತ್ತೆಂಬುದನ್ನು ಅರ್ಥಮಾಡಿಕೊ... ಆರೆಸ್ಸೆಸ್, ಯಡ್ಯೂರಪ್ಪಗೆ ಸಿಎಂ ಕುರ್ಚಿಯ ತಲೆ ... ಈಶ್ವರಪ್ಪನಿಗೆ ಖಡಕ್ ಎಚ್ಚರಿಕೆ ರವಾನಿಸಿ ಗಪ್‌ಚು... ಮಾಡಿಸಿತ್ತು. ರಾಯಚೂರಿನಲ್ಲಿ ಮೇ 8ರಂದು ನಡೆಯಬೇ... ಬ್ರಿಗೇಡ್ ಅಭ್ಯಾಸ ಕಾರ್ಯಕ್ರಮ ಹಠಾತ್ತನೆ ರದ್ದಾ... ಅದೇ ಕಾರಣಕ್ಕೆ. ಆಮೇಲೆ ನೆಪಕ್ಕೆಂಬಂತೆ ನಡೆದ ಬ್ರಿಗೇ... ಸಭೆಯಲ್ಲಿ ಈಶ್ವರಪ್ಪ ಕಾಣಿಸಿಕೊಳ್ಳಲೇ ಇಲ್ಲ, ಅವರ ... ಕಾಂತರಾಜ್ ಆ ಸಭೆಯಲ್ಲಿ ಮುಖ ತೂರಿಸಿದರೂ, ... ದಿನ ನಡೆಯಬೇಕಿದ್ದ ಸಭೆ ಅರ್ಧ ದಿನಕ್ಕೇ ಬರ್ಕಾಸ್ತಾದ... ನೋಡಿದರೆ ಬಹುಶಃ 'ಇಲ್ಲಿಗೆ ಈ ಬ್ರಿಗೇಡ್ ಆಟ ಸಾ... ಅಂತ ತಮ್ಮೊಳಗೇ ಮಾತಾಡಿಕೊಳ್ಳಲು ಆ ... ಸೇರಿದಂತಿತ್ತು. ಒಟ್ಟಿನಲ್ಲಿ ಕಳೆದ ತಿಂಗಳು ಮೈಸೂರಿ... ನಡೆದ ಕಾರ್ಯಕಾರಿಣಿ ನಂತರದಲ್ಲಿ ಹೈಕಮಾಂ... ಮಟ್ಟದಲ್ಲೇ ಬಿಜೆಪಿ ಜಗಳಕ್ಕೆ ಮದ್ದು ಅರೆಯು... ಪ್ರಯತ್ನಗಳು ನಡೆದು ಫಲ ನೀಡುವ ಹಂತಕ್ಕೆ ಬಂದಿದ್ದ...

ಇಷ್ಟೆಲ್ಲ ಬೆಳವಣಿಗೆಗಳಾದ ಮೇಲೆ, ಹೈಕಮಾಂಡ್‌ನಿ... ಬಂದ ಕಟ್ಟಪ್ಪಣೆಯ ವರದಿ ಒಪ್ಪಿಸಿ ಶುರುವಾ... ಜಾಗದಿಂದಲೇ ಕೊನೆ ಮಾಡುವ ಸಲುವಾಗಿ ಮೊನ್ನೆ ಈಶ್ವ... ಮಾದಾರ ಚೆನ್ನಯ್ಯ ಸ್ವಾಮೀಜಿಯನ್ನು ಚಿತ್ರದುರ್ಗ... ಹೈವೆಯಂಚಿನ ಮಠಕ್ಕೆ ಹೋಗಿ ಭೇಟಿಯಾಗಿ ಬಂದಿದ್ದ... ಅದೇ ಹೊತ್ತಿಗೆ ಮಳೆಗಾಲದ 'ಬರ ಪ್ರವಾಸ'ದಲ್ಲಿದ್ದ... ಯಡ್ಯೂರಪ್ಪ ಕೂಡಾ ಚಿತ್ರದುರ್ಗ ತಲುಪಿದ್ದರು. ತ... ಜೊತೆಗಿದ್ದ ಮಾದಾರ ಮಠದ ಭಕ್ತ ಗೋವಿಂದ ಕಾರಜೋ... ಬಲವಂತಕ್ಕೋ ಅಥವಾ ತಮ್ಮ ಈ ಪ್ರವಾಸದುದ್ದ... ದಲಿತ ಊಟೋಪಚಾರದ ನಾಟಕವಾಡುತ್ತಿರುವುದ... ಸಮರ್ಥಿಸಿಕೊಳ್ಳಲಿಕ್ಕೋ ಪಕ್ಕದಲ್ಲೇ ಇದ್ದ ಮಾದಾರ ಚೆನ್ನ... ಮಠಕ್ಕೂ ಯಡ್ಯೂರಪ್ಪ ಎಡತಾಕಿ ಬಂದಿದ್ದರು. ... ಹೆಚ್ಚೆಂದರೆ ಐದು ನಿಮಿಷವೂ ಇರಲಿಲ್ಲ, ಅಂತದ್ದ... ಭಿನ್ನಮತದ ಶಮನದ ಬಗ್ಗೆ ಮಾತನಾಡುವುದೆಲ್ಲಿ? ಆ... ಮಾದಾರ ಚೆನ್ನಯ್ಯ ಸ್ವಾಮೀಜಿ, ಇವರಿಬ್ಬರೂ ತನ್ನ ಮ... ಭೇಟಿ ನೀಡಿದ್ದೇ ಸಂಧಾನದ ಕಾರಣಕ್ಕೆ ಅನ... ಪುಕಾರೆಬ್ಬಿಸಿದ್ದರು.


ಅಶೋಕ್ ಭೇಟಿಯೂ ಗಡದ್ದು ಊಟಿಷ್ಟ...

ಇನ್ನು ಬೆಂಗಳೂರಿನಲ್ಲಿ ಬಿಜೆಪಿಯ ಆರ್.ಅಶೋಕ್‌ನ... ತಾನು ಭೇಟಿಯಾದದ್ದನ್ನೇ ಸಂಧಾನದ ಯತ್ನ ಅ... ಬಿಂಬಿಸಿಕೊಂಡ ಸ್ವಾಮೀಜಿಯ ಬೊಗಳೆತನವೇ ರಾ... ಕಬೂಲಿಯ ಬಣ್ಣ ಬಚ್ಚಿಡುತ್ತದೆ. ಯಡ್ಯೂರಪ್ಪ-ಈಶ್ವ... ನಂತಹ ಪ್ರಭಾವಿಗಳ ಜಗಳಕ್ಕೆ ಮಧ್ಯಸ್ಥಿಕೆ ವಹಿಸು... ಸಲುವಾಗಿ ಸ್ವಾಮೀಜಿ ಒಂದೊಮ್ಮೆ ಮೋದಿಯನ್ನೋ ಅಮಿತ್ ಶಾನನ್ನೋ, ರಾಜ್ಯ ಉಸ್ತುವಾರಿ ಮುರಳೀಧ... ರಾವ್‌ನನ್ನೋ ಭೇಟಿಯಾಗಿದ್ದರೆ ನಂಬಬಹುದಿತ್ತು. ಯಾಕೆಂದರೆ ಅವರು ಇವರಿಬ್ಬರಿಗಿಂತ ಉನ್ನತ ಸ್ಥಾನಗಳಲ್ಲಿ... ವವರು ಹಾಗೂ ಇಬ್ಬರ ಮೇಲೂ ಪ್ರಭಾವ ಬೀರಬಲ್ಲಷ್ಟು ಪರಿಣಾಮಕಾರಿಗಳೂ ಹೌದು. ಕಡೇಪಕ್ಷ ಕೇಂ... ಮಂತ್ರಿಗಳಾದ ಅನಂತ್ಕುಮಾರು ಅಥವಾ ಸದಾನಂ... ಗೌಡರನ್ನೋ ಭೇಟಿಯಾಗಿದ್ದರೂ ಸಂಧಾನ ಅಂ... ಭ್ರಮಿಸಿಕೊಳ್ಳಬಹುದಿತ್ತು. ಅದನ್ನು ಬಿಟ್ಟು ಪ್ರಭಾವದ... ಯಡ್ಡಿ-ಈಶು ಇವರಿಬ್ಬರಿಗಿಂತ ತುಂಬಾ ಕೆಳಗಿರು... ಅಶೋಕ್‌ನನ್ನು ಭೇಟಿ ಮಾಡಿ ಸಂಧಾನ ಎಂಬ ಬೊಗ... ಬಿಟ್ಟರೆ ಯಾರಿಗೆ ತಾನೆ ಸಂಶಯ ಮೂಡದೆ ಇರು... ಅಲ್ಲದೆ ಈ ವಿಷಯದಲ್ಲಿ ಅಶೋಕ್ ತಟಸ್ಥವಾಗಿ... ಆಸಾಮಿಯೇ ಅಲ್ಲ, ಮೊದಲಿನಿಂದಲೂ ಯಡ್ಯೂರ... ಪರ ಬ್ಯಾಟ್ ಬೀಸಿಕೊಂಡು ಬಂದವನು. ಹೀಗಿರುವಾ... ಅಶೋಕ್ ಭೇಟಿ ಮಾಡಿದ್ದು ಸಂಧಾನ ಹೇಗಾಗುತ್ತೆ?

ಅಸಲಿಗೆ ಅವತ್ತು ಮಾದಾರ ಚೆನ್ನಯ್ಯ ಸ್ವಾಮೀ... ಅದ್ಯಾವುದೋ ಕೆಲಸದ ಮೇಲೆ ಬೆಂಗಳೂರಿಗೆ ಬಂದ... ಆರೆಸ್ಸೆಸ್‌ನ ಕೇಶವಾಕೃಪದಲ್ಲಿ ತಂಗಿದ್ದರು. ಸಂಘ... ಮುಖಂಡರಿಗೆ ತಮ್ಮ ಮಗನ ಮದುವೆಯ ಇನ್ವಿಟೇಷ... ಕೊಡುವುದಕ್ಕೆಂದು ಅಲ್ಲಿಗೆ ಬಂದಿದ್ದ ಆರ್.ಅಶೋಕ... ಅಚಾನಕ್ಕಾಗಿ ಮಾದಾರ ಚೆನ್ನಯ್ಯರ ಮುಖಾಮುಖಿಯಾಗಿ... ಕಾವಿ ಕಂಡರೆ ಕಾಲಿಗೆರಗುವ ಬಿಜೆಪಿ ಸಂತತಿಯ... ಅಶೋಕ್ ಕೂಡಾ ಮಾದಾರ ಚೆನ್ನಯ್ಯರಿಗೆ ಆಮಂತ್ರ... ಪತ್ರಿಕೆ ಕೊಟ್ಟು ಕುಶಲೋಪರಿ ಮಾತಾಡಿ, ಹೊರಡು... ಯಾವಾಗಲಾದರು ನಮ್ಮ ಮನೆ ಕಡೆ ಬಿದು...

▶▶1...

ಶರಣ ಪರಂಪರೆಯ ಕೇಸರೀಕರಣದ ಕಾಂಟ್ರ್ಯಾಕ್ಟು!


ವಾದಿರಾಜ್


ಚಿತ್ರದುರ್ಗದ ಮುರುಘಾ ಮಠ ಹನ್ನೆರಡನೆ ಶತಮಾನದ ಶರಣ ಪರಂಪರೆಯ ತಳಹದಿ ಮೇಲೆ ರೂಪುಗೊಂಡಂತದ್ದು. ಈಗಿನ ಮುರುಘಾ ಶಿವಮೂರ್ತಿ ಶರಣರೂ ಅದನ್ನು ತಕ್ಕಮಟ್ಟಿಗೆ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ವೈದಿಕ ಮೌಢ್ಯ ಆಚರಣೆಗಳ ವಿರುದ್ಧ ತಮ್ಮದೇ ರೀತಿಯಲ್ಲಿ ಜಾಗೃತಿ ಮೂಡಿಸುತ್ತಿರುವ ಮುರುಘಾ ಮಠವೇ ಆ ಭಾಗದಲ್ಲಿ ಹರಡಿಕೊಳ್ಳಲು ಸಂಘ ಪರಿವಾರಕ್ಕೆ ತಡೆಗೋಡೆಯಾಗಿರೋದು. ಹಾಗಾಗಿ ಯಾವ ವೈದಿಕಶಾಹಿಯನ್ನು ಶರಣ ಪರಂಪರೆ ವಿರೋಧಿಸಿತ್ತೋ ಅದೇ ಶರಣ ಪರಂಪರೆಯನ್ನು ಹುನ್ನಾರದ ಮೂಲಕ ವೈದಿಕ ಮುಷ್ಠಿಯೊಳಗೆ ಸೆಳೆದುಕೊಳ್ಳಲು ಆರೆಸ್ಸೆಸ್ ಹುನ್ನಾರ ನಡೆಸುತ್ತಲೇ ಬಂದಿದೆ. ಅದಕ್ಕೆಂದೇ ಬೆಂಗಳೂರಿನ ಆರೆಸ್ಸೆಸ್ ಕಾರ್ಯಕರ್ತ ವಾದಿರಾಜ ಎಂಬಾತನನ್ನು ಮೀಸಲಿಟ್ಟಿದೆ. ಮಠಾಧಿಪತಿಗಳನ್ನು ಸಂಪರ್ಕಿಸುವ ಆತ 'ನಿಮ್ಮ ಸಿದ್ಧಾಂತಗಳು ಏನಿವೆಯೋ ಅವುಗಳನ್ನು ನಾವು ಖಂಡಿತ ಗೌರವಿಸುತ್ತೇವೆ. ಅವುಗಳನ್ನು ನಮ್ಮ ವೇದಿಕೆಯ ಮೂಲಕ ಜನರೊಂದಿಗೆ ಹಂಚಿಕೊಳ್ಳಿ. ಜನರಲ್ಲಿ ಜಾಗೃತಿ ಮೂಡಿಸೋಣ' ಅಂತ ನಯವಂಚಕ ಮಾತುಗಳ ಮೂಲಕ ಆರೆಸ್ಸೆಸ್ ಕಾರ್ಯಕ್ರಮಗಳಿಗೆ ಕರೆದೊಯ್ದು ಕೇಸರೀಕರಣ ಮಾಡಿಬಿಡುತ್ತಾನೆ. ಅವನ ಈ ಹುನ್ನಾರದಿಂದಾಗಿಯೇ ಮುರುಘಾ ಮಠದಿಂದ ಟಿಸಿಲೊಡೆದ ಮಾದಾರ ಚೆನ್ನಯ್ಯರಂತಹ ಜಾತಿಶರಣರು ಸಂಘ ಪರಿವಾರದ ಕೇಸರೀಕರಣಕ್ಕೆ ತುತ್ತಾಗಿದ್ದಾರೆ.

ಮುರುಘಾ ಶಿವಮೂರ್ತಿ ಶರಣರ ಮೇಲೂ ಇಂಥಾ ಮೋಡಿ ಮಾಡಲು ಯತ್ನಿಸಿದ್ದ ವಾದಿರಾಜ ಮುಖಕ್ಕೆ ಮಂಗಳಾರತಿ ಮಾಡಿಸಿಕೊಂಡಿದ್ದ. ಆದರೂ ತನ್ನ ಪ್ರಯತ್ನ ಬಿಟ್ಟಿಲ್ಲ. ಅವನ ಮೂಲಕ ಸಂಘಿಗಳಿಗೆ ತಕ್ಕ ಪಾಠ ಕಲಿಸಬೇಕೆಂಬ ಕಾರಣಕ್ಕೇ ಇತ್ತೀಚೆಗೆ ಮುರುಘಾ ಶರಣರು ದಾವಣಗೆರೆಯ ಆರೆಸ್ಸೆಸ್ ಪ್ರಾಂತವಾರು ಸಂಘಾ ಶಿಕ್ಷಾ ವರ್ಗ ಅಭ್ಯಾಸ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಕಾಣಿಸಿಕೊಂಡು ಎಲ್ಲರಿಗೂ ಅಚ್ಚರಿ ಮೂಡಿಸಿದ್ದರು. ಕೇಸರಿ ವೇದಿಕೆಯಲ್ಲಿ ಕಾಣಿಸಿಕೊಂಡು ನಮಸ್ತೆ ಸದಾವತ್ಸಲೆಗೆ ಎದ್ದು ನಿಂತು ಗೌರವಿಸಿದ ಶರಣರ ಬಗ್ಗೆ ಒಂದಷ್ಟು ತಕರಾರುಗಳಿದ್ದರೂ ಆರೆಸ್ಸೆಸ್ ಗರ್ಭದಲ್ಲೇ ಕೂತು ಅದರ ಕೋಮುವಾದವನ್ನು ಧಿಕ್ಕರಿಸಿದ್ದನ್ನಂತು ಸ್ವಾಗತಿಸಲೇಬೇಕು.

ಬುದ್ಧನ ಮಾನವತಾವಾದ, ಬಸವಣ್ಣನ ಸಮತಾವಾದ ಮತ್ತು ಅಂಬೇಡ್ಕರರ ವಿಚಾರವಾದಗಳನ್ನು ಅಳವಡಿಸಿಕೊಂಡು ಅಸ್ಪೃಶ್ಯತೆಯಂತಹ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಿದೆ ಎಂದು ಮಾತಿಗಾರಂಭಿಸಿದ ಶರಣರು ಜಾತಿ ಧರ್ಮಗಳ ಮೂಲಕ ವಿಭಜನೆ ಮಾಡುವ ಚೌಕಟ್ಟುಗಳನ್ನು ಮೀರಿ ನಮ್ಮನ್ನೆಲ್ಲ ಒಂದುಗೂಡಿಸುವ ಸಂವಿಧಾನವೇ ರಾಷ್ಟ್ರಧರ್ಮ ಎಂಬ ಟೀಕೆಗಳ ಮೂಲಕ ವೇದಿಕೆ ಮೇಲಿದ್ದ ಆರೆಸ್ಸೆಸ್ಸಿಗರೇ ತಬ್ಬಿಬ್ಬಾಗುವಂತೆ ಮಾಡಿದ್ದರು. ಮನುವಾದವನ್ನು ಈ ನೆಲದ ನೀತಿಯಾಗಿ ರೂಪಿಸಬೇಕೆಂಬ ಅಜೆಂಡಾದ ಸಂಘಿಗಳಿಗೆ ಇದಕ್ಕಿಂತ ಪೆಟ್ಟು ಬೇಕೆ? ಅವರ ಕೋಮುವಾದಕ್ಕೂ ಮಂಗಳಾರತಿ ಎತ್ತಿದ ಶರಣರು ಮುಸ್ಲಿಮರೂ ಸೇರಿದಂತೆ ಅಲ್ಪಸಂಖ್ಯಾತರ ವಿಶ್ವಾಸ ಗಳಿಸಿದಾಗ ಮಾತ್ರ ಸುಭದ್ರ, ಸುಂದರ ರಾಷ್ಟ್ರ ಕಟ್ಟಲು ಸಾಧ್ಯ ಎಂದಾಗಲಂತೂ ಅವರನ್ನು ಸಭೆಗೆ ಆಹ್ವಾನಿಸಿದ ಪಾಪಪ್ರಜ್ಞೆ ಸಂಘಿಗಳ ಮುಖದಲ್ಲಿ ಎದ್ದು ಕಾಣುತ್ತಿತ್ತು. ಇಂತದ್ದೇ ವೈಚಾರಿಕ ನೆಲೆಗಟ್ಟು ಇಟ್ಟುಕೊಂಡು ಅವರು ಜಾತಿಗೊಬ್ಬ ಶರಣರನ್ನು ಹುಟ್ಟುಹಾಕಿದ್ದರು. ಆದರೆ ಮಾದಾರ ಚೆನ್ನಯ್ಯರಂಥವರಿಂದಾಗಿ ಅದೇ ಇವತ್ತು ಶರಣ ಪರಂಪರೆಯ ಕೇಸರೀಕರಣದ ರಹದಾರಿಯಾಗಿ ಕಾಡುತ್ತಿದೆ!



ತುಮಕೂರು: ಪಾಲಿಕೆ ಕಾರ್ಪೊರೇಟರ್‌ಗಳ ಗೂಂಡಾ ಸಭೆ!



ಮೇಯರ್ ರವಿಕುಮಾರ್

ಒಂದುಕಡೆ ತುಮಕೂರಿನ ಪ್ರಜ್ಞಾವಂತ ಜನ 'ಗ್ರೀನ್ ...ುಕೂರು' ಎಂಬ ಅರ್ಥಪೂರ್ಣ ಅಭಿಯಾನ ...ುತ್ತಿದ್ದರೆ ಇತ್ತ ಸಾಂವಿಧಾನಿಕವಾಗಿ ಆ ಜವಾಬ್ದಾರಿ ...ತ್ತ ಪಾಲಿಕೆ ಜನಪ್ರತಿನಿಧಿಗಳು ಸಾಮಾನ್ಯ ಸಭೆ ...ಳದಲ್ಲಿ ಲೋಕಲ್ ಗೂಂಡಾಗಳಂತೆ ಬಡಿದಾಡಿಕೊಂಡು ...ುಕೂರಿನ ಮರ್ಯಾದೆಯನ್ನು ಮೂರು ಕಾಸಿಗೆ ...ಜಾಕಿದ್ದಾರೆ. ಕಾರ್ಪೊರೇಟರ್‌ಗಳು, ಅಧಿಕಾರಿಗಳು, ...ೀಕರ್‌ಗಳ ಪಾಲಿಗೆ ತುಮಕೂರು ಪಾಲಿಕೆ ಅನ್ನೋದು ... ತೋಡುವ ಖಜಾನೆಯಿದ್ದಂತೆ. ಸಾಲುಸಾಲು ...ಮಗಳು, ಉದ್ದುದ್ದ ಹಗರಣಗಳು, ಕೋಟ್ಯಂತರ ...ಾಯಿ ಸ್ವಾಹಾ, ಅರ್ಧಕ್ಕೇ ನಿಂತ ಕಾಮಗಾರಿಗಳು, ...ೀಗಸ್ ಬಿಲ್‌ಗಳು- ಹೀಗೆ ಹೇಳುತ್ತಾ ಹೋದರೆ ...ುಕೂರು ಸಿಟಿ ಬಿಸಾಕುವ ಗಾರ್ಬೇಜ್‌ಗಿಂತ ದುರ್ನಾತ ...ಕೆ ಆವರಣದಿಂದಲೇ ಹೊರಹೊಮ್ಮುತ್ತೆ. ಸ್ವತಃ ...ಯರ್ ಆದ ವ್ಯಕ್ತಿಯೇ ನಮ್ಮ ಪಾಲಿಕೆಯಲ್ಲಿ ಮೂರು ...ಟಿ ಹಗರಣ ನಡೆದಿದೆ ಎಂಬುದಾಗಿ ಪತ್ರಿಕಾಗೋಷ್ಠಿ ...ು ಹೇಳುತ್ತಾನೆಂದರೆ ತುಮಕೂರು ಕಾರ್ಪೊರೇಷನ್‌ನ ...ಡಿಗಳು ಇನ್ನೇಗಿರಬೇಡ.

...ಕೆಲ ತಿಂಗಳ ಹಿಂದಷ್ಟೇ ಎಸ್.ಎಸ್. ಪುರಂನಲ್ಲಿ ...ತ ನಿರ್ಮಾಣ ಮಾಡಲು ಸತ್ಯಪಾಲ್ ಎಂಬ ವ್ಯಕ್ತಿಯಿಂದ ...ತ ಪಡೆಯುತ್ತಿದ್ದಾಗ ಕೋದಂಡರಾಮ್ ನೇತೃತ್ವದ ... ತಂಡದ ದಾಳಿಯಲ್ಲಿ ರೆಡ್‌ಹ್ಯಾಂಡಾಗಿ ತಗುಲಿಕೊಂಡ ...ರ್ಪೊರೇಟರ್ ಕರುಣಾರಾಧ್ಯ, ಇಂಜಿನಿಯರ್ ವಿಶ್ವನಾಥ್ ...ುಕೂರಿನ ಮಾನ ಕಳೆದಿದ್ದರು. ಈಗ ಪಾಲಿಕೆಯ ... ಸದಸ್ಯರು ಊರ ಮಧ್ಯೆ ದೊಡ್ಡ ಎಲ್‌ಇಡಿ ಟೀವಿ ...ಸಿ, ಅದರಲ್ಲಿ ತಾವು ಸಭೆಯಲ್ಲಿ ಕಿತ್ತಾಡೋದನ್ನು ...ದಾಗಿ ಬಿತ್ತರಿಸಿ ಜನರಿಗೆ ಪಾಲಿಕೆ ಎಂದರೇನೆ ಅಸಹ್ಯ ...ುವಂತೆ ಮಾಡಿದ್ದಾರೆ.

ಪಾಲಿಕೆಯ ಗೂಂಡಾ ಸಭೆ

...ರವಿಕುಮಾರ್ ಮೇಯರ್ ಆಗಿ ಆಯ್ಕೆಯಾದ ಮೇಲೆ ... ಮೊದಲನೆಯ ಬಾರಿ ಸಾಮಾನ್ಯ ಸಭೆಯನ್ನು ...ಲಾಯ್ತು. ಹೊಸದರಲ್ಲಿ ಪೌರುಷ ಉಕ್ಕುಕ್ಕಿ ಬರುತ್ತೆ ...ವಂತೆ ಮೇಯರ್ ಆಗಿ ಅಧಿಕಾರ ಸ್ವೀಕರಿಸಿದ ...ಭದಲ್ಲೇ ಆಯುಕ್ತರ ವಿರುದ್ಧ ಗುಡುಗಿದ್ದ ರವಿಕುಮಾರ್ ...ಕೆಯಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದ್ದು ...ಕರಿಗೆ ತೊಂದರೆಯಾಗುತ್ತಿದೆ. ಅವರಿಗೆ ಕಡಿವಾಣ ...ಬೇಕು ಇಲ್ಲವೇ 15 ದಿನಗಳೊಳಗೆ ನಿಮ್ಮ ದಾರಿ ನೋಡಿಕೊಳ್ಳಬೇಕು' ಎಂದು ಖಡಕ್ ಎಚ್ಚರಿಕೆ ...ದ್ದರು. ಆದರೆ ಇಷ್ಟುದಿನವಾದರೂ ದಲ್ಲಾಳಿಗಳ ಕಾಟ ...ಯಾಗಿಲ್ಲ, ಕೆಲ ಅಧಿಕಾರಿಗಳೇ ತಮ್ಮ ಕುಟಾವಿಗೋಸ್ಕರ ...ಗಳನ್ನು ಸಾಕಿಕೊಂಡು ಪೋಷಿಸುತ್ತಿದ್ದಾರೆ. ಕಮಿಷನ್ ...ಗೆ ಹೆಗ್ಗಣದಂತಾಗಿರುವ ಅಧಿಕಾರಿಗಳಿಗೆ ಕೆಲ ...ರ್ಪೊರೇಟರ್‌ಗಳೂ ಸಾಥ್ ನೀಡುತ್ತಿರೋದರಿಂದ ...ಗಳ ಉಪಟಳ ಕಡಿಮೆಯೇ ಆಗಿಲ್ಲ.

ಅವತ್ತಿನ ಸಾಮಾನ್ಯ ಸಭೆಯಲ್ಲಿ ಮೊದಲಿಗೆ ಚರ್ಚೆಗೆ ಬಂದಿದ್ದೇ ಈ ವಿಚಾರ. ಒಳಚರಂಡಿ ದುರಸ್ತಿ ಮತ್ತು ನಿರ್ಮಾಣ ಕಾಮಗಾರಿ ವಿಷಯದ ಬಗ್ಗೆ ಮಾತನಾಡುತ್ತಾ ಸದಸ್ಯ ನಯಾಜ್ ಅಹಮದ್ ಅಧಿಕಾರಿಗಳ ವಿರುದ್ಧ ಹರಿಹಾಯ್ದುರು. ಈ ಸಂದರ್ಭದಲ್ಲಿ ಮತ್ತೊಬ್ಬ ಕಾರ್ಪೊರೇಟರ್ ವೆಂಕಟೇಶ್ ಕೂಡಾ ದನಿ ಎತ್ತಿದಾಗ ನಯಾಜ್ ವೆಂಕಟೇಶ್ ಮಧ್ಯೆ ವಾಗ್ವಾದವೇ ಶುರುವಾಯ್ತು. ತಾವಿರೋದು ಜವಾಬ್ದಾರಿಯುತ ಸಭೆಯಲ್ಲಿ ಮತ್ತು ತಮ್ಮ ಈ ಹಾರಾಟವನ್ನೆಲ್ಲ ತಾವೇ ಹೊರಗಡೆ ಹಾಕಿಸಿದ ಬೃಹತ್ ಸ್ಕ್ರೀನ್‌ನಲ್ಲಿ ಜನ ನೋಡುತ್ತಿದ್ದಾರೆ ಎಂಬ ಕಾಮನ್‌ಸೆನ್ಸ್ ಕೂಡಾ ಇಲ್ಲದೆ ಇಬ್ಬರ ಕದನ ಪರಸ್ಪರ ಕೈಕೈ ಮಿಲಾಯಿಸುವ ಹಂತಕ್ಕೆ ಹೋಯ್ತು. ತನ್ನ ಮೇಯರ್ ಸ್ಥಾನದಿಂದ ಎದ್ದು ಬಂದ ರವಿಕುಮಾರ್ ಕೊನೆಗೆ ಇಬ್ಬರಿಗೂ ಸಮಾಧಾನ ಮಾಡಬೇಕಾಯ್ತು. ಅವರನ್ನು ಸಮಾಧಾನ ಮಾಡಿದ್ದೆ ದೊಡ್ಡ ಸಾಧನೆಯಂತಾಗಿ ಚರ್ಚೆಯಾಗಬೇಕಿದ್ದ ನಗರದ ಒಳಚರಂಡಿ ವಿಷಯವೇ ನೇಪಥ್ಯಕ್ಕೆ ಸರಿದದ್ದು ವಿಪರ್ಯಾಸ.

ರಾಜೀನಾಮೆ ಘೋಷಿಸಿದ ಸದಸ್ಯೆ

ಸದಸ್ಯರ ಈ ಅರಚಾಟದ ನಡುವೆ ಸದಸ್ಯೆಯೊಬ್ಬರು ತಮ್ಮ ಸ್ಥಾಯಿ ಸಮಿತಿ ಸ್ಥಾನಕ್ಕೆ ರಾಜೀನಾಮೆ ಬಿಸಾಕಿದ್ದೂ ನಡೆಯಿತು. ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಸ್ಥಾಯಿ ಸಮಿತಿ ಸದಸ್ಯೆ ಧನಲಕ್ಷ್ಮಿ ತ್ರಿಚಕ್ರ ವಾಹನ ವಿತರಣೆಯಲ್ಲಿ ನಡೆದಿರುವ ಅವ್ಯವಹಾರದ ವಿರುದ್ಧ ಸಿಡಿದೆದ್ದು ಅಂತ ಸಾಹಸ ಮಾಡಿದರು. ಯೋಜನೆಯ ಆರಂಭದಲ್ಲಿ ಫಲಾನುಭವಿಗಳಿಗೆ ಹೀರೋ ಡ್ಯೂಯೆಟ್ ವಾಹನ ನೀಡುವುದೆಂದು ನಿಕ್ಕಿಯಾಗಿ ಅದಕ್ಕೆ ಟೆಂಡರ್ ಕೂಡಾ ಕರೆಯಲಾಗಿತ್ತು. ಆದರೆ ನಂತರದಲ್ಲಿ ಹೀರೊ ಡ್ಯೂಯೆಟ್‌ಗೆ ಬದಲು ಕಡಿಮೆ ದರದ ಆಕ್ಟೀವ್ ಹೋಂಡಾ ಖರೀದಿಸಿ ವಿತರಿಸಲು ಸಜ್ಜಾಗಿದ್ದರು. ವಾಹನ ಬದಲಾವಣೆ ಮಾಡುವುದಾದರೆ ಮೊದಲು ಕರೆದಿದ್ದ ಟೆಂಡರ್ ರದ್ದು ಮಾಡಿ ರೀಟೆಂಡರ್ ಮಾಡಬೇಕೆನ್ನುವ ಪ್ರಸ್ತಾಪವೂ ಬಂದು ಅದಕ್ಕೆ ಮೇಯರ್ ಮತ್ತು ಸ್ಥಾಯಿ ಸಮಿತಿ ಅಧ್ಯಕ್ಷ ಯೂಸುಫ್



ತುಮಕೂರು ಮಹಾನಗರ ಪಾಲಿಕೆ

ಖಾನ್ ಸಮ್ಮತಿ ನೀಡಿದ್ದರು. ಆದರೆ ಇದೀಗ ಸ್ಥಾಯಿ ಸಮಿತಿ ಸದಸ್ಯರಿಗೂ ಮಾಹಿತಿ ನೀಡದೆ, ಮಾತು ಕೊಟ್ಟಂತೆ ರೀಟೆಂಡರನ್ನೂ ಕರೆಯದೆ ವಾಹನಗಳನ್ನು ಬದಲಾಯಿಸಲು ಮುಂದಾದದ್ದೇ ಧನಲಕ್ಷ್ಮಿ ಸಿಡಿದೇಳಲು ಕಾರಣ.


ಸ್ಥಾಯಿ ಸಮಿತಿ ಸಭೆ ಮತ್ತು ಸಾಮಾನ್ಯ ಸಭೆ ತೀರ್ಮಾನಗಳ ಮಹತ್ವ ನಿಮಗೇನಾದರು ಗೊತ್ತಿದೆಯಾ ಎಂಬುದಾಗಿ ಧನಲಕ್ಷ್ಮಿ ಗಟ್ಟಿ ಧ್ವನಿ ತೆಗೆಯುತ್ತಿದ್ದಂತೆಯೇ ಮೇಯರ್ ಮತ್ತು ಸ್ಥಾಯಿ ಸಮಿತಿ ಅಧ್ಯಕ್ಷ ಇಬ್ಬರೂ ತಬ್ಬಿಬ್ಬಾಗಿ ಹೋದರು. ಇದನ್ನು ನಂತರ ಚರ್ಚಿಸೋಣ ಅಂತ ತಿಪ್ಪೆ ಸಾರಿಸಲು ನೋಡಿದರಾದರು ಪಟ್ಟು ಬಿಡದ ಧನಲಕ್ಷ್ಮಿ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಸ್ಥಾಯಿ ಸಮಿತಿಗೆ ರಾಜೀನಾಮೆ ನೀಡುತ್ತಿರುವುದಾಗಿ ಘೋಷಿಸಿದರು.

ಕಸದಲ್ಲಿ ಮೂರು ಕೋಟಿ ಗುಳುಂ!

ಒಂದು ವರ್ಷದ ಹಿಂದೆ ಅಜ್ಜಗೊಂಡನಹಳ್ಳಿಯಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಲು ಪಾಲಿಕೆ ಮುಂದಾದಾಗ ಸುತ್ತಮುತ್ತಲಿನ ಹಳ್ಳಿಯ ಹೋರಾಟಗಾರರು ವಿರೋಧ ವ್ಯಕ್ತಪಡಿಸಿದ್ದರು. ಜಿದ್ದಿಗೆ ಬಿದ್ದ ಪಾಲಿಕೆ ಅಮಾಯಕ ಹೋರಾಟಗಾರರನ್ನು ಜೈಲಿಗೆ ಕಳುಹಿಸಿ ಅಜ್ಜಗೊಂಡನಹಳ್ಳಿಯಲ್ಲಿ ಘಟಕ ಮಾಡಲು ಮುಂದಾಗಿತ್ತು. ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡುತ್ತೇವೆಂದು ಆಶ್ವಾಸನೆ ನೀಡಲಾಗಿತ್ತಾದರೂ ಅಲ್ಲಿ ಅವೈಜ್ಞಾನಿಕವಾಗಿ ಕಸ ಸುರಿದು ಗಬ್ಬೆಬ್ಬಿಸಲಾಗಿದೆ. ಆದರೂ ಕಸದ ವೈಜ್ಞಾನಿಕ ವಿಲೇವಾರಿಗೆಂದು ಮೀಸಲಿಟ್ಟಿದ್ದ ಹಣ ಮಾತ್ರ ಮಾಯವಾಗಿದೆ. ವೈಜ್ಞಾನಿಕ ಘಟಕದ ಕಾಮಗಾರಿ ನಡೆಯದೆ ಅಷ್ಟೊಂದು ಹಣ ನಾಪತ್ತೆಯಾದದ್ದು ಹೇಗೆ ಎನ್ನುವುದೇ ನಿಗೂಢ ರಹಸ್ಯ. ಸ್ವತಃ ಪಾಲಿಕೆಯ ಮೇಯರ್ ರವಿಕುಮಾರ್ ಇತ್ತೀಚೆಗೆ ಪ್ರೆಸ್‌ಮೀಟ್ ಕರೆದು 'ಅಜ್ಜಗೊಂಡನಹಳ್ಳಿಯಲ್ಲಿ ವೈಜ್ಞಾನಿಕ ಕಸ ವಿಲೇವಾರಿ ನಡೆಯುತ್ತಿಲ್ಲ, ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿದೆ. ಹಾಲಿ ಸಂಗ್ರಹವಾಗಿರುವ ಕಸ ವಿಲೇವಾರಿಗೆ 2 ತಿಂಗಳ ಕಾಲಾವಕಾಶ ಬೇಕು. ಗುತ್ತಿಗೆದಾರರು, ನಗರಪಾಲಿಕೆ ಅಧಿಕಾರಿಗಳು ಕಸ ವಿಲೇವಾರಿ ಹೆಸರಿನಲ್ಲಿ ಲೂಟಿ ಹೊಡೆಯುತ್ತಿದ್ದು, ಕನಿಷ್ಠ 3 ಕೋಟಿ ಹಗರಣ ನಡೆದಿದೆ' ಎಂಬ ಹೇಳಿಕೆ ನೀಡಿದ್ದರು.

ಸ್ವತಃ ಮೇಯರ್ ಇಂಥಾ ಆರೋಪ ಮಾಡಿದ್ದು ಸಾಮಾನ್ಯ ಸಭೆಯಲ್ಲಿ ಭಾರೀ ಚರ್ಚೆಗೆ ಬಂತು. ಸದಸ್ಯ ಮಹೇಶ್ ಈ ಕುರಿತು ಮೇಯರ್‌ರನ್ನು ಪ್ರಶ್ನಿಸಿ ಎಲ್ಲೆಲ್ಲಿ ಯಾವ ರೀತಿ ಹಗರಣವಾಗಿದೆ ತಿಳಿಸಿ ಎಂದು ಪಟ್ಟು ಹಿಡಿದರು. ಉತ್ತರಕೊಟ್ಟ ಮೇಯರ್ ರವಿಕುಮಾರ್ 'ಅವ್ಯವಹಾರ ಆಗಿರುವುದು ನಿಜ. ನೀವು ಯಾರಿಂದ ಅಂತ ಹೇಳಿದರೆ ಅವರಿಂದ ತನಿಖೆ ಮಾಡಿಸೋಣ' ಎಂಬ ಪರಿಹಾರ ಸೂಚಿಸಿದರು. ಅದಕ್ಕೆ ಒಪ್ಪದ ಮಹೇಶ್ ಮೊದಲು ಯಾವ್ಯಾವ ಕಾಮಗಾರಿಯಲ್ಲಿ ಅವ್ಯವಹಾರ ಆಗಿದೆ ಎಂಬುದನ್ನು ಸಭೆಗೆ ವಿವರಿಸಿ, ನಮಗೂ ಒಂದಿಷ್ಟು ತಿಳಿಯಲಿ. ಆಮೇಲೆ ತನಿಖೆಯ ಮಾತು. ವಿಷಯವೇ ತಿಳಿಯದೇ ಇದೇ ರೀತಿ ತನಿಖೆ ನಡೆಸಿ, ಇಂಥವರಿಗೆ ವಹಿಸಿ ಎಂದು ಹೇಳಲು ಹೇಗೆ ಸಾಧ್ಯ ಎಂದು ಪಟ್ಟು ಹಿಡಿದರು. ಬಾಲಕೃಷ್ಣ, ಇಂದ್ರಕುಮಾರ್, ಬಾವಿಕಟ್ಟೆ ನಾಗಣ್ಣರಂತ ಹಲವರೂ ಇದಕ್ಕೆ ದನಿಗೂಡಿಸಿದಾಗ ಗದ್ದಲದ ನಡುವೆಯೇ 'ಅವ್ಯವಹಾರದ ಬಗ್ಗೆ ತನಿಖೆ ನಡೆಸಿ ವರದಿ ಕೊಡಲು ಪಾಲಿಕೆ ಆಯುಕ್ತರಿಗೆ ಸೂಚಿಸಿದ್ದೇನೆ' ಎಂದು ಮೇಯರ್ ಏಕಾಏಕಿ ಘೋಷಿಸಿದರು.

ಅಸಲಿಗೆ ಯಾವುದೇ ಕಾಮಗಾರಿಗಳಿಗೆ ಅನುದಾನ ಕೊಡುವಾಗ ಅದಕ್ಕೆ ಸಹಿ ಹಾಕುವವರೇ ಆಯುಕ್ತರು. ಹಾಗಾಗಿ ಹಗರಣದಲ್ಲಿ ಅವರೂ ಭಾಗಿಯಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹಾಗಿರುವಾಗ ಅವರಿಗೇ ತನಿಖೆಯ ಹೊಣೆ ಒಪ್ಪಿಸಿದರೆ ನಿಷ್ಪಕ್ಷಪಾತ ತನಿಖೆ ಹೇಗೆ



ಕರುಣಾರಾಧ್ಯ


ಸಾಧ್ಯ ಎನ್ನುವ ಪ್ರಶ್ನೆ ಭಾರೀ ವಾಗ್ವಾದಕ್ಕೆ ಕಾರಣವಾಯ್ತು. ಆಗ ಬಾವಿಕಟ್ಟೆ ನಾಗಣ್ಣ ತನಿಖೆ ನಡೆಸುವುದೇ ಆದಲ್ಲಿ ಲೋಕಾಯುಕ್ತಕ್ಕೆ ವಹಿಸಿಕೊಡಿ ಎಂಬ ಪ್ರಸ್ತಾಪ ಮುಂದಿಟ್ಟರು. ಇದ್ದಕ್ಕಿದ್ದಂತೆ 'ಲೋಕಾಯುಕ್ತ'ದ ಹೆಸರು ಕೇಳಿ ಬರುತ್ತಿದ್ದಂತೆಯೇ ಎಲ್ಲಾ ಸದಸ್ಯರು ಗರ ಬಡಿದವರಂತೆ ಚರ್ಚೆಯನ್ನು ಅಲ್ಲಿಗೇ ಮುಗಿಸಲು ತರಾತುರಿ ತೋರಿದ್ದು ಕಂಡುಬಂತು. ಹೊರಗಡೆಯವರಿಗೆ ತನಿಖೆ ಒಪ್ಪಿಸುವುದು ಬೇಡ, ನಮ್ಮವರಿಂದಲೇ ಆಂತರಿಕ ತನಿಖೆ ಮಾಡಿಸಿ ಎಂದು ಚರ್ಚೆ ಮುಗಿಸಿದರು. ಅಂದರೆ ಅಲ್ಲಿರುವ ಸಾಕಷ್ಟು ಜನ ಉಂಡು ತೇಗಿದವರು ಎಂಬುದು ಅದರಿಂದ ಖಾತ್ರಿಯಾಯ್ತು. ಲೋಕಾಯುಕ್ತಕ್ಕೆ ವರ್ಗಾವಣೆಯಾದರೆ ಪಾಲಿಕೆಯ ಸಕಲಷ್ಟು ಹಗರಣಗಳು ಒಂದೊಂದಾಗಿ ಬಯಲಿಗೆ ಬರುತ್ತವೆ ಎಂಬ ಕಾರಣಕ್ಕೆ ಎಲ್ಲರೂ ಒಮ್ಮತದಿಂದ ತೆಪ್ಪಗಾದರು.

ರೆಬೆಲ್ ಆದ ಉಪಮೇಯರ್

ಸಾಮಾನ್ಯ ಸಭೆ ಆರಂಭವಾದಾಗ ಉಪಮೇಯರ್ ಫರ್ಜಾನಾ ಖಾನಂ ವೇದಿಕೆ ಮೇಲಿನ ತಮ್ಮ ಆಸನಕ್ಕೆ ತೆರಳದೆ ಸಾಮಾನ್ಯ ಸದಸ್ಯರ ಜಾಗದಲ್ಲೇ ಕೂತುಕೊಂಡು ಪ್ರತಿಭಟಿಸಿದ ಘಟನೆಗೂ ಸಭೆ ಸಾಕ್ಷಿಯಾಯ್ತು. ಇತರೆ ಸದಸ್ಯರು ವೇದಿಕೆಗೆ ಹೋಗುವಂತೆ ಮನವಿ ಮಾಡಿಕೊಂಡರೂ ಅವರು ತೆರಳಲಿಲ್ಲ. ಕೊನೆಗೆ ಸ್ವತಃ ಮೇಯರ್ ರವಿಕುಮಾರ್ ವೇದಿಕೆಗೆ ಬರುವಂತೆ ಕರೆದಾಗ ಕೋಪಗೊಂಡ ಫರ್ಜಾನಾ ಖಾನಂ 'ನಾನು ಅಲ್ಲಿ ಕುಳಿತುಕೊಳ್ಳಲ್ಲ. ಉಪಮೇಯರ್ ಎಂಬ ಗೌರವ ಇಲ್ಲಿ ಇಲ್ಲವೇ ಇಲ್ಲಾ. ಯಾವ ಅಧಿಕಾರಿ, ಸಿಬ್ಬಂದಿ ಕೂಡ ನಮ್ಮ ಮಾತು ಕೇಳುವುದಿಲ್ಲ. ನನ್ನ ವಾರ್ಡ್ ಕೆಲಸ ನಾನು ಮಾಡಿಕೊಳ್ಳಲು ಅಧಿಕಾರಿಗಳು ಸಹಕರಿಸಲಿಲ್ಲ, ಅಂದರೆ ನಾನು ಉಪಮೇಯರ್ ಸ್ಥಾನದಲ್ಲಿ ಹೇಗೆ ಕೂತುಕೊಳ್ಳಲಿ' ಎಂಬುದಾಗಿ ತಮ್ಮ ಪ್ರಹಸನ ಶುರು ಮಾಡಿದರು. ಸರಿಪಡಿಸುವ ಆಶ್ವಾಸನೆಯನ್ನು ಮೇಯರ್ ನೀಡಿದ ಮೇಲಷ್ಟೇ ಅವರು ವೇದಿಕೆ ಏರಿದ್ದು.

ಒಟ್ಟಿನಲ್ಲಿ ತುಮಕೂರಿನ ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಚರ್ಚಿಸಬೇಕಿದ್ದ, ಪಾಲಿಕೆಯ ಸುತ್ತ ಕೇಳಿಬರುತ್ತಿರುವ ಅಕ್ರಮಗಳ ಬಗ್ಗೆ ವಿಚಾರಿಸಬೇಕಿದ್ದ ಸಾಮಾನ್ಯ ಸಭೆ ಕೇವಲ ಕೂಗಾಟ, ಅರಚಾಟ, ಪ್ರಹಸನಗಳ ನಡುವೆಯೇ ಮುಗಿದುಹೋಯ್ತು. ಅಲ್ಲಿ ಸದಸ್ಯರು ಒಬ್ಬರ ಮೇಲೆ ಮತ್ತೊಬ್ಬರು ಕೆಸರು ಎರಚಿಕೊಳ್ಳುತ್ತಿದ್ದರೆ ಹೊರಗಡೆ ಅಷ್ಟೂ ಕದನವನ್ನು ಟೀವಿ ಪರದೆಯಲ್ಲಿ ನೋಡುತ್ತಿದ್ದ ಜನ 'ಅಯ್ಯೋ ಎಲ್ರೂ ಕಳ್ಳರೇ ಬಿಡ್ರಿ. ಚರ್ಚೆ ಸಾಂಗವಾಗಿ ನಡೆದರೆ ಎಲ್ಲಿ ತಮ್ಮ ಹುಳುಕುಗಳು ಹೊರಗೆ ಬರುತ್ತವೋ ಅಂತ ಮೊದಲೇ ಮಾತಾಡಿಕೊಂಡು ಹೀಗೆ ವ್ಯವಸ್ಥಿತವಾಗಿ ಗದ್ದಲವೆಬ್ಬಿಸಿ ನಮ್ಮನ್ನು ಯಾಮಾರಿಸುತ್ತಿದ್ದಾರೆ' ಅಂತ ಮಾತಾಡಿಕೊಂಡಿದ್ದರಲ್ಲಿ ಸತ್ಯಾಂಶ ಇತ್ತು.

■ ಅನಿಲ್ ಕುಮಾರ್ ಚಿಕ್ಕದಾಳವಟ್ಟ





ಪಾಲಿಕೆಯ ಸದಸ್ಯ ನಯಾಜ್ ಮತ್ತು ವೆಂಕಟೇಶ್ ನಡುವ ನಡೆದ ವಾಗ್ವಾದ









ಅಗಲಿದ ಅಮ್ಮ



ಪ್ರಸಂಗ-1

ಅದು 1989ರ ಕಾಲ. ರಾಘವೇಂದ್ರ ರಾಜ್‌ಕುಮಾರ್‌ರ ಎರಡನೇ ಚಿತ್ರ 'ನಂಜುಂಡಿ ಕಲ್ಯಾಣ' ಇನ್ನೇನು ಬಿಡುಗಡೆಯಾಗಬೇಕು. ಆದರೆ ಕೆಂಪೇಗೌಡ ರಸ್ತೆಯ ಸಂತೋಷ್, ನರ್ತಕಿ, ಅಪರ್ಣ, ತ್ರಿವೇಣಿ ಇತ್ಯಾದಿಯಾಗಿ ಯಾವೊಂದು ಥೇಟರುಗಳೂ ಗಾಂಧಿನಗರದ 'ದೊಡ್ಮನೆ'ಯ ಈ ಚಿತ್ರಕ್ಕೊಂದು ತೆರವಾಗುವ ಸಾಧ್ಯತೆಗಳೇ ಇಲ್ಲ. ಖಾಲಿ ಸಿಗುತ್ತಿದ್ದದ್ದು ಹಳೇ ಕಾಲದ ಕಳಪೆ ಥೇಟರುಗಳ. ಪೈಕಿ ಒಂದೆಂದೇ ಪ್ರತಿಯೊಬ್ಬರೂ ಮೂಗು ಮುರಿಯುತ್ತಿದ್ದ ಸ್ಟೇಟ್ಸ್ ಮಾತ್ರ. ರಾಜ್ ಕುಟುಂಬದ ಬ್ಯಾನರ್‌ನ ಚಿತ್ರವೊಂದು ಸಾಧಾರಣ ಮಟ್ಟದ ಚಿತ್ರಮಂದಿರದಲ್ಲಿ ಬಿಡುಗಡೆಯಾಗುವುದೆಂದರೆ ತಮಾಷೆಯೇ? ಅದಕ್ಕಿಂತ ಅವಮಾನ ಬೇಕೆ?

ಹಾಗಂತ ಕೈಕಟ್ಟಿ ಕೂರುವ ಜಾಯಮಾನ ಪಾರ್ವತಮ್ಮನವರದ್ದಲ್ಲವಲ್ಲ. 'ಏನ್ ಬೇಕಾದ್ರೂ ಆಗ್ಲಿ, ಅಲ್ಲೇ ಬಿಡುಗಡೆ ಮಾಡೋಣವಂತೆ' ಎಂದುಬಿಟ್ಟರು. ಖುದ್ದು ರಾಜ್‌ಗೇ ಇದು ಇಷ್ಟವಿರಲಿಲ್ಲ. ಆದರೂ ಪಾರ್ವತಮ್ಮ ಪಟ್ಟು ಬಿಡಲಿಲ್ಲ. ಹಿಂದಿನ ರಾತ್ರಿಯೇ ಸ್ಟೇಟ್ಸ್ ಥೇಟರಿಗೆ ಅಣ್ಣಾವ್ರನ್ನು ಕರೆತಂದಿದ್ದೇ ಪುರೋಹಿತರನ್ನು ಕರೆಸಿ ಯಾವುದೋ ಹೋಮವೊಂದನ್ನು ಮಾಡಿಸಿದರು. ಮರುದಿನ ಬೆಳಗ್ಗೆಯೇ ಬುಧವಾರ. ಗುರುವಾರ-ಶುಕ್ರವಾರದ ಹೊರತಾಗಿಯೂ ಬುಧವಾರದ ದಿನ ರಾಜ್ ಬ್ಯಾನರ್‌ನ ಚಿತ್ರವೊಂದು ಬಿಡುಗಡೆಯಾಗಿದ್ದು ಇಡೀ ಗಾಂಧಿನಗರವನ್ನೇ ಅಚ್ಚರಿಗೀಡು ಮಾಡಿತ್ತು. ನಂತರದ್ದೇನಿದ್ದರೂ ಇತಿಹಾಸ. ನಂಜುಂಡಿ ಕಲ್ಯಾಣ ಕಳಪೆ ಹಣೆಪಟ್ಟಿ ಹೊತ್ತಿದ್ದ ಸ್ಟೇಟ್ಸ್‌ನಲ್ಲಿ ಬರೋಬ್ಬರಿ ಒಂದು ವರ್ಷ ಓಡಿತು. ಮೆಜೆಸ್ಟಿಕ್‌ನ ಪ್ರತಿಷ್ಠಿತ ಥೇಟರುಗಳ ಮಾಲೀಕರೆಲ್ಲ ಹಣೆಹಣೆ ಚಚ್ಚಿಕೊಂಡರು.

ಪ್ರಸಂಗ-2

1982 ಫೆಬ್ರವರಿಯಲ್ಲಿ ಖ್ಯಾತ ಬಾಲಿವುಡ್ ನಿರ್ದೇಶಕ ಮನಮೋಹನ್ ದೇಸಾಯಿಯೇ ರಾಜ್ ಮನೆಗೆ ಬಂದು ಅಮಿತಾಬ್‌ರ 'ಕೂಲಿ'ಯಲ್ಲಿ ಅತಿಥಿ ಪಾತ್ರವೊಂದನ್ನು ಮಾಡುವಂತೆ ಕೇಳಿಕೊಂಡರು. ಖುದ್ದು ಅಮಿತಾಬ್‌ಗೇ ಫೋನ್ ಮಾಡಿ ಅವರ ಬಾಯಿಂದಲೇ ರಾಜ್‌ಗೊಂದು ಮಾತು ಹೇಳಿಸಿದ್ದರು. ರಾಜ್ 'ಯಾವುದಕ್ಕೂ ಪಾರ್ವತೀನ ಕೇಳಿ....' ಎಂದು ಪತ್ನಿಯತ್ತ ಕೈತೋರಿಸಿದರು. ಈ ಬಗ್ಗೆ ಯೋಚಿಸಿ ಹೇಳ್ತೀವಿ ಎಂದು ದೇಸಾಯಿಯವರನ್ನು ಬೀಳ್ಕೊಟ್ಟ ಪಾರ್ವತಮ್ಮ ಇದಾಗಿ ವಾರಕ್ಕೆ 'ದಯವಿಟ್ಟು ನಮ್ಮನ್ನು ಕ್ಷಮಿಸಿ' ಎಂದು ವಿನಮ್ರವಾಗಿ ಅಮಿತಾಬ್ ಜೊತೆ ನಟಿಸುವ ಅವಕಾಶ ತಿರಸ್ಕರಿಸಿದ್ದರು. ಅಮಿತಾಬ್ ಆಗ ದೇಶಕ್ಕೇ ಸೂಪರ್‌ಸ್ಟಾರ್. ಅಂಥವರೇ ಕೋರಿಕೊಂಡ ಮೇಲೂ ತಿರಸ್ಕರಿಸುವುದು ಸರಿಯೆ? ಎಂದು ಯಾರೋ ಕೇಳಿದ್ದಕ್ಕೆ ಪಾರ್ವತಮ್ಮ ಹೇಳಿದರಂತೆ, ಬೇರೆ ಭಾಷೆ ಚಿತ್ರಗಳಲ್ಲಿ ನಟಿಸದಿರುವ ನಮ್ಮ ನಿರ್ಧಾರ ಇದರಿಂದಾಗಿ ನಗೆಪಾಟಲಿಗೀಡಾಗುವುದಿಲ್ಲವೆ...?

ಪ್ರಸಂಗ-3

ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ರಾಜ್ ವೀರಪ್ಪನ್‌ನಿಂದ ಬಿಡುಗಡೆಗೊಂಡು ಬಂದರಲ್ಲ ಇದಾಗಿ ಎಷ್ಟೋ ದಿನಗಳ ನಂತರ ಸೋನಿಯಾ ಗಾಂಧಿಯೇ ಖುದ್ದಾಗಿ ಫೋನ್ ಮಾಡಿ ಪಾರ್ವತಮ್ಮನವರ ಯೋಗಕ್ಷೇಮ ವಿಚಾರಿಸಿದರಂತೆ. ಮಾತು ಮುಂದುವರಿಸಿ 'ನೀವು ಮೈಸೂರಿನಲ್ಲಿ ನಡೆಸುತ್ತಿರುವ ನಿರಾಶ್ರಿತ ಮಹಿಳೆಯರ ಆಶ್ರಮಕ್ಕೆ ಕೇಂದ್ರದಿಂದ ಇಪ್ಪತ್ತು ಕೋಟಿಯ ಅನುದಾನ ಮಂಜೂರು ಮಾಡಬೇಕೆಂದಿದ್ದೇನೆ' ಎಂದರಂತೆ. ಅದಕ್ಕೆ ಪಾರ್ವತಮ್ಮ ಅಷ್ಟೇ ವಿನಯದಿಂದ ನಮಗದರ ಅಗತ್ಯವಿಲ್ಲ, ಅದನ್ನು ಬೇರೆ ಯಾವುದಾದರೂ ಮಹಿಳಾ ಸೇವಾಸಂಸ್ಥೆಗೆ ನೀಡಿ ಎಂದರಂತೆ. ಇದನ್ನು ಕೇಳಿದ್ದೇ ಸೋನಿಯಾ ಮೇಡಂ ಬಾಯಿಂದ ಬಂದದ್ದು 'ರಿಯಲ್ಲೀ ಯೂ ಆರ್ ಗ್ರೇಟ್...!'

ಪ್ರಸಂಗ-4

ಆ ಹೊತ್ತಿಗಾಗಲೇ ಬಂಗಾರಪ್ಪ ಪುತ್ರಿ ಗೀತಾರ ಜೊತೆ ಶಿವಣ್ಣನ ಮದುವೆಯಾಗಿತ್ತು. ತನ್ನನ್ನು ಮುಖ್ಯಮಂತ್ರಿ ಪಟ್ಟದಿಂದ ಇಳಿಸಿದ ನರಸಿಂಹರಾವ್ ವಿರುದ್ಧ ತಿರುಗಿಬಿದ್ದ ಬಂಗಾರಪ್ಪ ಅದೊಂದು ದಿನ ಸದಾಶಿವನಗರದ ಬೀಗರ ಮನೆಗೆ ಬಂದು ರಾಜ್ ಎದುರು ತನ್ನ ಹೊಸ ಪಕ್ಷಕ್ಕೆ ತಾವೇ ಅಧ್ಯಕ್ಷರಾಗಬೇಕೆಂಬ ಪ್ರಸ್ತಾಪವಿಟ್ಟರು. ಅದಕ್ಕೆ ರಾಜ್ 'ನನ್ನದೇನಿದೆ? ಯಾವುದಕ್ಕೂ ಪಾರ್ವತೀನ ಒಂದು ಮಾತು ಕೇಳಿ' ಎಂದು ಜಾರಿಕೊಂಡರು. ಆಗಲೂ ಪಾರ್ವತಮ್ಮ ಏಕಾಏಕಿ ನಿರಾಕರಿಸಲಿಲ್ಲ, ಒಂದು ತಿಂಗಳು ಕಾಲಾವಕಾಶದ ನಂತರ ರಾಜಕೀಯ ನಮಗೆ ಆಗಿ ಬರಲ್ಲ ಎಂದು ಜ್ಯೋತಿಷಿಯೊಬ್ಬರ ಮೇಲೆ ಹಾಕಿ ಜಾರಿಕೊಂಡರು!

ಇಂಥ ಪ್ರಸಂಗಗಳು ಒಂದೆರಡಲ್ಲ. ರಾಮಕೃಷ್ಣ ಹೆಗಡೆ ಸರಕಾರ ಕುಂಬಳಗೋಡಿನ ಪುನೀತ್ ಫಾರ್ಮ್ ಅನ್ನು ಮುಟ್ಟುಗೋಲು ಹಾಕಿಕೊಳ್ಳಲು ಯತ್ನಿಸಿದಾಗ, ಊಟಿಯಲ್ಲಿ ಶೂಟಿಂಗ್‌ನಿರತ ರಾಜ್ ತಂಡದ ಮೇಲೆ ತಮಿಳು ಭಾಷಾಂಧರಿಂದ ದಾಳಿಯಾದಾಗ, ಎ.ಕೆ. ಸುಬ್ಬಯ್ಯ ರಾಜ್ ಅಭಿಮಾನಿಗಳ ವಿರುದ್ಧ ಕೆಂಡಕಾರಲಾರಂಭಿಸಿದಾಗ, ರಾಜ್ ಅಭಿಮಾನಿಗಳ ಸಂಘ ರಾಜಕೀಯ ಪ್ರವೇಶಿಸಲು ನಿರ್ಧರಿಸಿ ಮಲ್ಲೇಶ್ವರಂನಲ್ಲಿ ಸೋತಾಗ, ರಾಜ್‌ಕುಮಾರ್ ಅಭಿಮಾನಿಗಳಿರಲಿ ಮತ್ತ್ಯಾವುದೇ ಕುಮಾರ್ ಅಭಿಮಾನಿಗಳಾಗಲಿ ಅಂಥವರಿಗೆ ಸರ್ಕಾರ ಗುಂಡಿನ ಮೂಲಕವೇ ಉತ್ತರಿಸುತ್ತದೆಯೆಂದು ಮುಖ್ಯಮಂತ್ರಿಯಾಗಿದ್ದ ಹೆಗಡೆ ಕುಟುಕಿದಾಗ, ದೊಡ್ಮನೆಯ ಏಕಾಧಿಪತ್ಯದ ವಿರುದ್ಧ ಕುಮಾರಸ್ವಾಮಿ ಪ್ರತ್ಯೇಕ ನಿರ್ಮಾಪಕರ ಸಂಘದ ಘೋಷಣೆಗಿಳಿದಾಗ, ಸ್ಲಂ ರಮೇಶ್ ವಿರುದ್ಧ ತನ್ನ ನೆಚ್ಚಿನ ಹುರಿಯಾಳು ಜಯಮಾಲಾ ಫಿಲ್ಮ್ ಛೇಂಬರ್ ಚುನಾವಣೆಯಲ್ಲಿ ಸೋತಾಗ, ಸದಾಶಿವನಗರದ ಬಂಗಲೆಯಿಂದ ಪತ್ನಿ ಸಮೇತ ಶಿವಣ್ಣ ಹೊರಬಿದ್ದಾಗ, ರಾಘವೇಂದ್ರ ರಾಜ್‌ಕುಮಾರ್ ನಿತ್ರಾಣಗೊಂಡು ಸಿಂಗಾಪೂರ್ ಆಸ್ಪತ್ರೆ ಸೇರಿದಾಗ, ತನ್ನದೊಂದು ಮರ್ಜಿಗೂ ಕಾಯದೆ ಸೊಸೆ ಗೀತಾ ಶಿವಮೊಗ್ಗದಲ್ಲಿ ಚುನಾವಣೆಗೆ ನಿಂತಾಗ, ಅಣ್ಣಾವ್ರು ಆಕಸ್ಮಿಕವೆಂಬಂತೆ ಇಹಲೋಕ ತ್ಯಜಿಸಿದಾಗ, ಎಲ್ಲಕ್ಕೂ ಮಿಗಿಲಾಗಿ ಕಾಡುಗಳ್ಳನ ಕಪಿಮುಷ್ಟಿಯಿಂದ ರಾಜ್‌ರನ್ನು ಬಿಡಿಸಿ ತರುವಾಗ-

ಒಬ್ಬ ತಾಯಿಯಾಗಿ, ಮಡದಿಯಾಗಿ, ಹೆಣ್ಣಾಗಿ ಮತ್ತು ಬಲಾಢ್ಯ ಸಿನಿಮಾ ಸಾಮ್ರಾಜ್ಯವೊಂದರ ಅಧಿನಾಯಕಿಯಾಗಿ ಪಾರ್ವತಮ್ಮನವರ ಜಾಗದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ ಏನಾಗುತ್ತಿತ್ತೊ. ಆದರೆ ಪಾರ್ವತಮ್ಮ ಕೇವಲ ಪಾರ್ವತಮ್ಮನಾಗಲಿ, ರಾಜ್‌ರಂಥ ದೈತ್ಯ ಶಕ್ತಿಯೊಂದರ ಪತ್ನಿಯಾಗಿಯಾಗಲಿ, ಗಾಂಧಿನಗರದ ಅಮ್ಮನಂತಾಗಲಿ ಮಾತ್ರವಾಗಿದ್ದರೆ ಮಾತೇ ಬೇರೆಯಿರುತ್ತಿತ್ತು. ಆದರೆ ಈ 'ಅಮ್ಮ'ನ ರೀತಿಯೇ ಬೇರೆ, ತಾಳಿದ ನಿರ್ಧಾರಗಳ ಕಠೋರತೆಯೇ ಬೇರೆ. ಪ್ರತಿಯೊಬ್ಬ ಯಶಸ್ವೀ ಪುರುಷನ ಹಿಂದೆ ಒಬ್ಬ ಓರ್ವ ಪರಿಶ್ರಮ ಹೆಂಗಸಿರುವಂತೆ ರಾಜ್ ಎಂಬ ದೈತ್ಯನ ಹಿಂದಿದ್ದದ್ದು ಪಾರ್ವತಮ್ಮ ಎಂಬ ಶಕ್ತಿದೇವತೆಯೆ. ಬಹುಶಃ ಪಾರ್ವತಮ್ಮ ಇರದಿದ್ದರೆ ರಾಜ್ ಎಂಬ ಶಕ್ತಿಪುರುಷನ ಅಸ್ತಿತ್ವವಿರುತ್ತಿರಲಿಲ್ಲವೇನೊ. ರಾಜ್ ಅದ್ಯಾವ ಮಟ್ಟಿಗೆ ಪಾರ್ವತಮ್ಮನವರನ್ನು ಅವಲಂಬಿಸಿದ್ದರೆಂಬುದಕ್ಕೆ ಇದೊಂದೇ ಸಾಕು- ಅದೊ... ಮೈಸೂರು ಮಾರ್ಗವಾಗಿ ಹೋಗುತ್ತಿರುವಾಗ ಬಾಯ... ಎಳನೀರಿಗೆಂದು ಕಾರು ನಿಲ್ಲಿಸಿದರಂತೆ.

ಅಲ್ಲಿಯತನಕ ರಾಜ್ ನೋಡಿದ್ದು ಐದೋ, ಹತ್ತೋ... ಇಪ್ಪತ್ತರ ನೋಟನ್ನಷ್ಟೇ. ತನ್ನ ಜೇಬಿನಲ್ಲಿದ್ದ ಹತ್ತರ ನೋ... ಸಾಲದೆ ಎಳನೀರಿನವನು ಇಪ್ಪತ್ತು ರೂಪಾಯಿ ಎಂದ... ರಾಜ್ ಚಿಲ್ಲರೆಗಾಗಿ ಪಾರ್ವತಮ್ಮನವರನ್ನು ಕೇಳಿದರು... ಆಗ ತಮ್ಮ ಪರ್ಸಿನಲ್ಲಿದ್ದ ನೂರು ರೂಪಾ... ನೋಟೊಂದನ್ನು ತೆಗೆದು ಪಾರ್ವತಮ್ಮ ಕೈಗಿತ್ತಾಗ... ಮೊದಲ ಬಾರಿಗೆ ರಾಜ್ ನೂರು ರೂಪಾಯಿಯ ನೋ... ನೋಡಿದ್ದಂತೆ. ಬಿಳಿ ಪಂಚೆ ಬಿಳಿ ಅಂಗಿ ತೊಟ್ಟು ಅತ್ಯ... ಸಾಧಾರಣವಾಗಿ ಕಾಣುತ್ತಿದ್ದ ರಾಜ್ ಜೇಬಿನಲ್ಲಿ ಶಾಸ್ತ್ರಕ್ಕೆಂಬ... ಹತ್ತು ರೂಪಾಯಿ ನೋಟಿರುತ್ತಿತ್ತು. ಮೊದಲ ಬಾರಿ ನೂ... ರೂಪಾಯಿಯ ನೋಟು ಕಂಡಾಗಲೇ ರಾಜ್‌ಗೆ ಇ... ಮೊತ್ತದ ನೋಟೂ ಇದೆಯೇ ಎಂದು ಗೊತ್ತಾಗಿದ್ದು...

ಅದು ರಾಜ್‌ಗೆ ಪಾರ್ವತಮ್ಮನವರ ಮೇಲಿ... ಡಿಪೆಂಡೆನ್ಸಿ. ಮೊದಲೆಲ್ಲ ರಾಜ್ ನಟಿಸುತ್ತಿದ್ದದ್ದು ಕೆಸಿ... ಗೌಡ, ವೀರಾಸ್ವಾಮಿ, ಎಂ.ಪಿ. ಶಂಕರ್, ಪಂತ... ದ್ವಾರಕೀಶ್, ಲಕ್ಷ್ಮಣ್, ಸಿವಿಎಲ್ ಶಾಸ್ತ್ರಿಯಂಥ ನಿರ್ಮಾಪ... ಬ್ಯಾನರುಗಳಲ್ಲೇ. ಕೊಟ್ಟಷ್ಟೇ ಕಾಸಿಗೆ ರಾಜ್ ಬಣ್ಣ ಹಚ್ಚಿ... ಕೈಚಾಚಬೇಕು. ಎಷ್ಟು ಥೇಟರುಗಳಲ್ಲಿ ಎ... ಗಳಿಕೆಯಾಯಿತು, ಅದೆಷ್ಟು ದಿನ ಓಡಿತು ಇತ್ಯಾ... ಯಾವುದಕ್ಕೂ ಲೆಕ್ಕವಿರುತ್ತಿರಲಿಲ್ಲ. ಲೆಕ್ಕ ಕೇಳಿದರೂ ಅಸಡ್ಡೆ... ಇದನ್ನು ಸೂಕ್ಷ್ಮವಾಗಿ ಗ್ರಹಿಸಿದ್ದು ಪಾರ್ವತಮ್ಮ. ಪತಿ... ಹೆಸರಲ್ಲಿ ಯಾರ್‍ಯಾರೋ ದುಡ್ಡು ಬಾಚಿಕೊಳ್ಳುವುದಾ... ಅದನ್ನು ತಾವೇ ಮಾಡಬಹುದಲ್ಲವೆ?

ಪಾರ್ವತಮ್ಮನವರ ಈ ಲೆಕ್ಕಾಚಾರ ಮತ್ತು ಕೈಗೊ... ನಿರ್ಧಾರ ಗಾಂಧಿನಗರದ ಗತಿಯನ್ನೇ ಬದಲಿಸಿತು. ಅ... ವಜ್ರೇಶ್ವರಿ ಕಂಬೈನ್ಸ್ ಮತ್ತು ಪೂರ್ಣಿಮಾ ಎಂಟರ್‌ಪ್ರೈ... ಎಂಬ ಚಿತ್ರ ನಿರ್ಮಾಣ ಸಂಸ್ಥೆಗಳ ಹುಟ್ಟಿಗೆ ಕಾರಣವಾಯಿ... 'ತ್ರಿಮೂರ್ತಿ' ರಾಜ್ ತ್ರಿಪಾತ್ರಗಳಲ್ಲಿ ನಟಿಸಿದ ಸ್ವ... ನಿರ್ಮಾಣದ ಮೊದಲ ಚಿತ್ರ. ಅದು ಆ ಕಾಲಕ್ಕೆ ಬಾ... ಆಫೀಸ್ ಚಿಂದಿಯೆಬ್ಬಿಸಿದ ಚಿತ್ರ. ಅದರ ಮೂ... ಒಂದಂತೂ ಸಾಬೀತಾಗಿಹೋಯಿತು. ಬೇರೆ ಯಾರ... ನಿರ್ಮಾಪಕರಿಗೆ ಕಾಲ್‌ಶೀಟ್ ಕೊಟ್ಟು ಅವರ ಸಂಭಾವನೆ... ನೂರು ಪಟ್ಟನ್ನು ತಮ್ಮ ಬ್ಯಾನರ್ ಮೂಲಕ ಗಳಿಸ...







ಮೈಸೂರು: ಕಾವಿ ಸಚ್ಚಿದಾನಂದನ ಅಹಂಕಾರಿ ಬರ್ತ್‌ಡೇ!

ಹಾರ್ರೋ ಮತ್ತಲ್ಲಿ ಯಲ್ಲಮ್ಮನ ಜಾತ್ರೆ ಎಷ್ಟು ...ಯಾಗಿರುತ್ತೆ ಅನ್ನೋದನ್ನು ಮೈಸೂರಿನ ಗಣಪತಿ ...ದ ಆಶ್ರಮದಲ್ಲಿ ನೋಡಬೇಕು. ಆ ಆಶ್ರಮಕ್ಕೆ ಒಬ್ಬ ...ನಿದ್ದಾನೆ. ಆತನೇ ಶ್ರೀ ಗಣಪತಿ ಸಚ್ಚಿದಾನಂದ. ... ಕಾವಿ. ಹೇಳಿಕೊಳ್ಳಲು ಸನ್ಯಾಸಿ, ಸರ್ವಸಂಗ ಪರಿತ್ಯಾಗಿ. ...ನ್ನ ಬರ್ತ್‌ಡೇಗೆಂದು ಆತ ಬರೋಬ್ಬರಿ ಒಂದು ...ರ್ಚು ಮಾಡಿದ ಬಾಬತ್ತಿದೆಯಲ್ಲ ಅದು ಯಾವ ... ಸ್ಟಾರ್‌ನ ಫ್ಯಾಂಟಸಿ ಖರ್ಚಿಗಿಂತ, ಯಾವ ...ಣಿಯ ಬಿಲ್ಡಪ್‌ಗಿಂತ ಕಡಿಮೆ ಇರಲಿಲ್ಲ.

...ತೊಟ್ಟು ತಾನು ದೇವರ ಡೈರೆಕ್ಟ್ ಬುಕ್ಕಿಂಗ್ ಏಜೆಂಟ್ ...ಕೊಂಡು ತಿರುಗಾಡುವ ಬಹುತೇಕ ಅರೆಹುಚ್ಚರಂತೆ ...ದಾನಂದನಿಗೂ ಬುದ್ಧಿಭ್ರಮಣೆಯಾಗಿರೋದು ಆತನ ... ಆಚರಣೆಯಲ್ಲಿ ಸಾಬೀತಾಯ್ತು. ಮೊನ್ನೆ ಆದದ್ದು ...75ನೇ ಜನ್ಮ ದಿನವಂತೆ. ಹಾಗಾಗಿ ನಂಜನಗೂಡು ...ಸ್ತೆಯಲ್ಲಿರುವ ಆಶ್ರಮದಲ್ಲಿ ಮೇ 20ರಿಂದಲೂ ... ಪೂಜೆ, ರುದ್ರಹೋಮ, ನಾರಾಯಣ ಹೋಮ, ...ತನೆ, ದತ್ತಪೀಠ ಪ್ರಶಸ್ತಿ ಪ್ರದಾನ, 'ದತ್ತಪೀಠ ಆಸ್ಥಾನ ... ಪ್ರಶಸ್ತಿ ಪ್ರದಾನ ಹೀಗೆ ಹತ್ತು ಹಲವು ಕಾರ್ಯಕ್ರಮಗಳು ...ವು. ತನ್ನ ಪ್ರಭಾವವನ್ನು ತೋರಿಸಿಕೊಳ್ಳಲು ಈ ...ಭಕ್ಕೆ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ...ನ್ನೇ ಕರೆಸಿದ್ದ ಈತ ಬರ್ತ್‌ಡೇ ಮೂಲಕ ತನ್ನ ... ಹೆಚ್ಚಿಸಿಕೊಂಡದ್ದು ಸುಳ್ಳಲ್ಲ.

...ಲಿ-ಮೂಜಿಗಳ ಮಾರ್ಕೆಟಿಂಗ್

...ಚ್ಚಿದಾನಂದ ಸ್ವಾಮೀಜಿಗೆ ಪ್ರಾಣಿಪಕ್ಷಿಗಳ ಮೇಲೆ ... ಪ್ರೀತಿಯಿದೆ. ಅವರ ಆಶ್ರಮದಲ್ಲಿ ಸಾವಿರಾರು ...ಕ್ಷಿಗಳನ್ನು ಸಾಕುವ ಮೂಲಕ ಗಿನ್ನಿಸ್ ದಾಖಲೆ ...ದ್ದಾರೆ. ಶ್ರೀಗಳು ಧಾರ್ಮಿಕವಾಗಲ್ಲದೆ ಇತರೆ ...ಕ ಕೆಲಸಗಳನ್ನು ಮಾಡಿಕೊಂಡು ಬಂದಿದ್ದಾರೆ. ...ರ್ಯಗಳಿಂದಾಗಿ ದೇಶ-ವಿದೇಶದಲ್ಲಿ ...ಾಸಿಯಾಗಿದ್ದಾರೆ. ಶ್ರೀಗಳ ಹುಟ್ಟುಹಬ್ಬಕ್ಕೆ ನನ್ನ ...ಯಗಳು. ಮುಂದೆಯೂ ಸಾಕಷ್ಟು ಬಾರಿ ಈ ... ಬರುತ್ತೇನೆ. 100 ವರ್ಷದ ಹುಟ್ಟುಹಬ್ಬಕ್ಕೂ ...ಕ್ಕೆ ಬರುತ್ತೇನೆ' ಎಂದೆಲ್ಲ ಈ ತಲೆತಿರುಕ ...ಪಿಯನ್ನು ರಾಜ್ಯವೊಂದರ ಮುಖ್ಯಮಂತ್ರಿ ಆಡಿ ...ತ್ತಿದ್ದರೆ ಕೇಳಿಸಿಕೊಂಡ ಜನ ಮರುಳಾಗದೆ ...ದಾರು?





ಅನ್ನದ ಮೇಲೆ ಅಹಂಕಾರ

ತನ್ನ ಬರ್ತ್‌ಡೆ ಸೆಲಬರೇಷನ್‌ಗೆ ಬರೋಬ್ಬರಿ 1500 ಕೆಜಿ ಕೇಕ್ ತಯಾರಿಸಿದ್ದ. ಈ ಕೇಕ್ ತಯಾರಿಸಲು ಆಂಧ್ರ ಪ್ರದೇಶದಿಂದ ಶಶಿ ಗ್ರೂಪ್ ಬೇಕರ್ಸ್‌ನ ನುರಿತ 50 ಮಂದಿ ಬಂದಿದ್ದರು. 120 ಅಡಿ ಉದ್ದ 3 ಅಡಿ ಅಗಲದ ಇದರ ನಡುವೆ 8 ಅಡಿ ಉದ್ದ 4 ಅಡಿ ಅಗಲದಲ್ಲಿ ಎಸ್‌ಜಿಎಸ್ ಎಂದು ಬರೆಸಲಾಗಿತ್ತು. ಎಸ್‌ಜಿಎಸ್ ಎಂದರೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಎಂದು. ಇನ್ನು ಈ ಬೃಹತ್ ಕೇಕ್‌ನ ನಡುವೆ 108 ಪಾದುಕೆಗಳ ಆಕಾರದ ಚಿಕ್ಕಚಿಕ್ಕ ಕೇಕ್‌ಗಳನ್ನು ಇರಿಸಲಾಗಿತ್ತು, ಅಂದರೆ ಅವು ಸಚ್ಚಿದಾನಂದನ ಮೆಟ್ಟುಗಳ ಪ್ರತಿಗಳಂತಿದ್ದವು. ಕೊನೆಗೆ ಈ ಮೆಟ್ಟಿನ ಕೇಕುಗಳನ್ನೇ ಕೊಯ್ದು ಜನರಿಗೆ ಹಂಚಿದ. ಮೂಢ ಜನರು ಅದನ್ನೇ ಕಣ್ಣಿಗೊತ್ತಿಕೊಂಡು ತಿಂದರು.

ಅದಕ್ಕಿಂತಲೂ ದುರಂತವೆಂದರೆ ಆತ ಆ ಕೇಕ್‌ನ ಸನಿಹಕ್ಕೆ ಬರುವ ಹಾದಿಯುದ್ದಕ್ಕೂ ನಿಪ್ಪಟ್ಟು, ಕೋಡುಬಳೆ, ಚಕ್ಕುಲಿಯಂತಹ ಪದಾರ್ಥಗಳನ್ನು ಹಾಸಲಾಗಿತ್ತು. ಆತ ನಿಜಕ್ಕೂ ದೇವಮಾನವನೇ ಆಗಿದ್ದರೆ, ಕಡೇಪಕ್ಷ ಪ್ರಜ್ಞಾವಂತ ಮನುಷ್ಯನೇ ಆಗಿದ್ದರೆ ಕೋಟ್ಯಂತರ ಹಸಿದ ಹೊಟ್ಟೆಗಳನ್ನು ಅಣಕಿಸುವಂತೆ ತಿನ್ನುವ ಅನ್ನಾಹಾರ ಪದಾರ್ಥಗಳ ಮೇಲೆ ನಡೆದು ಬರುತ್ತಿರಲಿಲ್ಲ. ಆದರೆ ಆ ಅರೆಹುಚ್ಚನಿಗೆ ಅಂಥಾ ಪ್ರಜ್ಞಾವಂತಿಕೆ ಎಲ್ಲಿಂದ ಬರಬೇಕು. ಕಿಂಚಿತ್ತೂ ಪಾಪಪ್ರಜ್ಞೆಯಿಲ್ಲದೆ ತಿನಿಸುಗಳನ್ನು ತುಳಿದುಕೊಂಡು ಬಂದ. ಕೊನೆಗೆ ಅವನ ಚೇಲಾಗಳು ಅದೇ ತಿನಿಸುಗಳನ್ನು ಜನರತ್ತ ಬೇಕಾಬಿಟ್ಟಿಯಾಗಿ ಬಿಸಾಕಿದರು. ಜನ ಅದನ್ನೇ ಪ್ರಸಾದವೆಂದು ತಿಂದು ಕೃತಾರ್ಥರಾದರು!

ಫ್ಯಾಂಟಸಿ ಆಶ್ರಮ

ಮೈಸೂರಿನ ಮಟ್ಟಿಗೆ ಮಠವೆಂದರೆ ಸುತ್ತೂರು ಮಠ, ಸ್ವಾಮೀಜಿ ಎಂದರೆ ಜೆಎಸ್‌ಎಸ್ ಸ್ವಾಮೀಜಿ. ಯಾಕೆಂದರೆ ಇಲ್ಲಿ ಲಿಂಗಾಯತರ ಪಾರುಪತ್ಯವೇ ಹೆಚ್ಚು. ಆ ಕಾರಣಕ್ಕಾಗಿಯೇ ಇಲ್ಲಿ ಬೇರೆ ಮಠಮಾನ್ಯಗಳು ನಗಣ್ಯ. ಆದರೆ, ಶ್ರೀ ಅವದೂತ ದತ್ತಪೀಠ ಆಶ್ರಮ ಇದಕ್ಕೆ ಅಪವಾದ. ಈ ಆಶ್ರಮದ ಬಗ್ಗೆ ಮೈಸೂರಿನ ಸುತ್ತಮುತ್ತಲ ಜನರಿಗೆ ಆಸಕ್ತಿ. ಯಾಕೆಂದರೆ ಸಚ್ಚಿದಾನಂದ ಈ ಆಶ್ರಮವನ್ನು ಕೇವಲ ಧಾರ್ಮಿಕ ಕೇಂದ್ರದಂತೆ ಕಟ್ಟಿಲ್ಲ, ಬದಲಿಗೆ ಅಮ್ಯೂಸ್‌ಮೆಂಟ್ ಪಾರ್ಕ್‌ನಂತೆ ವ್ಯಾವಹಾರಿಕವಾಗಿ ನಿರ್ಮಿಸಿದ್ದಾನೆ. ಎಂದಿನಂತೆ ಧ್ಯಾನಮಂದಿರ, ಯೋಗ ಕೇಂದ್ರ, ವೆಂಕಟೇಶ್ವರ ದೇವಸ್ಥಾನದ ಜೊತೆಗೆ ಜನರನ್ನು ಆಕರ್ಷಿಸಲು ವಿವಿಧ ಪ್ರಾಣಿಪಕ್ಷಿಗಳನ್ನು ಸಾಕಿಕೊಂಡು ಬೊನ್ಸಾಯಿ ಗಿಡಗಳನ್ನು ಬೆಳೆಸಿಕೊಂಡು ಆಶ್ರಮವನ್ನು ಅಟ್ರ್ಯಾಕ್ಟಿವ್ ಮಾಡಿಸಿದ್ದಾನೆ.

ವಾರಪೂರ್ತಿ ವಿಪರೀತ ದುಡಿಯುವ ಕಾಸಿನ ಮಂದಿ ವಾರಾಂತ್ಯದ ವಿಶ್ರಾಂತಿಗೆಂದು ತಂಗುವ ಸ್ಪಿರಿಚುಯಲ್ ರೆಸಾರ್ಟ್‌ನಂತೆ ಇರುವುದರಿಂದ ಇಲ್ಲಿಗೆ ಜನರ ದಾಂಗುಡಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಜನರ ನಾಡಿಮಿಡಿತ ಅರ್ಥಮಾಡಿಕೊಂಡಿರುವ ಈ ಗಣಪತಿ ಸಚ್ಚಿದಾನಂದ ಸ್ವಾಮಿ ಜಾತಿಮಠವಲ್ಲದ ತನ್ನ ಆಶ್ರಮಕ್ಕೆ ಎಲ್ಲ ವರ್ಗದ ಜನರನ್ನು ಸೆಳೆಯಲು ಏನೇನು ಬೇಕೋ ಎಲ್ಲ ವಾತಾವರಣವನ್ನು ಸೃಷ್ಟಿ ಮಾಡಿದ್ದಾನೆ. ಜನರನ್ನು ಆಕರ್ಷಿಸಲು ಸತತ ಸಂಗೀತ ಕಾರ್ಯಕ್ರಮ, ಸಂಗೀತದಲ್ಲಿ ರೋಗಗಳಿಗೆ ಚಿಕಿತ್ಸೆ ಹೀಗೆ ಆಕರ್ಷಣೀಯ ವ್ಯವಹಾರವನ್ನು ವಿಸ್ತರಿಸುತ್ತಿದ್ದಾನೆ. ವಿದೇಶಿಯರು ಆಶ್ರಮದಲ್ಲಿ ಅಡ್ಡಾಡುವಂತೆ ಮಾಡಿದ್ದಾನೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಆಶ್ರಮಕ್ಕೆ ಬರಮಾಡಿಕೊಂಡು ಪ್ರಶಸ್ತಿ ಕೊಟ್ಟು ಸನ್ಮಾನಿಸಿದಂತೆ ಮಾಡಿ ಅವರ ಮೂಲಕ ತನ್ನ ಮೈಲೇಜ್ ವೃದ್ಧಿಸಿಕೊಳ್ಳುತ್ತಿದ್ದಾನೆ. ಅದೇ ಕಾರಣಕ್ಕೆ ಮೊನ್ನೆ ದುಬಾರಿ ಕಪ್ಪ ತೆತ್ತು ದೂರದ ಫಡ್ನಾವೀಸ್ ಕರೆಸಿಕೊಂಡು ಬಾಯ್ತುಂಬ ಹೊಗಳಿಸಿಕೊಂಡದ್ದು.

ಜನರು ವಿದ್ಯಾವಂತರಾದಷ್ಟೂ ಇಂಥಾ ಬೋಗಸ್ ಬೊಗಳೆ ಶೂರರು ಹೆಚ್ಚಾಗುತ್ತಿರೋದು ವಿಪರ್ಯಾಸ. ಸಮಾಜ ವಿದ್ಯಾವಂತ ಆಗುವುದಕ್ಕೂ ವಿಚಾರವಂತ ಆಗುವುದಕ್ಕೂ ಏನು ವ್ಯತ್ಯಾಸ ಅನ್ನೋದನ್ನು ಇಂಥಾ ಅಪಸವ್ಯ ನೋಡಿಯೇ ಅರ್ಥಮಾಡಿಕೊಳ್ಳಬಹುದು. ಜನ ವಿಚಾರವಂತರಾಗದ ಹೊರತು ಇಂಥಾ ದುರಹಂಕಾರಿಗಳ ಧಾರ್ಮಿಕ ದರ್ಪ ಕಡಿಮೆಯಾಗದು.

■ ಶರ







...ದು ಒಂದರ ಮೇಲೊಂದು ಸೂಪರ್‌ಹಿಟ್‌ಗಳ ಕಾರಣವಾಯಿತು.

...ಕನ್ಯೆ, ಒಲವು ಗೆಲವು, ಶಂಕರ್ ಗುರು, ತಾಯಿಗೆ ...ಗ, ರವಿಚಂದ್ರ, ವಸಂತ ಗೀತ, ಹಾವಿನ ಹೆಡೆ, ...ನ್ನ ಗೆಲ್ಲಲಾರೆ, ಭಾಗ್ಯವಂತ, ಹೊಸ ಬೆಳಕು, ...ನು, ಚಲಿಸುವ ಮೋಡಗಳು, ಕವಿರತ್ನ ಕಾಳಿದಾಸ, ...ಲ್ಲ, ಭಕ್ತ ಪ್ರಹ್ಲಾದ, ಸಮಯದ ಗೊಂಬೆ, ...ರೆ, ಭಾಗ್ಯದ ಲಕ್ಷ್ಮಿ ಬಾರಮ್ಮ, ಅನುರಾಗ ಅರಳಿತು, ... ಮನುಷ್ಯ, ಜೀವನ ಚೈತ್ರ-ಹೀಗೆ ಸಾಲು ಸಾಲು ...ಹಿಟ್ ಚಿತ್ರಗಳು ಸೃಷ್ಟಿಗೊಳ್ಳಲು ಕಾರಣವಾಗಿದ್ದೇ ...ಮ್ಮನವರ ಸ್ವಂತ ಬ್ಯಾನರ್ ನಿರ್ಧಾರದಿಂದಾಗಿ.

...ರ್ವತಮ್ಮ ತಮ್ಮ ಸ್ವಂತ ನಿರ್ಮಾಣ ಸಂಸ್ಥೆ ಹುಟ್ಟು... ಹೊತ್ತಿಗೆ ರಾಜ್ ವಯಸ್ಸು ಐವತ್ತು ಮೀರಿತ್ತು. ...ನಿರ್ಮಾಪಕರನ್ನು ಅವಲಂಬಿಸಿಯೇ ರಾಜ್ ...ವಾದಿದ್ದರೆ ಕಾಲಕ್ರಮೇಣ ಪೋಷಕ ಪಾತ್ರಗಳಿಗಷ್ಟೇ ...ಗಬೇಕಿತ್ತು, ಅಣ್ಣ, ತಂದೆ- ಇತ್ಯಾದಿ ಪಾತ್ರಗಳಿಗಷ್ಟೇ ...ಾಗುತ್ತಿತ್ತು, ಯಾವತ್ತು ಸ್ವಂತ ನಿರ್ಮಾಣಕ್ಕಿಳಿದರೋ ...ಲ್ಲಿಗದು ಪುನರ್ಜನ್ಮದಂತಾಯಿತು. ಯುವಕನಂತಾಗಲು ... ಪೋರಿ ಸೋಕ್ಕರು. ತನ್ನ ವಯಸ್ಸು, ದೇಹಸ್ಥಿತಿ, ...ಸವನ್ನು ಮೀರಿ ನಿಲ್ಲುವ ಅವರ ಸಂಕಲ್ಪವೇ ...ಸಿತ್ತು 'ಶಂಕರ್‌ಗುರು' ಚಿತ್ರದ ಪಡ್ಡೆ ಹುಡುಗನಾಗಿ, ...ತ್ಯ ಜಾಗ್' ಚಿತ್ರದ ಬಾಕ್ಸರ್ ಪಾತ್ರದಲ್ಲಿ, 'ಕವಿರತ್ನ ...ದಲ್ಲಿ ಯೌವನ ಭರಿತ ದುಷ್ಯಂತನಾಗಿ, 'ಚಲಿಸುವ ... ಲವಲವಿಕೆಯ ಪ್ರೇಮಿಯಾಗಿ, ಕಾಮನ ಬಿಲ್ಲು, ... ಸಂಗಮ, ಧ್ರುವತಾರೆ, ಅನುರಾಗ ಅರಳಿತು, ಒಂದು ...ತ ಮುಂತಾದ ಚಿತ್ರಗಳಲ್ಲಿ ರಾಜ್ ಕಾಣಿಸಿಕೊಂಡ ...ದೇ ಚಿತ್ರದ ಸಂಪತ್ತಾಯಿತು.

...ದೊಂದು ಪವಾಡ ಮತ್ತು ಪರಿವರ್ತನೆಯ ...ಪ್ಪ ಪಾರ್ವತಮ್ಮನವರ ದೃಢಸಂಕಲ್ಪ, ತಂದೆ, ಅಣ್ಣ, ತಾತ ಇತ್ಯಾದಿ ಪಾತ್ರಗಳು ಬೇಡುವ ವಯಸ್ಸಿನ ಕಾಲಕ್ಕೆ ರಾಜ್ ಪ್ರೇಮಿಯಾಗಿ, ಯುವಕನಾಗಿ ಅಷ್ಟೊಂದು ಲವಲವಿಕೆಯಿಂದ ನಟಿಸಲು ಸಾಧ್ಯವಾಗಿದ್ದು ಬಹುಶಃ ತೆಲುಗಿನ ನಾಗೇಶ್ವರ್ ರಾವ್ ಹೊರತುಪಡಿಸಿದರೆ ರಾಜ್‌ಗೆ ಮಾತ್ರವೇ.

ಹೀಗೆ ತನ್ನ ಪತಿಯನ್ನು ಅಸಾಧ್ಯ ದುಸ್ಸಾಹಸವೊಂದಕ್ಕೆ ಪ್ರೇರೇಪಿಸುವ ಮೂಲಕ ಪಾರ್ವತಮ್ಮ ಒಂದಲ್ಲ ಎರಡಲ್ಲ ಬರೋಬ್ಬರಿ ಎಂಬತ್ತು ಕನ್ನಡ ಚಿತ್ರಗಳ ನಿರ್ಮಾಣಕ್ಕೆ ಕಾರಣರಾಗಿದ್ದು ಸಣ್ಣ ಮಾತೇನಲ್ಲ. ಹೊರಗಿನ ನಿರ್ಮಾಪಕರನ್ನು ನಂಬಿಕೊಂಡೇ ರಾಜ್ ಬದುಕಿದ್ದರೆ ಐವತ್ತರ ಆಸುಪಾಸಿಗೇ ಅವರ ಬಣ್ಣದ ಬದುಕು ಅಂತ್ಯ ಕಾಣುತ್ತಿತ್ತೇನೊ. ಆ ಕಾಲಕ್ಕೆ ಸ್ವಂತ ನಿರ್ಮಾಣದ ಚಿತ್ರ ನಿರ್ಮಿಸುವುದೇನೂ ಸುಲಭದ ಮಾತಾಗಿರಲಿಲ್ಲ. ಈಗಿನಂತೆ ಸುಲಭಕ್ಕೆ ದುಡ್ಡು ಹುಟ್ಟುತ್ತಿರಲಿಲ್ಲ. ಅದೇ ಹೊತ್ತಿಗೆ ರಾಜ್ ಕೈಯಿಟ್ಟ ಮತ್ತೊಂದು ದುಸ್ಸಾಹಸವೆಂದರೆ ತನ್ನ ಚಿತ್ರದ ಹಾಡಿಗೆ ತಾನೇ ಧನಿಯಾಗುವುದು.

ಅದೂ ಕೂಡ ಅವಮಾನದ ಕಾರಣಕ್ಕೆ ಹುಟ್ಟಿಕೊಂಡ ಸಾಹಸವೇ. ಹಿಂದೆಲ್ಲಾ ರಾಜ್ ಹಾಡುಗಳೆಂದರೇನೇ ಪಿ.ಬಿ. ಶ್ರೀನಿವಾಸ್ ಕಂಠಸಿರಿ ಎಂಬಂತಿತ್ತು. ಅದೊಮ್ಮೆ ಹಾಡಿನ ರೆಕಾರ್ಡಿಂಗ್‌ಗೆ ಬರಲು ಪಿ.ಬಿ. ಶ್ರೀನಿವಾಸ್ ಸತಾಯಿಸಿ ರಾಜ್ ಮುಖಕ್ಕೆ ಹೊಡೆದಂತೆ, 'ಇರಯ್ಯಾ.... ನಾನು ಹಾಡಿದರೇನೇ ನಿನ್ನ ಸಿನಿಮಾ ಓಡೋದು ಗೊತ್ತಾ?' ಎಂದು ಸಿಡುಕಿಬಿಟ್ಟರಂತೆ. ರಾಜ್‌ಗಾದ ಈ ಅವಮಾನವನ್ನೇ ಪಾರ್ವತಮ್ಮ ಸವಾಲಾಗಿ ಪರಿಗಣಿಸಿದರು. ಆವತ್ತಿನಿಂದ ರಾಜ್ ತನ್ನ ಪಾತ್ರಕ್ಕೆ ತಾನೇ ಹಾಡಲು ನಿರ್ಧರಿಸಿಬಿಟ್ಟರು. 'ಸಂಪತ್ತಿಗೆ ಸವಾಲ್' ಚಿತ್ರದ 'ಯಾರೇ ಕೂಗಾಡಲಿ' ಅದೆಷ್ಟು ಜನಪ್ರಿಯವಾಯಿತೆಂದರೆ ನಾಡಿನ ಉದ್ದಗಲಕ್ಕೂ ಯಾವುದೇ ಜಾತ್ರೆ, ಯಾವುದೇ ಸಮಾರಂಭ, ಯಾವುದೇ ಸಂತೆಯಲ್ಲೂ ಯಾರೇ ಕೂಗಾಡಲಿ ಕಡ್ಡಾಯವಾಗಿ ಹೋಯಿತು.

ಕಾಲಕ್ರಮೇಣ ರಾಜ್ ಕಂಠಸಿರಿಯೆಂಬುದು ಪಿ.ಬಿ. ಶ್ರೀನಿವಾಸ್‌ರ ಕಂಠದ ಇಂಪನ್ನೇ ಮೀರಿ ನಿಂತಿತು. ಹಾಡಿನಿಂದಲೆ ರಾಜ್ ಕೋಟಿ ಸಂಪಾದಿಸುವಂತಾಯಿತು. ತನ್ನ ಬದುಕಿನ ಕೊನೆಗಾಲದವರೆಗೂ ರಾಜ್ ಹೀರೋ ಪಾತ್ರ ಬಿಟ್ಟರೆ ಮತ್ತಾವುದೇ ಪಾತ್ರ ಮಾಡದ ಹಾಗೆ ಮಾಡಿದ್ದರ ಹಿಂದಿದ್ದದ್ದು ಇದೇ ಪಾರ್ವತಮ್ಮ.

ಐವತ್ತರ ಆಸುಪಾಸಿಗೇ ರಾಜ್ ಪೋಷಕ ಪಾತ್ರಗಳತ್ತ ತಳ್ಳಲ್ಪಟ್ಟಿದ್ದರೆ, ಕೇವಲ ಸಂಭಾವನೆಯನ್ನು ನಂಬಿ ಬದುಕಿದ್ದರೆ, ಸ್ವಂತ ನಿರ್ಮಾಣಕ್ಕಿಳಿಯದೇ ಹೋಗಿದ್ದರೆ ಇವತ್ತು ಕನ್ನಡ ಚಿತ್ರರಂಗದ ದುರ್ಗತಿ ಯಾವ ಮಟ್ಟಕ್ಕಿರುತ್ತಿತ್ತೋ- ರಾಜ್ ಎಂಬ ಶಕ್ತಿ ಎದ್ದು ನಿಲ್ಲದೇಹೋಗಿದ್ದರೆ ಗೋಕಾಕ್ ವರದಿಯಂಥ ಐತಿಹಾಸಿಕ ಜನಾಂದೋಲನವೇ ನಡೆಯುತ್ತಿರಲಿಲ್ಲ. ಗುಂಡೂರಾವ್ ಸರ್ಕಾರವಾಗಲಿ, ಕಾಂಗ್ರೆಸ್ ಪತನಗೊಂಡು ಜನತಾ ಸರ್ಕಾರ ಸ್ಥಾಪನೆಯಾಗಲಿ ಸಂಭವಿಸುತ್ತಲೂ ಇರಲಿಲ್ಲ. ಕನ್ನಡದ ಹೊರತಾಗಿ ಬೇರೆ ಭಾಷೆಯಲ್ಲಿ ತಾನು ನಟಿಸುವುದಿಲ್ಲ ಎಂಬ ರಾಜ್ ನಿರ್ಧಾರ ಕೇವಲ ಸೋಗಿನ ಘೋಷಣೆಯಷ್ಟೇ ಆಗಿರಲಿಲ್ಲ. ಅದರ ಹಿಂದಿದ್ದದ್ದು ಮಾರುಕಟ್ಟೆ ತಂತ್ರ. ಅಂದರೆ ರಾಜ್ ವರ್ಚಸ್ಸನ್ನು ಅವಲಂಬಿಸಿಯೇ ಕನ್ನಡ ಚಿತ್ರಗಳ ಮಾರುಕಟ್ಟೆ ನಿರ್ಮಿಸುವುದು. ಮುಂದೆ ಇದೇ ಗೋಕಾಕ್ ವರದಿ ಹೋರಾಟಕ್ಕೆ ಮೂಲವಾಯಿತು. ಮೇಲುನೋಟಕ್ಕದು ಸಂಸ್ಕೃತದ ವಿರುದ್ಧ ಮಣ್ಣಿನ ಮಕ್ಕಳ ಸಮರದಂತೆ ಕಂಡರೂ ಇದರ ಆಳದಲ್ಲಿದ್ದದ್ದು ವೈದಿಕಶಾಹಿಯೇ!

ರಾಜ್ ಬೀದಿಗಿಳಿದ ಫಲವಾಗಿಯೇ ಕಾಂಗ್ರೆಸ್ ಪತನಗೊಂಡು ಬಿಜೆಪಿ, ಜನಸಂಘ ಬೆಂಬಲಿತ ಜನತಾ ಸರ್ಕಾರ ಅಧಿಕಾರಕ್ಕೆ ಬಂತು. ಇಷ್ಟೆಲ್ಲಕ್ಕೂ ಕಾರಣಕರ್ತರಾಗಿದ್ದ ಬಂಗಾರಪ್ಪ ಬದಲಿಗೆ ಹೆಗಡೆ ಮುಖ್ಯಮಂತ್ರಿಯಾಗಿ ಗೋಕಾಕ್ ಕಾಲಕ್ಕೆ ರಾಜ್‌ರನ್ನು ಹಾಡಿ ಹೊಗಳಿ ದೇವರಾಗಿಸಿದ್ದ ವೈದಿಕ ಪತ್ರಕರ್ತರೇ ಹೆಗಡೆ ಕಾಲಕ್ಕೆ ರಾಜ್ ವಿರುದ್ಧ ತಿರುಗಿಬಿದ್ದ ವಿಕಟವನ್ನು ಬೇರೆಲ್ಲರಿಗಿಂತಲೂ ಸೂಕ್ಷ್ಮವಾಗಿ ಗ್ರಹಿಸಿದ್ದು ಪಾರ್ವತಮ್ಮನವರೇ. ಇದೇ ರಾಜ್ ರಾಜಕೀಯ ಪ್ರವೇಶವನ್ನು ತಡೆಗಟ್ಟಿತು. ಬಹುಶಃ ರಾಜ್ ರಾಜಕೀಯಕ್ಕೆ ಬಂದಿದ್ದರೆ ಏನೆಲ್ಲಾ ಪಜೀತಿಗಳಾಗುತ್ತಿತ್ತೋ ಅದೆಲ್ಲವನ್ನೂ ಆಂಧ್ರದಲ್ಲಿ ಎನ್‌ಟಿಆರ್ ಸಾಬೀತು ಮಾಡಿ ತೋರಿಸಿದ ಮೇಲೂ ರಾಜ್ ರಾಜಕೀಯಕ್ಕೆ ಬರುವುದರಲ್ಲಿ ಅರ್ಥವಿರಲಿಲ್ಲ. ರಾಜ್‌ರ ಇಂಥಾದೊಂದು ನಿರ್ಧಾರದ ಹಿಂದಿದ್ದದ್ದೂ ಪಾರ್ವತಮ್ಮನವರೇ.


ರಾಜ್‌ಗೆ ವಯಸ್ಸಾಗಿ ಇನ್ನೇನು ಬಣ್ಣದ ಬದುಕೇ ಮುಗಿಯಿತೆನ್ನುವಾಗಲೂ ಪಾರ್ವತಮ್ಮ ಕುಗ್ಗಲಿಲ್ಲ. ಶಿವಣ್ಣನನ್ನು ರೂಪಿಸಿದರು. ಆ ಕಾಲದ ಬೇರೆಲ್ಲ ಹೀರೋಗಳ ಮುಂದೆ ಅಂಥ ಸ್ಪುರದ್ರೂಪಿಯಲ್ಲದ ಶಿವಣ್ಣನ ಮುಂದೆ ಶಕ್ತಿದೇವತೆಯಾಗಿ ನಿಂತಿದ್ದೂ ಪಾರ್ವತಮ್ಮನೇ. ಆದರೆ ಶಿವಣ್ಣನೂ ಹೆಚ್ಚು ಕಾಲ ಅಮ್ಮನ ಕೂಸಾಗುಳಿಯಲಿಲ್ಲ. ಇದೇ ಹೊತ್ತಿಗೆ ರಾಘುವಿನ ಸಿನಿಮಾ ಕೆರಿಯರ್ ಕೂಡ ಮುಗಿದಿತ್ತಲ್ಲ. ಇಂಥಾ ಸ್ಥಿತಿಯಲ್ಲೂ ಧೃತಿಗೆಡದೇ ಪಾರ್ವತಮ್ಮ ಅಪ್ಪುವನ್ನು ಎದ್ದು ನಿಲ್ಲಿಸಿದರು. ವಜ್ರೇಶ್ವರಿ ಕಂಬೈನ್ಸ್ ಮತ್ತು ಪಾರ್ವತಮ್ಮನವರ ಹೆಸರಿಗಿದ್ದ ತಾಕತ್ತೇ ಅಂಥಾದ್ದು. ರೂಪದಲ್ಲಾಗಲಿ, ಅಂದದಲ್ಲಾಗಲಿ ಏನೇನೂ ಅಲ್ಲದ ಪುನೀತ್ ಕನ್ನಡದ ನಂಬರ್ ಒನ್ ಹೀರೋ ಎನ್ನಿಸುವಂತೆ ಬೆಳೆದ ಪರಿಯೇ ಪಾರ್ವತಮ್ಮನವರ ಶಕ್ತಿಯ ಪ್ರತೀಕ.

ಪಾರ್ವತಮ್ಮನವರಿಲ್ಲದ ರಾಜ್ ಎಂಬ ಶಕ್ತಿಯನ್ನು ಹೇಗೆ ಕಲ್ಪಿಸಿಕೊಳ್ಳಲು ಕಷ್ಟವೋ ಹಾಗೆಯೇ ಪಾರ್ವತಮ್ಮನವರಿಲ್ಲದ ರಾಜ್ ಕುಟುಂಬವನ್ನಾಗಲಿ, ವಜ್ರೇಶ್ವರಿ ಸಂಸ್ಥೆಯನ್ನಾಗಲಿ, ಕನ್ನಡ ಚಿತ್ರರಂಗವನ್ನಾಗಲಿ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆಗಲಿದ್ದು ಕೇವಲ ಪಾರ್ವತಮ್ಮ ಮಾತ್ರವೇ ಅಲ್ಲ, ಅದು ಗಾಂಧಿನಗರದ ಶಕ್ತಿ ದೇವತೆಯೂ ಹೌದು. ಕನ್ನಡದ ಚಿತ್ರರಂಗದ ಪಾಲಿನ ತಾಯಿಯೂ ಕೂಡ.

ಅಮ್ಮಾ ನಿಮ್ಮ ಋಣದ ಭಾರ ಅಪಾರ; ನಿಮಗಿದೋ ನಮ್ಮ ನಮಸ್ಕಾರ...!

● ರಾ. ಸೋಮನಾಥ್

ರಾಮರಾಜ್ಯ ಸ್ತ್ರೀ ಮತ್ತು ಶೂದ್ರ ವಿರೋಧಿ ರಾ



■ ಪ್ರೊ। ಕೆ. ಎಸ್. ಭಗವಾನ್

ರಾಮನು ಅಯೋಧ್ಯೆಯ ರಾಜನಾಗಿ ಪಟ್ಟಾಭಿಷಿಕ್ತನಾದಾಗ "ಬ್ರಾಹ್ಮಣರಿಗೆ ಕುದುರೆಗಳು, ಹಾಲು ಕೊಡುವ ಹಸುಗಳು, ಹೋರಿಗಳನ್ನು ಲಕ್ಷಗಟ್ಟಲೆ ದಾನ ಮಾಡಿದನು. ಮೂವತ್ತು ಕೋಟಿ ಚಿನ್ನದ ನಾಣ್ಯಗಳನ್ನು ಬ್ರಾಹ್ಮಣರಿಗೆ ಕೊಟ್ಟು ಗೌರವಿಸಿದನು. ಜೊತೆಗೆ ವಿವಿಧ ಬಗೆಯ ಆಭರಣಗಳನ್ನು ವಸ್ತ್ರಗಳನ್ನೂ ದಾನಮಾಡಿದನು" (ಯುದ್ಧಕಾಂಡ, ಸರ್ಗ 131, ಶ್ಲೋಕ 73-5).

ಮಹಾರಾಜ ದಶರಥನಿಗೆ ಮಕ್ಕಳಾಗಲೆಂದು ಅಶ್ವಮೇಧ ಯಾಗ ನೆರವೇರಿಸಿದ ಬ್ರಾಹ್ಮಣರಿಗೆ "ಹತ್ತು ಲಕ್ಷ ಗೋವುಗಳನ್ನು, ಹತ್ತು ಕೋಟಿ ಸುವರ್ಣ ನಾಣ್ಯಗಳನ್ನು, ನಲವತ್ತು ಕೋಟಿ ಬೆಳ್ಳಿನಾಣ್ಯಗಳನ್ನು ಅರ್ಪಿಸಿದನು... ಯಾಗವನ್ನು ನೋಡಲು ಬಂದಿದ್ದ ಬ್ರಾಹ್ಮಣರಿಗೆ ಕೋಟಿಗಟ್ಟಲೆ ಸುವರ್ಣ ನಾಣ್ಯಗಳನ್ನು ದಕ್ಷಿಣೆಯಾಗಿ ಕೊಟ್ಟನು. ಒಬ್ಬ ಬಡ ಬ್ರಾಹ್ಮಣನು ದಶರಥನು ಕೈಗೆ ಹಾಕಿಕೊಂಡಿದ್ದ ಅಮೂಲ್ಯವಾದ ಹಸ್ತಾಭರಣವನ್ನೇ ಕೇಳಲು ದಶರಥ ಸಂತೋಷದಿಂದ ಅದನ್ನು ಕೊಟ್ಟುಬಿಟ್ಟನು... ಬ್ರಾಹ್ಮಣರಿಗೆ ದಶರಥ ಮಹಾರಾಜ ಸಾಷ್ಟಾಂಗ ನಮಸ್ಕಾರ ಮಾಡಿದನು" (ಬಾಲಕಾಂಡ ಸರ್ಗ 14, ಶ್ಲೋಕ 53-55.)


ಆದರೆ ರಾಮ ವೈಶ್ಯರಿಗೆ, ಶೂದ್ರರಿಗೆ, ಮೈಮುರಿದು ದುಡಿದು ಸಂಪತ್ತನ್ನು ಉತ್ಪತ್ತಿ ಮಾಡುವ ಜನರಿಗೆ ಏನೂ ದಾನ ಮಾಡಲಿಲ್ಲ. ರಾಮ ಕೊಟ್ಟದ್ದೆಲ್ಲ ಬ್ರಾಹ್ಮಣರಿಗೆ. ರಾಮ ಸಂಪೂರ್ಣವಾಗಿ ಬ್ರಾಹ್ಮಣರ ಪರ ಇದ್ದಾನೆ. ಅವನು ಶೂದ್ರರ ಪರ, ರೈತರ ಪರ ಇಲ್ಲ. ಹಾಗಾಗಿ ಶ್ರಮಜೀವಿಗಳು ಇವತ್ತಿಗೂ ಗರೀಬರಾಗಿಯೇ ಇದ್ದಾರೆ. ಇದನ್ನು ಅರ್ಥಮಾಡಿಕೊಳ್ಳದ ಶೂದ್ರರು ಅಂದರೆ ಎಲ್ಲಾ ಅಬ್ರಾಹ್ಮಣರು ಬ್ರಾಹ್ಮಣರ ಕುತಂತ್ರಗಳನ್ನು ತಿಳಿಯದೆ ಬೆಂಬಲಿಸುತ್ತಿದ್ದಾರೆ. ಇನ್ನು ಮುಂದಾದರೂ ಅವರು ಎಚ್ಚರಗೊಳ್ಳುವರೇ? ರಾಮನು ಹಾರುವರ ಚಾಡಿ ಮಾತು ಕೇಳಿಕೊಂಡು ತನ್ನ ಏಳಿಗೆಗಾಗಿ ತಪಸ್ಸು ಮಾಡುತ್ತಿದ್ದ ಶಂಬೂಕನನ್ನು ಶೂದ್ರ ಎನ್ನುವ ಕಾರಣಕ್ಕೆ ಕೊಂದುಹಾಕಿದ್ದಾನೆ. ಏಕೆಂದರೆ, ತಪಸ್ಸು ಬ್ರಾಹ್ಮಣರ ಹಕ್ಕಂತೆ! ಶಂಬೂಕನ ತಪಸ್ಸಿನಿಂದ ಬ್ರಾಹ್ಮಣ ಕುವರ ಸತ್ತನೆಂದು ಶಂಬೂಕನನ್ನು ರಾಮ ಕೊಂದುಬಿಟ್ಟ. ಆಮೇಲೆ ಬ್ರಾಹ್ಮಣ ಕುಮಾರ ಬದುಕಿಕೊಂಡನು! (ಉತ್ತರ ಕಾಂಡ, ಸರ್ಗ 73 ರಿಂದ ಸರ್ಗ 76 ರವರೆಗೆ). ಬ್ರಾಹ್ಮಣರು ರಾಮನನ್ನು ದೇವರೆಂದು ಏಕೆ ಕರೆಯುತ್ತಾರೆ ಎಂದು ಈಗ ಸ್ಪಷ್ಟವಾಗುತ್ತದೆ, ಅಲ್ಲವೇ?

ಇದಲ್ಲದೆ ರಾಮನು ತುಂಬು ಗರ್ಭಿಣಿಯಾದ ಸೀತಾದೇವಿಯನ್ನು ಕಾಡಿಗೆ ತಳ್ಳುತ್ತಾನೆ (ಉತ್ತರಕಾಂಡ, ಸರ್ಗ 43 ರಿಂದ ಸರ್ಗ 48 ವರೆಗೆ).

ಇವೆರಡು ಪ್ರಸಂಗಗಳು ರಾಮನಿಗೆ ಮಾನವೀಯತೆ ಇಲ್ಲ ಎಂದು ಸಾಬೀತು ಪಡಿಸುತ್ತವೆ. ರಾಮನದು ರಾಮ ರಾಜ್ಯ ಅಲ್ಲ. ಅದು ಸಂಪೂರ್ಣ ಕ್ರೂರ ರಾಜ್ಯ. ಬ್ರಾಹ್ಮಣರಿಗೆ ರಾಮನಿಂದ ಅನುಕೂಲವಾಯಿತು ಎಂದು ಅದನ್ನು 'ರಾಮರಾಜ್ಯ' ಎಂದು ಅವರು ಹೊಗಳಿಬಿಟ್ಟದ್ದಾರೆ. ರಾಮ ರಾಜ್ಯ ಸರ್ವಸಮಾನತೆಯ ಮಾನವ ರಾಜ್ಯ ಆಗಿರಲಿಲ್ಲ. ರಾಮರಾಜ್ಯ ಸ್ತ್ರೀ ವಿರೋಧಿ ಮತ್ತು ಶೂದ್ರ ವಿರೋಧಿ ರಾಜ್ಯ ಆಗಿತ್ತು. ಅಂಥ ರಾಮರಾಜ್ಯವನ್ನೇ ಈಗಲೂ ಪ್ರತಿಪಾದಿಸುತ್ತಾ ಸಮಾಜವನ್ನು ಒಡೆಯುವ ಕೆಲಸ ಮಾಡುತ್ತಿರುವುದನ್ನು ಬ್ರಾಹ್ಮಣೇತರರು ತೀವ್ರವಾಗಿ ವಿರೋಧಿಸಬೇಕು, ತಡೆಗಟ್ಟಲೇಬೇಕು.

ಅಸಮಾನತೆಯನ್ನು ಶಾಸನ ಮಾಡಿ ಅದನ್ನೇ ಧರ್ಮ ಎಂದು ಘೋಷಿಸಿರುವ 'ಮನುಸ್ಮೃತಿ'ಯನ್ನು ನೋಡಿ:

"ಸ್ತ್ರೀ ಶೂದ್ರ ವಿಟ್ ಕ್ಷತ್ರವಧೋ ನಾಸ್ತಿಕಂ ಚೋಪಪಾತಕಂ. (ಮನುಸ್ಮೃತಿ 11. 66.) -ಸ್ತ್ರೀಯರು ಮತ್ತು ಶೂದ್ರರನ್ನು ಕೊಲ್ಲುವುದು ಪಾಪವಲ್ಲ". ಇದನ್ನು ನೋಡಿದರೆ ರಾಮ ಎಂಥ ಪಾಪಕೃತ್ಯಗಳ ಪರ ಇದ್ದಾನೆ ಎಂಬುದು ಖಚಿತವಾಗುತ್ತದೆ. ಈ ಎರಡು ಪ್ರಸಂಗಗಳು - ಸೀತಾ ಪರಿತ್ಯಾಗ ಮತ್ತು ಶಂಭೂಕ ವಧೆ - ಬ್ರಾಹ್ಮಣ ಮತದ ಕ್ರೂರ ಕರಾಳ ಅಂತರಂಗವನ್ನು ಹಾಗೂ ಇವರು ಪ್ರತಿಪಾದಿಸುವ ಹಿಂದೂ ವ್ಯವಸ್ಥೆಯ ವ್ಯಾಘ್ರತೆಯನ್ನು ಬಹಿರಂಗಪಡಿಸುತ್ತವೆ.



ರಾಜನಾದಮೇಲೆ ರಾಮ ರಾಜ್ಯಭಾರ ಮಾಡುತ್ತಿರಲಿಲ್ಲ. ಈಗಾಗಲೇ ರಾಜ್ಯಾಡಳಿತದ ಅನುಭವ ಇದ್ದ ಅವನ ತಮ್ಮ ಯುವರಾಜ (ಯುದ್ಧಕಾಂಡ ಸರ್ಗ 131, ಶ್ಲೋಕ 93)ನಾದ ಭರತ ಅವನ ಹೆಸರಿನಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಹಾಗಾದರೆ ರಾಮ ಏನು ಮಾಡುತ್ತಿದ್ದ? ಎಂದರೆ ಮಧ್ಯಾಹ್ನದವರೆಗೆ ಪೂಜೆ ಪುನಸ್ಕಾರಗಳಲ್ಲಿ ಪುರೋಹಿತರ ಜೊತೆ ಸಮಯ ಸವೆಸುತ್ತಿದ್ದ. (ಉತ್ತರಕಾಂಡ ಸರ್ಗ 42, ಶ್ಲೋಕ 26.) ಮಧ್ಯಾಹ್ನದ ಮೇಲೆ ಸುಂದರ ಸ್ತ್ರೀಯರ ಜೊತೆ ರಾಮ ಕಾಲ ಕಳೆಯುತ್ತಿದ್ದನು. "ರಾಮೋ ರಮಯತಾಂ ವರಃ - ಸ್ತ್ರೀಯರಿಗೆ ಇಷ್ಟವಾದ ಗಂಡಸರಲ್ಲಿ ರಾಮ ಶ್ರೇಷ್ಠನಾಗಿದ್ದನು. ರಾಮ ಸ್ತ್ರೀಸಹವಾಸ ಪ್ರೇಮಿ. (ಉತ್ತರ ಕಾಂಡ ಸರ್ಗ 42, ಶ್ಲೋಕ 19-22.) ಅಲ್ಲದೆ ಸೀತೆಯ ಜೊತೆ ರಾಮ ಮದ್ಯಪಾನ ಮಾಡುತ್ತಿದ್ದ:

ಸೀತಾಮಾದಾಯ ಹಸ್ತೇನ ಮಧು ಮೈರೇಯಕಂ ಶುಚಿ.
ಪಾಯಯಾಮಾಸ ಕಾಕುತ್ಸ್ಥಃ ಶಚೀಮಿವ ಪುರಂದರಃ
ಮಾಂಸಾನಿ ಚ ಸುಮೃಷ್ಟಾನಿ ಫಲಾನಿ ವಿವಿಧಾನಿ ಚ.

(ಉತ್ತರ ಕಾಂಡ ಸರ್ಗ 42, ಶ್ಲೋಕ 18-19.) (ಮೈರೇಯಕ - ನೆಲ್ಲಿಕಾಯಿ, ಮರಾಟಿಮೊಗ್ಗು, ಬೆಲ್ಲ ಇವುಗಳಿಂದ ಮದ್ಯ; ಕಳ್ಳಬಟ್ಟಿ ಸಾರಾಯಿ? ಮಧು - ಕಳ್ಳು,

"ಶುಚಿಯಾದ ಮೈರೇಯಕ(ಸಾರಾಯಿ... ಪೇಯ)ವನ್ನು ದೇವೇಂದ್ರನು ತನ್ನ ಹೆಂಡತಿ... ಕುಡಿಸಿದಂತೆ ರಾಮ ತನ್ನ ಕೈಯಿಂದ ಸೀತೆಗೆ ಕುಡಿ... ಅವರ ಊಟಕ್ಕೆ ಸೇವಕರು ಒಳ್ಳೆಯ ಮಾ... ಬಗೆಬಗೆಯ ಹಣ್ಣುಗಳನ್ನು ತಂದರು". ಹೀಗೆ... ಭೋಗ ಜೀವನ ನಡೆಸುತ್ತಿದ್ದನು.

ಇಂಥ ರಾಮನಿಗೆ ದೇವಸ್ಥಾನ ಕಟ್ಟುವುದು ಸ... ರಾಮ ಆದರ್ಶ ಪುರುಷ ಅಲ್ಲ, ಮರ್ಯಾ... ಪುರುಷೋತ್ತಮನಂತೂ ಅಲ್ಲವೇ ಅಲ್ಲ. ಉತ್ತ... ನಾನೇ ಬರೆದದ್ದು (ತಥೋತ್ತರಮ್' 1. 4. 2.)... ವಾಲ್ಮೀಕಿ ಹೇಳಿದ್ದಾನೆ. ಆದರೆ ಈ ಅಂಶಗಳು ... ಇಷ್ಟವಿಲ್ಲವಾದ್ದರಿಂದ ಇದು ಪ್ರಕ್ಷಿಪ್ತ ಎಂದು ಹೇ... ನಮ್ಮ ವಿದ್ವಾಂಸರ ಮರ್ಜಿ.

ಅಯೋಧ್ಯೆಯ ರಾಜ್ಯಭಾರ ವಹಿಸಿಕೊಂಡ ... ರಾಮ ಅನೇಕ ರೀತಿಯ ಯಜ್ಞಗಳನ್ನು (ಬಹು... ಯಜ್ಞೈಃ, ಯುದ್ಧಕಾಂಡ, ಸರ್ಗ 131, ಶ್ಲೋಕ... ಮಾಡುವುದೇ ಅವನ ಕೆಲಸವಾಯಿತು. ಯಜ್ಞ... ಜನಸಾಮಾನ್ಯರಿಗೆ ಏನೂ ಪ್ರಯೋಜನವಾಗಿಲ್ಲ. ಯ... ಮಾಡಿರುವುದೆಲ್ಲ ಬ್ರಾಹ್ಮಣರ ಲಾಭಕ್ಕಾಗಿ. ಆದ್ದರಿಂದ... ಜನಸಂಖ್ಯೆಯಲ್ಲಿ ಶೇಕಡ ತೊಂಬತ್ತೇಳು ... ಅನಾನುಕೂಲವಾಗಿರುವ ರಾಮನಿಗಾಗಿ ದೇ... ಕಟ್ಟಕೂಡದು. ದೇವಸ್ಥಾನ ನಿರ್ಮಾಣಕ್ಕಾಗಿ ಲ... ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ... ಅದೇ ಹಣವನ್ನು ಮನೆಗಳಿಲ್ಲದ ಕಡುಬಡವರಿಗೆ ... ಮನೆ ಕಟ್ಟಿಸಿ ಕೊಡುವುದು ಒಳ್ಳೆಯ ಕೆಲಸ. ... ಅನ್ನವಿಲ್ಲದೆ ನರಳಿ ಸಾಯುತ್ತಿರುವ ಜನರಿಗೆ ಅ... ಕ್ಷೀರಭಾಗ್ಯ, ಮೊಟ್ಟೆಭಾಗ್ಯ, ನಮ್ಮ ಕ್ಯಾಂಟೀನ್, ಬಿಸಿ... ಮುಂತಾದವನ್ನು ಒದಗಿಸಲಿ. (ಮಾನ್ಯ ಮುಖ್ಯ... ಸಿದ್ದರಾಮಯ್ಯನವರ ಸರ್ಕಾರ ಇದಕ್ಕೆ ಮಾದರಿಯ... ರೈತರ ಕೃಷಿಕಾರ್ಯ ಹೆಚ್ಚಿಸಲು ಜಲಾಶಯ... ನಿರ್ಮಿಸಲಿ. ಅತ್ಯುತ್ತಮ ವಿಶ್ವವಿದ್ಯಾನಿಲಯಗಳನ್ನು ...

ಚಿರತೆಯ ಅಂತ್ಯ



ಇಂಗ್ಲಿಷ್ ಮೂಲ: ಆರ್ಥರ್ ಫೋವೆಲ್
■ ಕನ್ನಡಕ್ಕೆ: ವಸಂತ್ ನಡಹಳ್ಳಿ

ಆಗ ಮಧ್ಯಾಹ್ನ ಮೂರುಗಂಟೆಯ ಸಮಯ. ಹತ್ತಿರದ ಹೊಲದಿಂದ ಜೋರಾಗಿ ತಮಟೆಯ ಸದ್ದು ಕೇಳತೊಡಗಿತು. ಒಮ್ಮೆಯಂತೂ ತಮಟೆಯವನು ಇಡೀ ದಕ್ಷಿಣ ಭಾರತದಿಂದ ವನ್ಯಮೃಗಗಳನ್ನು ಓಡಿಸಲು ಪ್ರಯತ್ನಿಸುತ್ತಿದ್ದಾನೇನೋ ಎನ್ನುವಷ್ಟು ಜೋರಾಗಿ ಹೊಡೆಯುತ್ತಿದ್ದ. ಕೊನೆಗೂ ತಮಟೆಯ ಸದ್ದು ನಿಂತಾಗ ಸಮಾಧಾನದ ನಿಟ್ಟುಸಿರುಬಿಟ್ಟೆ. ಮುಂದಿನ ಕೆಲವೇ ಕ್ಷಣಗಳಲ್ಲಿ ಎರಡು ಗಂಡು ನವಿಲುಗಳು ಕಾಡಿನಿಂದ ಹೊರಬಂದವು. ಅವು ಆತಂಕದಿಂದ ತಮ್ಮ ಉದ್ದನೆಯ ಕುತ್ತಿಗೆಯನ್ನು ಚಾಚಿ ಕಾಡಿನ ಕಡೆ ನೋಡುತ್ತಿರುವುದು ಯಾವುದೋ ಭಯಂಕರ ಶತ್ರುವಿನ ಆಗಮನದ ಸೂಚನೆಯಾಗಿತ್ತು. ಸ್ವಲ್ಪ ಹೊತ್ತಿನಲ್ಲಿ ದೊಡ್ಡ ಚಿರತೆಯೊಂದು ಕಾಡಿನಿಂದ ಹೊರಬಂದು ನನ್ನ ದೃಷ್ಟಿಗೆ ಅಡ್ಡವಾಗಿದ್ದ ರೆಂಬೆಯ ಮರೆಯಲ್ಲಿ ಕುಳಿತಿತು! ಕೆಲವೇ ಸೆಕೆಂಡುಗಳ ನಂತರ ಅದು ಸುಲ್ತಾನ್‌ರಸ್ತೆಯ ಕಡೆಯಿಂದ ಯಾರೂ ಬರುತ್ತಿಲ್ಲವೆಂದು ನೋಡಲು ಕೆಲವೇ ಹೆಜ್ಜೆಗಳು ಮುಂದೆಬಂದಾಗ ನಾನು ಬಂದೂಕನ್ನು ಚಲಾಯಿಸಿದೆ. ಅದು ಬಿದ್ದು ಹೊರಳಾಡುತ್ತಿದ್ದಾಗ ಇದೇರೀತಿ ವಿಲಿವಿಲಿ ಒದ್ದಾಡುತ್ತಿದ್ದ ಎತ್ತಿನ ಚಿತ್ರ ನನ್ನ ಕಣ್ಣೆದುರು ಬಂದಿತು. ಇದೇ ಆ ಎತ್ತಿನ ಕೊಲೆಗಡುಕ ಎಂದು ಖಾತ್ರಿಯಾಯಿತು.

ಸಲಗದೊಡನೆ ಮುಖಾಮುಖಿ

ಚಿರತೆ ಬಲಿ ಪ್ರಾಣಿಯ ಶವದ ಅಳಿದುಳಿದ ಮಾಂಸವನ್ನು ತಿನ್ನುವ ಮೊದಲೇ ಅಂತ್ಯಕಂಡಿತ್ತು. ಬೇರೆ ವನ್ಯಮೃಗಗಳು ಇದೇ ಶವದಿಂದ ಮಾಂಸವನ್ನು ತಿನ್ನಲು ಬರುವ ಸಾಧ್ಯತೆಗಳಿದ್ದವು. ಹಾಗಾಗಿ ಕೃಷ್ಣನ ಸಲಹೆಯಂತೆ ಮರುದಿನ ರಾತ್ರಿ ಮತ್ತೆ ಅದೇ ಮಚಾನಿನಲ್ಲಿ ಕುಳಿತು ಕಾಯಲು ನಿರ್ಧರಿಸಿದೆ. ಸುಲ್ತಾನ್‌ರಸ್ತೆಯ ಇಕ್ಕೆಲಗಳು ತಿಂಗಳ ಬೆಳಕಿನಲ್ಲಿ ಸುಂದರವಾಗಿ ಕಂಗೊಳಿಸುತ್ತಿದ್ದವು. ಹುಲಿ ಚಿರತೆಗಳು ಬರದಿದ್ದರೂ ಇಂತಹ ಅದ್ಭುತ ಪರಿಸರದಲ್ಲಿ ಸಮಯ ಕಳೆಯುವುದು ಸಾರ್ಥಕವೆನ್ನಿಸಿತು.

ಗಂಟೆಗಳೇ ಕಳೆದರೂ ಯಾವ ಪ್ರಾಣಿಯೂ ಕಣ್ಣಿಗೆ ಬೀಳಲಿಲ್ಲ. ಕೊನೆಗೆ ದೂರದಲ್ಲಿ ಏನೋ ನೆರಳನ್ನು ಕಂಡಂತಾಯಿತು. ನಿಧಾನವಾಗಿ ನೆರಳು ದೊಡ್ಡದಾಗುತ್ತಾ ಬಂದಂತೆ ನನ್ನ ಕಡೆ ಬರುತ್ತಿರುವುದು ತಲಮಲೈನ ಭಯೋತ್ಪಾದಕ ಒಂಟಿಸಲಗ ಎಂದು ಗೊತ್ತಾಯಿತು! ಅಗತ್ಯಬಿದ್ದರೆ ಉಪಯೋಗಿಸಲು ನಾನು ಬಂದೂಕನ್ನು ಸಿದ್ಧಪಡಿಸಿಕೊಂಡೆ. ತಿಂಗಳ ಬೆಳಕಿನಲ್ಲಿ ಹೊಳೆಯುತ್ತಿದ್ದ ದಂತಗಳನ್ನು ಅಲ್ಲಾಡಿಸುತ್ತ ಸುಲ್ತಾನ್‌ರಸ್ತೆಯಲ್ಲಿ ಬರುತ್ತಿದ್ದ ಅದರ ಆಕಾರ ಟಿಪ್ಪು ಸುಲ್ತಾನ ಕೂಡ ಹೆಮ್ಮೆಪಡುವಂತಿತ್ತು. ಇದು ನಿಜವಾಗಿ ಈ ಕಾಡಿನ ಟಿಪ್ಪುಸುಲ್ತಾನನೇ ಆಗಿತ್ತು. ಇಪ್ಪತ್ತು ಅಡಿ ಎತ್ತರದಲ್ಲಿ ಕುಳಿತಿದ್ದರೂ ನಾನು ಭಯದಿಂದ ಬಂದೂಕನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದೆ. ಮುಂದೆ ಬಂದಂತೆ ಅದು ಏನನ್ನೋ ಕಂಡಂತೆ ನಿಂತುಕೊಂಡಿತು. ಸೊಂಡಿಲನ್ನು ಎತ್ತಿ ಜೋರಾಗಿ ಉಸಿರೆಳೆಯಿತು. ಬಲಿ ಪ್ರಾಣಿಯ ಶವದ ಅಥವಾ ಚಿರತೆಯ ರಕ್ತದ ವಾಸನೆಯನ್ನು ಅದು ಗ್ರಹಿಸಿರಬೇಕು. ಸಿಟ್ಟಿನಿಂದ ವಿಚಿತ್ರ ಶಬ್ದಗಳನ್ನು ಮಾಡುತ್ತಾ ಸಲಗ ಶವದ ಕಡೆ ನುಗ್ಗಿತು. ಮುಂದೆ ಮರಗಳ ನೆರಳಿನಲ್ಲಿ ಬಂದಾಗ ಅದು ಏನು ಮಾಡುತ್ತಿದೆ ಎಂದು ಕಾಣದಿದ್ದರೂ ಮುಂಗಾಲುಗಳಿಂದ ಅದು ಮಣ್ಣನ್ನು ಎರಚುತ್ತಿದ್ದುದನ್ನು ನೋಡಿದರೆ ಅದು ಬಹಳ ಕೋಪದಲ್ಲಿತ್ತು. ನಿಧಾನವಾಗಿ ಸ್ವಲ್ಪ ಹೊತ್ತಿನ ನಂತರ ಅದು ನಡೆಯುತ್ತಾ ಸರಿದು ಹೋದಾಗ ನನಗೆ ಸಮಾಧಾನವಾಯಿತು.


ಬೆಳೆರಕ್ಷಣೆಯ ದೇಸೀ ತಂತ್ರಗಳು

ಮರುದಿನ ನಮ್ಮ ಬಲಿಪಶುಗಳನ್ನು ನೋಡಲು ಕಾಡಿಗೆ ಹೋದಾಗ ನಮಗೆ ನಿರಾಶೆ ಕಾದಿದ್ದರೂ ಇತರ ಕೆಲವು ಆಸಕ್ತಿದಾಯಕ ಸಂಗತಿಗಳನ್ನು ನೋಡಿದೆ. ಇಲ್ಲಿಯವರೆಗೆ ತಲಮಲೈನಲ್ಲಿ ಬೇಟೆಯಾಡಲಾಗಿದ್ದ ಹುಲಿಗಳಲ್ಲೇ ಅತಿದೊಡ್ಡ ಹುಲಿಯ ಬಗೆಗೆ ತಿಳಿಸಿದ ಕೃಷ್ಣ ಬೇಟೆಯ ಸ್ಥಳವನ್ನೂ ತೋರಿಸಿದ. ಅದನ್ನು ಕೊಂದ ಒಬ್ಬ ಯುವಅಧಿಕಾರಿ ತನ್ನ ಕೃತಜ್ಞತೆಯನ್ನು ತೋರಿಸಲು ಅಲ್ಲಿನ ದೇವರಿಗೆ ಒಂದು ದೊಡ್ಡ ಮರದ ಹುಲಿಯ ಮೂರ್ತಿಯನ್ನು ಮಾಡಿಸಿ ಅರ್ಪಿಸಿದ್ದ. ಸಂಜೆ ಹಿಂತಿರುಗುವಾಗ ನಾನು ದೇವಸ್ಥಾನದಲ್ಲಿ ಹುಲಿಯ ಮೂರ್ತಿಯನ್ನು ನೋಡಿ ಅದರ ಸೌಂದರ್ಯಕ್ಕೆ ಮನಸೋತೆ. ಮರದ ಹಲಗೆಯ ಮೇಲೆ ಕೂರಿಸಲಾಗಿದ್ದ ಹುಲಿಯ ಮೂರ್ತಿಗೆ ಒಂದು ಮರದ ರಥ ಕೂಡ ಇದ್ದು ವರ್ಷಕ್ಕೊಮ್ಮೆ ಮೆರವಣಿಗೆ ಮಾಡಲಾಗುತ್ತಿತ್ತು. ಈ ಮೂರ್ತಿ ತಲಮಲೈನ ಅತ್ಯಮೂಲ್ಯ ಸಂಗ್ರಹವಾಗಿದೆ. ಇದರ ಸೌಂದರ್ಯವನ್ನು ತಲೆತಲಾಂತರದವರೆಗೂ ಜನ ಮೆಚ್ಚುತ್ತಾರೆ.

ಹೊಲಗದ್ದೆಗಳನ್ನು ಹಾಯ್ದುಹೋಗುವಾಗ ಕಾಲುದಾರಿಯಲ್ಲಿ ನಾನು ರಕ್ತದ ಗುರುತುಗಳಿರುವುದನ್ನು ಗಮನಿಸಿದೆ. ಕೃಷ್ಣ ಇದರ ಬಗೆಗೆ ವಿವರಣೆ ನೀಡಿದ. ಹೊಲಗಳಿಗೆ ಹಾಕಿರುವ ಮುಳ್ಳುಬೇಲಿಗಳ ನಡುವಿನ ಅಂತರದಲ್ಲಿ ಹಳ್ಳಿಗರು ಸುಮಾರು ನಾಲ್ಕು ಅಡಿ ಎತ್ತರದ ಮರದ ಕೋಲುಗಳ ತುದಿಯನ್ನು ಚೂಪಾಗಿಸಿ ನೆಟ್ಟಿರುತ್ತಿದ್ದರು. ಬೇಲಿಯನ್ನು ಹಾರಿ ಹೊಲಕ್ಕೆ ಹೋಗಲು ಪ್ರಯತ್ನಿಸುವ ವನ್ಯಮೃಗಗಳು ಚೂಪಾದ ತುದಿಯಿಂದ ಗಾಯಗೊಂಡು ಸಾವನ್ನಪ್ಪುತ್ತಿದ್ದವು. ಅಲ್ಲಿದ್ದ ಕೆಂಪಾದ ರಕ್ತದ ಕಲೆ ಮತ್ತು ಚೂಪಾದ ತುದಿಗೆ ಅಂಟಿಕೊಂಡಿದ್ದ ಕೂದಲುಗಳು ನಾವು ಬರುವ ಒಂದೆರಡು ಗಂಟೆಗಳ ಮೊದಲು ಯಾವುದೋ ಜಿಂಕೆ ಅಲ್ಲಿಂದ ಹಾರುವ ಪ್ರಯತ್ನದಲ್ಲಿ ಗಾಯಗೊಂಡಿದ್ದನ್ನು ಸೂಚಿಸುತ್ತಿತ್ತು.

ಮುಂದೆ ಅರಣ್ಯ ಪ್ರದೇಶಕ್ಕೆ ತಾಗಿಕೊಂಡಿದ್ದ ಹೊಲದ ಬಳಿ ನಾವು ಹೋದಾಗ ಕೃಷ್ಣ ಮುಳ್ಳುಬೇಲಿಯ ಪಕ್ಕದಲ್ಲಿ ತೋಡಿದ್ದ ಉದ್ದವಾದ ಕಾಲುವೆಯಂತಹ ಗುಂಡಿಯನ್ನು ತೋರಿಸಿ ಅದರ ಬಗೆಗೆ ವಿವರಣೆ ನೀಡಿದ. ಆ ಕಾಲುವೆಯ ಒಂದುತುದಿ ಹೆಚ್ಚೇನು ಆಳವಿರಲಿಲ್ಲ. ನಿಧಾನವಾಗಿ ಅದರ ಆಳ ಹೆಚ್ಚುತ್ತಾ ಹೋಗಿ ಕೊನೆಗೆ ಸುಮಾರು ಹತ್ತು ಅಡಿ ಆಳವಾದಾಗ ಕಾಲುವೆ ಮುಗಿಯುತ್ತಿತ್ತು. ... ದಾರಿಯಿರುತ್ತಿರಲಿಲ್ಲ. ಕಾಡುಹಂದಿಗಳು ಹೊಲಕ್ಕೆ ನು... ಗಲಾಟೆಮಾಡಿ ಅಥವಾ ಗುಂಡುಹಾರಿಸಿ ಅವುಗಳ... ಕಾಲುವೆಯ ಕಡೆ ಓಡಿಸಲಾಗುತ್ತಿತ್ತು. ಹಂದಿಗಳು ಕಾಲು... ತುದಿಗೆ ಹೋಗಿ ನಿಂತುಕೊಂಡಾಗ ಅವುಗಳು ತಪ್ಪಿ... ಧಂತೆ ಮಾಡಲು ಕಾಲುವೆಯ ಇನ್ನೊಂದು ತುದಿ... ಸೌದೆ ಹುಲ್ಲುಗಳನ್ನು ಉಪಯೋಗಿಸಿ ಬೆಂಕಿ ಹಚ್ಚಲಾ... ನಂತರ ಚೂಪಾದ ದೊಣ್ಣೆ ಮತ್ತಿತರ ಆಯುಧ... ಹಂದಿಗಳನ್ನು ಕೊಲ್ಲಬಹುದಿತ್ತು. ಹೀಗೆ ಒಬ್ಬನೇ... ಹಲವಾರು ಹಂದಿಗಳನ್ನು ಓಡಿಸಿ ಬೆಳೆಗಳನ್ನು ರಕ್ಷಿ... ದಿತ್ತು.

ಕಾಡುಪ್ರಾಣಿಗಳ ಹಾವಳಿಯನ್ನು ತಡೆಯಲು ಹಾ... ಉಪಯೋಗಿಸುತ್ತಿದ್ದ ಈ ಎರಡು ಸರಳ ಕ್ರಮ... ನೋಡಿದ ನಾನು ಇಲ್ಲಿನ ಜನಗಳಿಗೆ ಬಂದೂ... ಅಗತ್ಯವಿಲ್ಲವೆಂದು ತೀರ್ಮಾನಿಸಿದೆ!



ಕಾಡುಕೋಣದ ಮೂರ್ಖತನ

ಕೃಷ್ಣನ ತೊಡೆಗಳಲ್ಲಿ ಆಳವಾದ ಗಾಯವೊ... ಅದು ಕಾಡುಕೋಣದಿಂದ ಆದ ಗಾಯವಾಗಿದ್ದು... ನಂತರದ ಸಾಕಷ್ಟು ದಿನಗಳಲ್ಲಿ ನಡೆದಾಡಲು ಸಾಧ್ಯ... ವೆಂದು ಅವನು ಹೇಳಿದ. ಈ ವಿಚಾರದಲ್ಲಿ ಹೆಚ್ಚು... ನಾಡಲು ಕೃಷ್ಣ ಇಷ್ಟಪಡುತ್ತಿರಲಿಲ್ಲ. ನನಗೆ ಬೇರೆಯ... ತಿಳಿದ ಪ್ರಕಾರ ಅವನು ಸುರಕ್ಷಿತ ಅರಣ್ಯದಲ್ಲಿ ಕದ... ಯಾಡುವಾಗ ಪೊದೆಗಳಲ್ಲಿ ಅರ್ಧ ಮರೆಯಾಗಿದ್ದ... ಕೋಣವನ್ನು ಜಿಂಕೆಯೆಂದು ತಿಳಿದು ಗುಂಡು... ಅಪಾಯವನ್ನು ಆಹ್ವಾನಿಸಿಕೊಂಡಿದ್ದ.

ಕಾಡುಕೋಣಗಳ ಬಗೆಗೆ ಅವನು ಹೇಳಿದ ಇನ್ನೊ... ಘಟನೆ ಆಸಕ್ತಿದಾಯವಾಗಿದೆ. ಸಾಂಬಾರ್ ಜಿಂಕೆಯೊ... ಬೇಟೆಯಾಡಲು ಅವನು ಸ್ನೇಹಿತನೊಬ್ಬನ ಜ... ಹೋದಾಗ ಕಾಡಿನಲ್ಲಿ ಹುಲ್ಲನ್ನು ಮೇಯುತ್ತಿದ್ದ ಕಾಡು... ಅವರ ಕಣ್ಣಿಗೆ ಬಿದ್ದಿತ್ತು. ಕೆಲವೇ ಕ್ಷಣದಲ್ಲಿ ಕಾಡುಕೋ... ಹಿಂದಿನಿಂದ ಹುಲಿಯೊಂದು ಹೊರಬಂದಿತು. ಹು... ವಾಸನೆ ಹಿಡಿದ ಕಾಡುಕೋಣ ದೊಡ್ಡದಾಗಿ ಗು... ಹಾಕಿದೊಡನೆ ಹುಲಿ ಮತ್ತೆ ಕಾಡಿನಲ್ಲಿ ಓಡಿಹೋ... ಆದರೆ ಕೆಲವೇ ಕ್ಷಣದಲ್ಲಿ ಮರದ ಮರೆಯಿಂದ ... ತನ್ನ ತಲೆಯನ್ನು ಹೊರಹಾಕಿತು. ಅದನ್ನು ನೋಡಿ ಸಿ... ಕಾಡುಕೋಣ ತಲೆತಗ್ಗಿಸಿಕೊಂಡು ಹುಲಿಯ ಕಡೆ ಜೋ... ಓಡಿದೊಡನೆ ಹುಲಿ ದೂರಸರಿಯಿತು. ಕಾಡೆಮ್ಮೆ ... ದೇಹವನ್ನು ಗುದ್ದಿ ಹಿಂದೆ ಬಿತ್ತು. ಹುಲಿ ಕೆಲವೇ ಕ್ಷಣ... ಇನ್ನೊಂದು ಮರದ ಮರೆಯಿಂದ ತಲೆಯನ್ನು ತೂ... ತ್ತಿತ್ತು. ಮೂರ್ಖ ಕಾಡುಕೋಣ ಮತ್ತೆ ಅದರತ್ತ... ಮರಕ್ಕೆ ಡಿಕ್ಕಿಹೊಡೆದು ಗಾಯಗೊಳ್ಳುತ್ತಿತ್ತು. ಕೆಲ...

...ಲೆಗಳು ಹಳ್ಳಿಗಳಲ್ಲಿ ಮುರುಕಲು ಮನೆಗಳಾಗಿವೆ: ...ಟ್ಟಿಗೆಗಳಂತಿವೆ. ಅವುಗಳನ್ನು ಸುಂದರವಾಗಿ ಮಕ್ಕಳು ಶಾಲೆಗೆ ಬರುವಂತೆ ಆಕರ್ಷಣೀಯವಾಗಿ ...ಪಡಿಸಿದರೆ ಅವರು ಸಂತೋಷದಿಂದ ಓದಿ ... ವೃದ್ಧಿಯಾಗುತ್ತದೆ. ಆಸ್ಪತ್ರೆಗಳನ್ನು ನಿರ್ಮಿಸಿ ... ಸೇವೆಯೇ ನಿಜವಾಗಿಯೂ ದೇವರ ಸೇವೆ ...ರಿವು ಬೆಳೆಸಿಕೊಳ್ಳುವುದು ಉತ್ತಮ. ನಿರ್ಜೀವ ದೇವರೆಂದು ಪೂಜಿಸುವವರು ಜೀವಕೇಂದ್ರಿತ ... ಎಲ್ಲ ಜೀವಿಗಳೂ, ಎಲ್ಲ ಮಾನವರೂ ಒಂದು ...ಪ್ಪಿಕೊಳ್ಳುವ ಮನಸ್ಥಿತಿಯನ್ನು ಹೊಂದಿಲ್ಲದಿರು ...ದುರಂತ.

...ಸ ದೇವಸ್ಥಾನಗಳನ್ನು ಕಟ್ಟಲು ಅಪಾರ ಹಣ, ...ರ ಶ್ರಮ ಮತ್ತು ಸಮಯ, ಕಲ್ಲು ಇಟ್ಟಿಗೆ ಗಾರೆ ... ಮುಂತಾದ ವಸ್ತುಗಳನ್ನು ವ್ಯರ್ಥ ಮಾಡಬಾರದು. ... ಇರುವ ದೇವಸ್ಥಾನಗಳನ್ನೇ ಉರುಳಿಸಬೇಕು. ...ಲು ಶತಮಾನದಷ್ಟು ಹಿಂದೆಯೇ ಮಹಾಜ್ಞಾನಿ ...ವೇಕಾನಂದರು, "ದೇವಸ್ಥಾನಗಳು, ಪೂಜಾರಿಗಳು, ...ಳು, ದೇವರನ್ನು ಧ್ವಂಸಮಾಡಿ.... ಎದ್ದು ನಿಲ್ಲಿ ...ನೇ!... ಎಲ್ಲಾ ಮೂಢನಂಬಿಕೆಗಳನ್ನು ತ್ಯಜಿಸಿ" ...ಧೀರಕರೆ ಕೊಟ್ಟಿದ್ದಾರೆ. (ಕಂಪ್ಲೀಟ್ ವರ್ಕ್ಸ್, ಸಂ. ... 502.)

...ರ ಸ್ಥಳಗಳನ್ನೆಲ್ಲ ಧ್ವಂಸ ಮಾಡಿ ಎಂದರೆ ಜನರು ...ಆಗಬೇಕಿಲ್ಲ, ಬಸವಣ್ಣನವರ ವಚನ ಅವರಿಗೆ ಮತ್ತು ಆಚರಣೆ ಆಗಲಿ: "ದೇಹವೇ ದೇಗುಲ, ...ಹೊನ್ನ ಕಳಶ." ಇದನ್ನು ಪ್ರತಿ ಹೆಣ್ಣು ಗಂಡು ...ರೆ ಅವರ ಜೀವನ ಪರಿಶುದ್ಧವಾಗಿ ಅವರಿಗೆ ...ಶಾಂತಿ ಸಿಗುತ್ತದೆ.

...ಸ್ಥಾನಗಳಷ್ಟೇ ಅಲ್ಲ ಎಲ್ಲಾ ಚರ್ಚುಗಳು, ಮಸೀದಿಗಳು, ...ಗಳು ಮುಂತಾದ ಮೂಢನಂಬಿಕೆ ಗಳ ಕೇಂದ್ರಗಳನ್ನೆಲ್ಲ ... ಮಾಡಬೇಕು. ಏಕೆಂದರೆ, ಇವುಗಳು ಇದ್ದಷ್ಟೂ ...ಸ್ಸು ವಿಶಾಲವಾಗುವುದಿಲ್ಲ, ಜಾತಿ ಮತ ಎಂದು ...ಚಿತರಾಗಿ ವಿರಸ ವೈಷಮ್ಯ ಬೆಳೆಯುತ್ತವೆ. ಕೋಮು ...ಗಿ ಜನರ ಮಧುರ ಮನಸ್ಸುಗಳು ವಿಷಯುಕ್ತವಾಗಲು ... ಕೇಂದ್ರಗಳು ಕಾರಣವಾಗುವುವು. ಅಲ್ಲದೆ ಇವರಿಂದ ... ನಷ್ಟವಾಗಿ ಪ್ರಾಣಹಾನಿಯೂ ಆಗುವುದನ್ನು ...ಲೇ ಇದ್ದೇವೆ. ■

...ಣ ಆಕ್ರಮಣ ಮಾಡಲು ಸಿದ್ಧವಾಗದಿದ್ದಾಗ ...ಮುಲಿನಲ್ಲಿ ಮತ್ತೆ ಪ್ರತ್ಯಕ್ಷವಾಗಿ ಅದನ್ನು ಕೆಣಕುತ್ತಿತ್ತು. ...ಕ ನಾಲ್ಕೈದು ಗಂಟೆಗಳು ನಡೆಯುವಷ್ಟರಲ್ಲಿ ...ಣದ ಹಣೆಯಿಂದ ರಕ್ತ ಸುರಿಯುತ್ತಿತ್ತು. ...ೂ ಆಗದಷ್ಟು ದಣಿದಿದ್ದ ಅದರ ಮೇಲೆ ...ದ ಆಕ್ರಮಣ ಮಾಡಿದ ಹುಲಿ ಅದರ ಕಾಲಿನ ...ನ್ನು ಕತ್ತರಿಸಿತ್ತು. ಜೋರಾದ ಶಬ್ದದೊಂದಿಗೆ ...ಳಿದ ಕಾಡುಕೋಣ ಹುಲಿಯ ಕುತಂತ್ರಕ್ಕೆ ...ಗಿತ್ತು.

ಕೃಷ್ಣನ ದುರಂತ ಸಾವು

... ಬಾರಿಯ ತಲಮಲೈನ ತಿರುಗಾಟದಲ್ಲಿ ನನಗೆ ... ಹುಲಿಬೇಟೆ ಸಾಧ್ಯವಾಗಲಿಲ್ಲ. ಈ ಪ್ರದೇಶದಲ್ಲಿ ... ಹೆಚ್ಚಾಗಿದ್ದು ಹುಲಿಗಳು ಅಲ್ಲೊಂದು ಇಲ್ಲೊಂದು ...ದ್ದವು. ಇಲ್ಲಿನ ಕಾಡುಗಳಲ್ಲಿ ಕೆಲವು ಅತ್ಯುತ್ತಮ ...ಣ ಕಾಡೆಮ್ಮೆಗಳು ಇರುವ ಸಮಾಚಾರ ...ೂ ನಾನು ಅವುಗಳನ್ನು ಬೇಟೆಯಾಡಲು ಪ್ರಯತ್ನ ...ಪ್ಪ.

... ಚಿರತೆಗಳು ಕೊಂದ ಪ್ರಾಣಿಗಳನ್ನು ಇಲ್ಲಿನ ...ಾರವಾಗಿ ಬಳಸುತ್ತಿದ್ದುದರಿಂದ ವನ್ಯಮೃಗಗಳು ...ಷೂತ್ತಿನಲ್ಲೇ ಮತ್ತೆಮತ್ತೆ ತಮ್ಮ ಬಳಿಯ ಬಳಿ ... ಅವುಗಳನ್ನು ಕಾಯುತ್ತಿದ್ದವು. ಹಾಗಾಗಿ ಇಲ್ಲಿನ ...ಲ್ಲಿ ಹುಲಿ ಚಿರತೆಗಳ ಛಾಯಾಚಿತ್ರಗಳನ್ನು ...ಗಿ ತೆಗೆಯಬಹುದಿತ್ತು.


...ನ ಆಸಕ್ತಿದಾಯಕ ಪ್ರದೇಶವೊಂದಕ್ಕೆ ಭೇಟಿ ... ತೃಪ್ತಿ ಮತ್ತು ಇನ್ನೊಮ್ಮೆ ಇಲ್ಲಿಗೆ ಬರುವ ...ಂದಿಗೆ ನಾನು ತಲಮಲೈನಿಂದ ಹೊರಟೆ. ಅಲ್ಲಿನ ...ಕಾರಿಗೆ ಪತ್ರ ಬರೆದು ಸಲಗವನ್ನು ರೌಡಿ ಎಂದು ...ದರೆ ನನಗೆ ಮಾಹಿತಿ ನೀಡಲು ತಿಳಿಸಿದ್ದೆ. ಆದರೆ ...ವರಿಂದ ಉತ್ತರ ಬರಲಿಲ್ಲ.

...ತ್ತು ವರ್ಷಗಳ ನಂತರ ನಾನು ಮತ್ತೆ ನೀಲಗಿರಿ ... ಬೇಟೆಯಾಡುವ ಪರವಾನಗಿ ಪಡೆದು ಪ್ರಯಾಣದ ...ಮಾಡಿಕೊಂಡೆ. ಹೊಳಪಿನ ಬಿದಿರಿನ ಹಿಡಿಕೆಯುಳ್ಳ ...ಚಿತ ಮಾಡಿದ್ದ ಕತ್ತಿಯೊಂದನ್ನು ನನ್ನ ಸ್ನೇಹಿತ ...ಉಡುಗೊರೆಯಾಗಿ ಕೊಡಲು ಖರೀದಿಸಿದೆ. ...ಸದ್ಯದಲ್ಲಿಯೇ ಭೇಟಿ ಮಾಡುತ್ತೇನೆಂದು ತಿಳಿಸಿ ... ಬರೆದೆ. ಆ ಪತ್ರ ಕೊನೆಗೆ ನನಗೇ ಹಿಂತಿರುಗಿ ... [illegible] ತಿಳಿಸಿದ ಸ್ಥಳದ ಕಷ್ಟವನ್ನು ...ಂದು [illegible]...

...ಗಿ ನಾನು ಮತ್ತೆ ತಲಮಲೈಗೆ ಹೋಗಲೇ

(ಮುಂದುವರೆಯುವುದು)


ಕೊಪ್ಪಳ: ಸಿದ್ದು ವಿರುದ್ಧ ಕಾಂಗ್ರೆಸ್ ಕೋಲ್ಡ್‌ವಾರ್



ಕೊಪ್ಪಳದ ಕಾಂಗ್ರೆಸ್ ಪಡಸಾಲೆ ಅಕ್ಷರಶಃ ರಣಾಂಗಣವಾಗಿದೆ. ಲೋಕಲ್ ಕಾಂಗ್ರೆಸ್ ಲೀಡರ್‌ಗಳು ಸಿಎಂ ಸಿದ್ದರಾಮಯ್ಯನ ವಿರುದ್ಧವೇ ಬಂಡೆದ್ದಿರುವುದು ಜಿಲ್ಲಾ ಕೈ ಕಾರ್ಯಕರ್ತರನ್ನೇ ಗೊಂದಲಕ್ಕೆ ದೂಡಿದೆ. ಇತ್ತೀಚೆಗೆ ಪಕ್ಷ ಸಂಘಟನೆಯ ಕಾರಣಕ್ಕೆ ಎಐಸಿಸಿ ಕಾರ್ಯದರ್ಶಿ ಸಾಕೆ ಶೈಲಜಾನಾಥ್ ಜಿಲ್ಲೆಗೆ ಭೇಟಿ ನೀಡಿದ್ದಾಗ ಕಾಂಗ್ರೆಸ್ ಮಾಜಿ ಶಾಸಕರಾದ ಎಚ್.ಆರ್.ಶ್ರೀನಾಥ್ ಮತ್ತು ಕರಿಯಣ್ಣ ಸಂಗಟಿ ತಮ್ಮ ಬೆಂಬಲಿಗರೊಂದಿಗೆ ಘೇರಾವ್ ಹಾಕಿದ್ದಲ್ಲದೆ 'ಸಿದ್ದರಾಮಯ್ಯ ಹಟಾವೋ, ಕಾಂಗ್ರೆಸ್ ಬಚಾವೋ' ಘೋಷಣೆ ಮೊಳಗಿಸಿ ಈಗ ಪಕ್ಷದ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಪ್ರಭಾವದಿಂದಾಗಿಯೇ ಇಲ್ಲಿ ಜನತಾ ಪರಿವಾರ ಮತ್ತು ಬಿಜೆಪಿಗಳು ನೆಲೆ ಕಂಡುಕೊಳ್ಳಲು ಸಾಧ್ಯವಾಗಿರಲಿಲ್ಲ. ಅಷ್ಟರಮಟ್ಟಿಗೆ ಕಾಂಗ್ರೆಸನ್ನು ಸದೃಢವಾಗಿಸಿದ್ದರು. 4 ಬಾರಿ ಸಂಸದರಾಗಿ 2 ಬಾರಿ ಶಾಸಕರಾಗಿದ್ದ ಅವರ ದರ್ಬಾರನ್ನು ಮಗ ಶ್ರೀನಾಥ್ ಮುಂದುವರೆಸಿಕೊಂಡು ಹೋಗುವಲ್ಲಿ ಎಡವಿದ್ದಾನೆ. ಅಪ್ಪನ ಪ್ರಭಾವದಿಂದಾಗಿ ಒಮ್ಮೆ ಕಾಡಾ ಅಧ್ಯಕ್ಷನಾಗಿ, 2 ಬಾರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಒಮ್ಮೆ ಶಾಸಕನೂ ಆಗಿದ್ದ ಶ್ರೀನಾಥ್ ಬಲಾಢ್ಯವಾಗಿ ಬೇರೂರಿದ ರಾಜಕಾರಣಿಯಲ್ಲ. 2004ರಲ್ಲಿ ಎಚ್.ಜಿ.ರಾಮುಲು ರಾಜಕೀಯ ನಿವೃತ್ತಿ ಪಡೆದ ನಂತರ ಅವರ ಕುಟುಂಬದ ರಾಜಕೀಯ ಪ್ರಭಾವ ನಿಧಾನ ಗತಿಯಲ್ಲಿ ನಶಿಸುತ್ತಾ ಬಂತು. ಶ್ರೀನಾಥನ ರಾಜಕೀಯ ಕುಶಲಾಗ್ರತೆಯ ಕೊರತೆಯಿಂದ ಕ್ರಮೇಣ ಜಿಲ್ಲೆಯ ಕಾಂಗ್ರೆಸ್ ಹಿಡಿತ ರಾಮುಲು ಕುಟುಂಬದಿಂದ ಕೈ ಜಾರತೊಡಗಿತು.


ಆದರಲ್ಲೂ ಗಂಗಾವತಿಯಲ್ಲಿ ಗಟ್ಟಿಯಾಗಿ ಬೆಳೆಯತೊಡಗಿದ ಇಕ್ಬಾಲ್ ಅನ್ಸಾರಿ ವಿರುದ್ಧ ಸೆಣೆಸಾಡುವುದಕ್ಕಷ್ಟೇ ಶ್ರೀನಾಥ್ ತನ್ನ ರಾಜಕೀಯ ವ್ಯಾಪ್ತಿಯನ್ನು ಸೀಮಿತವಾಗಿಸಿಕೊಂಡ. ತಾನು ಜೆಡಿಎಸ್‌ನಿಂದ ಎರಡು ಸಲ ಗೆದ್ದು ಶಾಸಕನಾಗಿದ್ದರೂ ತನ್ನ ಗೆಲುವಿಗೆ ವೈಯಕ್ತಿಕ ವರ್ಚಸ್ಸು ಕಾರಣವೇ ಹೊರತು ಜೆಡಿಎಸ್‌ನ ವೋಟ್ ಬ್ಯಾಂಕ್ ಅಲ್ಲ ಎಂದೇಳುವಷ್ಟರಮಟ್ಟಿಗೆ ದುರಹಂಕಾರಿಯಾದ ಇಕ್ಬಾಲ್ ಅನ್ಸಾರಿಯ ವಿರುದ್ಧವೂ ಜನರಲ್ಲಿ ಅಸಮಾಧಾನ ಇದೆಯಾದರು ಅದನ್ನು ಎನ್‌ಕ್ಯಾಶ್ ಮಾಡಿಕೊಳ್ಳುವಲ್ಲಿ ಶ್ರೀನಾಥ್ ಎಡುವುತ್ತಲೇ ಬಂದ. ತನ್ನ ಕ್ಷೇತ್ರದಲ್ಲಿರುವ ಬಹುಸಂಖ್ಯಾತ ಕುರುಬ ಮತಗಳ ಓಲೈಕೆಯ



ಕರಡಿ ಸಂಗಣ್ಣನೊಂದಿಗೆ ಮಿಲಾಪಿ ರಾಜಕೀಯ ಮಾಡಿಕೊಂಡೇ ಬಂದಿದ್ದಾರೆ. 2013ರ ಚುನಾವಣೆಯಲ್ಲಿ ಕೊಪ್ಪಳದಲ್ಲಿ ತಾನು ಗೆಲ್ಲುವುದಕ್ಕೋಸ್ಕರ ಇದೇ ಹಿಟ್ನಾಳ ಕಂಪನಿ ಗಂಗಾವತಿಯ ಜೆಡಿಎಸ್ ಅನ್ಸಾರಿಯೊಂದಿಗೆ ಒಳಒಪ್ಪಂದ ಮಾಡಿಕೊಂಡಿದ್ದರು. ಕೊಪ್ಪಳದ ಮುಸ್ಲಿಂ ಮತಗಳನ್ನು ತನಗೆ ಹಾಕಿಸಿದರೆ, ಗಂಗಾವತಿಯಲ್ಲಿರುವ ತನ್ನ ಕುರುಬ ಸಮುದಾಯದ ಮತಗಳು ಇಕ್ಬಾಲ್‌ಗೆ ಹರಿದುಹೋಗುವಂತೆ ನೋಡಿಕೊಳ್ಳುತ್ತೇವೆ ಎಂಬ ಒಪ್ಪಂದ ಮಾಡಿಕೊಂಡಿದ್ದರಿಂದಲೇ ಅಲ್ಲಿನ ಕಾಂಗ್ರೆಸ್ ಅಭ್ಯರ್ಥಿ ಶ್ರೀನಾಥ್ ಸೋಲುವಂತಾಯ್ತು. ರಾಘವೇಂದ್ರ ಹಿಟ್ನಾಳ್ ಮರಳು ಮಾಫಿಯಾದ ದೊರೆಯಾಗಿದ್ದು, ಆತನ ವಿರುದ್ಧ ಸೋನಿಯಾ ಗಾಂಧಿಗೆ ದೂರು ನೀಡುತ್ತೇನೆ. ಅಂತವನ ಮಾತು ಕೇಳಿಕೊಂಡ ಸಿಎಂ ನನ್ನನ್ನು ಉಚ್ಚಾಟನೆ ಮಾಡಿದ್ದಾರೆ. "ಇದು ಪ್ರಾಮಾಣಿಕ ಕಾರ್ಯಕರ್ತರಿಗೆ ಮಾಡಿದ ಅವಮಾನ" ಎಂದೆಲ್ಲ ಅಬ್ಬರಿಸಿದ ಕರಿಯಣ್ಣ ಸಂಗಟಿ ಪತ್ರಿಕಾಗೋಷ್ಠಿಯಲ್ಲೇ ತನ್ನ ಉಚ್ಚಾಟನೆ ಪತ್ರ ಹರಿದು ಬಿಸಾಕಿದ್ದರು.

ಕಳೆದ 20 ವರ್ಷಗಳಿಂದ ಕಾಂಗ್ರೆಸ್‌ನಲ್ಲಿರುವ ಕರಿಯಣ್ಣ ಸಂಗಟಿ ಮೊದಲು ಜಿಲ್ಲಾ ಯೂತ್ ಕಾಂಗ್ರೆಸ್ ಅಧ್ಯಕ್ಷರಾಗಿ, ನಂತರ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ, ಎಸ್.ಎಂ.ಕೃಷ್ಣ ಸರಕಾರವಿದ್ದಾಗ ಡಿ.ಕೆ.ಶಿವಕುಮಾರ್ ಆಪ್ತತೆಯ ಕಾರಣಕ್ಕೆ ಎಂ.ಎಲ್.ಸಿ.ಯೂ ಆಗಿದ್ದರು. 2004ರಲ್ಲಿ ಕರಿಯಣ್ಣ ಪ್ರತಿನಿಧಿಸುವ ಕುರುಬ ಜಾತಿಯವರೇ ಆದ ಬಸವರಾಜ್ ಹಿಟ್ನಾಳ್ ಕಾಂಗ್ರೆಸ್ ಸೇರಿದ ನಂತರ ಕರಿಯಣ್ಣ ಬಸವರಾಜ್ ಹಿಟ್ನಾಳ್ ನಡುವೆ ಟಿಕೆಟ್ ಪೈಪೋಟಿ ನಡೆಯುತ್ತಲೇ ಇತ್ತು. ಕೊನೆಗೆ ಬಸವರಾಜ್ ಹಿಟ್ನಾಳ್‌ಗೆ, ಆತನ ಮಗ ರಾಘವೇಂದ್ರ ಹಿಟ್ನಾಳ್‌ಗೆ ಟಿಕೆಟ್ ಸಿಕ್ಕಿತೇ ವಿನಾಃ ಕರಿಯಣ್ಣನ ಪಕ್ಷ ನಿಷ್ಠೆಗೆ ಬೆಲೆ ಸಿಗಲೇ ಇಲ್ಲ. ಜೆಡಿಎಸ್‌ನಿಂದ ವಲಸೆ ಬಂದ ಸಿದ್ದರಾಮಯ್ಯ ತನ್ನಂತೆಯೇ ಜೆಡಿಎಸ್‌ನಿಂದ ಬಂದ ಹಿಟ್ನಾಳ್ ಫ್ಯಾಮಿಲಿಗೆ ಮಣೆ ಹಾಕಿ ತನ್ನಂತಹ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರಿಗೆ ಮೋಸ ಮಾಡುತ್ತಿದ್ದಾರೆ ಅನ್ನೋದು ಕರಿಯಣ್ಣನ ಆಕ್ರೋಶಕ್ಕೆ ಕಾರಣ.

ತಮ್ಮದೇ ವೈಯಕ್ತಿಕ ಕಾರಣಗಳಿಗೆ ಸಿದ್ದರಾಮಯ್ಯನ ವಿರುದ್ಧ ಸಿಡಿದೆದ್ದಿರುವ ಶ್ರೀನಾಥ್ ಮತ್ತು ಕರಿಯಣ್ಣ ಈಗ ಒಂದಾಗಿದ್ದಾರೆ. ಇವರಿಬ್ಬರೂ ಜೆಡಿಎಸ್‌ಗೆ ವಲಸೆಹೋಗುವ ಸಂಭವ ಹೆಚ್ಚಾಗಿದ್ದು ಶತಾಯಗತಾಯ ಕಾಂಗ್ರೆಸ್‌ಗೆ ಸೋಲುಣಿಸುವ ಮಾತಾಡುತ್ತಿದ್ದಾರೆ. ಇಬ್ಬರೂ ಪ್ರತ್ಯೇಕವಾಗಿ ಕದನಕ್ಕಿಳಿದರೆ ಇದು ಸಾಧ್ಯವಾಗುವುದಿಲ್ಲ ಎಂದರಿತಿರುವ ಅವರು ಈಗ ಒಂದು ಒಪ್ಪಂದಕ್ಕೆ ಬಂದಿದ್ದಾರೆ





ಈಗಾಗಲೇ ಶ್ರೀನಾಥ್‌ಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದ್ದರೆ ಪ್ರತಿಭಟನೆಯ ಭರಾಟೆಯಲ್ಲಿ ಸಿದ್ದರಾಮಯ್ಯರನ್ನು 'ನಾಲಾಯಕ್' ಎಂದು ಕರೆದಿದ್ದ ಮಾಜಿ ಎಂಎಲ್‌ಸಿ ಕರಿಯಣ್ಣ ಸಂಗಟಿಯನ್ನು ಪಕ್ಷದಿಂದಲೇ ಉಚ್ಚಾಟಿಸಲಾಗಿದೆ. ಕುರುಬ ಸಮುದಾಯದ ಕರಿಯಣ್ಣ ಸಂಗಟಿ ತಮ್ಮದೇ ಜನಾಂಗದ ಸಿದ್ದರಾಮಯ್ಯನ ವಿರುದ್ಧ ತಿರುಗಿ ಬಿದ್ದಿರುವುದರ ಹಿಂದೆ ಹಾಲಿ ಶಾಸಕ ರಾಘವೇಂದ್ರ ಹಿಟ್ನಾಳ್‌ನ ಕೈವಾಡ ಇದೆ. ಇನ್ನು ಗಂಗಾವತಿಯ ಜೆಡಿಎಸ್ ಅಮಾನತು ಶಾಸಕ ಇಕ್ಬಾಲ್ ಅನ್ಸಾರಿ ಮತ್ತು ಸಿದ್ದರಾಮಯ್ಯನ ಸಖ್ಯವೇ ಶ್ರೀನಾಥ್ ಸಿಡಿದೇಳಲು ಕಾರಣ. ಚುನಾವಣೆಗೆ ಇನ್ನು ಒಂದೇ ವರ್ಷವಿರುವಾಗ ಭುಗಿಲೆದ್ದಿರುವ ಈ ಬಿಕ್ಕಟ್ಟು ಕೊಪ್ಪಳದ ರಾಜಕೀಯ ಚಿತ್ರಣವನ್ನೇ ಬದಲಾಯಿಸುವ ಸಾಧ್ಯತೆ ಇದೆ. ಈಗಾಗಲೇ ಈ ಬಂಡಾಯಿಗರಿಬ್ಬರೂ ಬೇರೆ ಪಕ್ಷದತ್ತ ಮುಖ ಮಾಡಿದ್ದು ಕಾಂಗ್ರೆಸ್ ಸೋಲಿಸಲು ಶ್ರಮಿಸುವುದಾಗಿ ಹೇಳಿಕೊಂಡು ಓಡಾಡುತ್ತಿದ್ದಾರೆ.


ಕರಿಯಣ್ಣನ ಉಚ್ಚಾಟನೆಯ ಬೆನ್ನಿಗೆ ರಾಯಚೂರಿನಲ್ಲಿ ಕರೆದಿದ್ದ ಸುದ್ದಿಗೋಷ್ಠಿಯುದ್ದಕ್ಕೂ ಸಿದ್ದರಾಮಯ್ಯನ ವಿರುದ್ಧ ಹರಿಹಾಯ್ದ ಎಚ್.ಆರ್.ಶ್ರೀನಾಥ್ "ನೋಟಿಸ್ ನೀಡಿದ ಮಾತ್ರಕ್ಕೆ ಜಗ್ಗುವ ಆಸಾಮಿಯಲ್ಲ ನಾನು. ನಮ್ಮ ಕುಟುಂಬ ಕಳೆದ ಐವತ್ತು ವರ್ಷದಿಂದ ಹೈಕ ಭಾಗದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಬೆಳೆಸಿದೆ. ಆದರೆ ಕೆಲವರ ಮಾತು ಕೇಳಿ ಸಿಎಂ ನಮ್ಮನ್ನೇ ತುಳಿಯಲು ತೊರಟಿರೋದನ್ನು ನಾನು ಸಹಿಸಿಕೊಳ್ಳುವುದಿಲ್ಲ. ಸಿಎಂ ವಿರುದ್ಧ ಸೋನಿಯಾ ಗಾಂಧಿ, ರಾಹುಲ್ ಗಾಂಧಿಗೆ ದೂರು ನೀಡುತ್ತೇನೆ. ಜೊತೆಗೆ ರಾಜ್ಯಾದ್ಯಂತ ಸುತ್ತಿ ಪಲಸಿಗ ಸಿದ್ದರಾಮಯ್ಯ ವಿರುದ್ಧ ಹೋರಾಟ ಮಾಡುತ್ತೇನೆ. ಸಿಎಂ ಕೇವಲ ನಾಲಾಯಕ್ ಅಲ್ಲ, ಅವನೊಬ್ಬ ಲೋಫರ್" ಎಂದು ಅಬ್ಬರಿಸಿದ್ದಾನೆ.

ಶ್ರೀನಾಥನ ತಂದೆ ಎಚ್.ಜಿ.ರಾಮುಲು 1975 ರಿಂದ 2004ರವರೆಗೂ ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಯ ಕಾಂಗ್ರೆಸ್ಸಿನ ಕಿಂಗ್ ಆಗಿ ಮೆರೆದವರು. ಅವರ

ದೃಷ್ಟಿಯಿಂದ ಸಿದ್ದರಾಮಯ್ಯನವರ ಸಖ್ಯದಲ್ಲೇ ಕಾಣಿಸಿಕೊಳ್ಳುತ್ತಿದ್ದ ಅನ್ಸಾರಿ ಕೊನೆಗೊಮ್ಮೆ ಕ್ರಾಸ್ ವೋಟಿಂಗ್ ಕಾರಣಕ್ಕೆ ಜೆಡಿಎಸ್‌ನಿಂದ ಅಮಾನತುಗೊಂಡ ನಂತರ ಸಿಎಂಗೆ ಆಪ್ತನಾಗಿ ವಿವಿಧ ಸ್ಥಳೀಯ ಪ್ರಾಧಿಕಾರ ಮತ್ತು ನಿಗಮ ಮಂಡಳಿ ನಿರ್ದೇಶಕ ಹುದ್ದೆಗಳಿಗೆ ತನ್ನ ಆಪ್ತರನ್ನೇ ನೇಮಿಸುವಂತೆ ಮಾಡಿದ್ದು ಶ್ರೀನಾಥ್‌ನನ್ನು ಕೆರಳಿಸಿತ್ತು. ಅಲ್ಲದೇ ಈಗಾಗಲೇ ಒಂದು ಕಾಲನ್ನು ಕಾಂಗ್ರೆಸ್‌ನೊಳಗೆ ಇಟ್ಟಿರುವ ಅನ್ಸಾರಿಗೇ ಮುಂದಿನ ಎಲೆಕ್ಷನ್‌ನ ಕಾಂಗ್ರೆಸ್ ಟಿಕೆಟ್ ನಿಕ್ಕಿ ಎಂಬ ಸುದ್ದಿ ಹರಿದಾಡಲು ಶುರುವಾದ ನಂತರವಂತೂ ಶ್ರೀನಾಥ್, ಸಿದ್ದರಾಮಯ್ಯನ ವಿರುದ್ಧ ಕೆಂಡ ಕಾರುತ್ತಿದ್ದ. ಮೊನ್ನೆ ಪ್ರತಿಭಟನೆಯ ಮೂಲಕ ಅದನ್ನೆಲ್ಲ ಕಾರಿಕೊಂಡಿದ್ದಾನೆ. ಅನ್ಸಾರಿ ಕಾಂಗ್ರೆಸ್‌ಗೆ ಬರುವುದೇ ಆದರೆ







ಶ್ರೀನಾಥ್ ಕೈಗೆ ಗುಡ್‌ಬೈ ಹೇಳಿ ಜೆಡಿಎಸ್ ಸೇರಲಿದ್ದಾನೆ ಎಂಬ ಮಾತುಗಳು ರೆಕ್ಕೆಪುಕ್ಕ ಪಡೆದುಕೊಳ್ಳುತ್ತಿವೆ.

ಇನ್ನು ಕೊಪ್ಪಳದಲ್ಲಿ ಪ್ರೆಸ್‌ಮೀಟ್ ಕರೆದಿದ್ದ ಕರಿಯಣ್ಣ ಸಂಗಟಿ ಹಾಲಿ ಕಾಂಗ್ರೆಸ್ ಶಾಸಕ ರಾಘವೇಂದ್ರ ಹಿಟ್ನಾಳ್ ವಿರುದ್ಧ ಹರಿಹಾಯ್ದರು. "ರಾಘವೇಂದ್ರ ಹಿಟ್ನಾಳ್‌ನ ತಂದೆ ಬಸವರಾಜ ಹಿಟ್ನಾಳ್ ಮೊದಲು ಜೆಡಿಎಸ್‌ನಲ್ಲಿ [illegible] ಕರ್ನಾಟಕ ಕಾಂಗ್ರೆಸ್ ಅಭ್ಯರ್ಥಿಯಾಗಿ [illegible] ತನ್ನ 25 ವರ್ಷ ರಾಜಕಾರಣದುದ್ದಕ್ಕೂ ಎದುರಾಳಿಯಾದ

ಎನ್ನಲಾಗುತ್ತಿದೆ. ಅದರಂತೆ ಗಂಗಾವತಿಯಲ್ಲಿ ಇಕ್ಬಾಲ್ ಅನ್ಸಾರಿಗೆ ಎದುರಾಗಿ ಕರಿಯಣ್ಣ ಸಂಗಟಿಯನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಲಾಗುತ್ತಂತೆ. ಗಂಗಾವತಿಯಲ್ಲಿ ಹೇಗೂ ಕುರುಬ ಮತಗಳೇ ನಿರ್ಣಾಯಕವಾದುದರಿಂದ ಅದೇ ಸಮುದಾಯದ ಕರಿಯಣ್ಣ ನಿಂತರೆ ಇಕ್ಬಾಲ್ ಅನ್ಸಾರಿಗೆ [illegible] ಎನ್ನುವುದು ಅವರ ಲೆಕ್ಕಾಚಾರ. ಮುಂದೇನಾಗುತ್ತೋ [illegible]

■ ಸೋಮನಾಥ್ ಪಾಟೀಲ್

ದನ ತಗಂಡೋಗಿ ಬಿಜೆಪಿಗಳ ಮನೆ ಬಾಗ್ಲಿಗೆ ಕಟ್ಟಿದ್ರ್ಯಂಗ

ಕಟ್ಟೆಪುರಾಣ

• ಬಿ ಚಂದ್ರೇಗೌಡ

ಎರಡು ಹದ ಮಳೆಯಿಂದ ಮನಸನ್ನು ಸಮಾಧಾನಗೊಂಡಿದ್ದವು. ಮುಂಗಾರು ಮಳೆಬಿದ್ದ ಕೂಡಲೇ ಊರಲ್ಲಿ ಭೂಮಿ ಉಳುವವರ ಸದ್ದು ಭೋರ್ಗರೆಯುತ್ತದೆ. ನೇಗಿಲು ನೊಗ ಉಳೋ ಕೋಲು ಉಳೋ ಹಗ್ಗವೆಲ್ಲಾ ಈಚೆಗೆ ಬರುತ್ತವೆ. ಆದರೆ ಈಗ ಅಂತಹ ಸಂಭ್ರಮವಿರಲಿಲ್ಲ. ಯಾಕೆಂದರೆ ಇಡೀ ಊರಿನಲ್ಲಿ ಕೇವಲ ಹದಿನೈದು ಮನೆಯಲ್ಲಿ ಮಾತ್ರ ದನಗಳಿದ್ದವು. ಇನ್ನುಳಿದ ನೂರಾರು ಮನೆ ದನಗಳಿಂದ ಮುಕ್ತವಾಗಿ ಬೇವರ್ಸಿಗಳ ಮನೆಯಂತಾಗಿದ್ದವು. ಅವರೆಲ್ಲಾ ಊರಲ್ಲಿರುವ ಐದಾರು ಟ್ರಾಕ್ಟರಿಯ . ಮಾಲೀಕರನ್ನು ಹುಡುಕುವುದರಲ್ಲಿ ನಿರತರಾಗಿದ್ದರು. ದನದ ಗೊಡವೆಯಿಂದ ಬಹಳ ಹಿಂದೆಯೇ ಮುಕ್ತವಾಗಿದ್ದ ಉಗ್ರಿ,

"ಕಾಳಮಾವ, ಈ ಮೋದಿ ಮಾಡಿರೊ ತಮಾಸಿ ಗೊತ್ತಾ?" ಎಂದ.

"ತಮಾಸಿನು ಮಾಡ್ಯನೆ ಅವುನು?"

"ಅವ್ನು ಮಾಡದ್ಯಲ್ಲ ತಮಾಸಿನೆ ಅಲವೆ. ಅಲ್ಲಾ ಕಣ ಮಾವ, ಇನ್ನ ಮುಂದೆ ದನ ಮಾರದಾದ್ರೆ ಸಾಬರಿಗೆ ಮಾರಂಗಿಲವಂತೆ."

"ಇನ್ಯಾರಿಗೆ ಮಾರಬೇಕು?"

"ರೈತರಿಗೇ ಮಾರಬೇಕಂತೆ."

"ಅವುನಿಗೇನು ತಲಿ ಕೆಟ್ಟದೇನ್ಲ?"

"ಕೆಟ್ಟು ಭಾಳ ದಿನ್ಯಾಗ್ಯದೆ. ಕ್ಯಲಸ ಈಗ ಸುರುವಾಗ್ಯದೆ. ಆದರ ಪರಿಣಾಮನೆ ನೋಡಿದು."

"ಅಲ್ಲ ಕಂಡ್ಯ, ರೈತರೇ ಅಲವೆ ದನ ಮಾರೋರು. ಅವುರತ್ರ ಅವುರೆ ಯಂಗೆ ತಗಂಡರು?" ಎಂದಳು ಜುಮ್ಮಿ.

"ನೋಡೇ, ನಿನ್ನ ಆಲೋಚನೆ ಮೋದಿಗೊಳದಿಲ್ಲ" ಎಂದ ಉಗ್ರಿ.

"ಆದ್ಯಾಕಂತ ತಿಕ್ಕಲ ಕಾನೂನು ಮಾಡಿದ?" ಎಂದ ಕಾಳಮಾವ.

"ಅವುನಿಗೆ ಸಾಬರ ಕಂಡ್ರಾಗದಿಲ್ಲ ಕಣ ಮಾವ. ಸಾಬರು ದನ ತಿನ್ನದಂಗೆ ಮಾಡಬೇಕು ಅಂತ ಹಟಕ್ಕೆ ಬಿದ್ದವೆ ಆ ಬಿಜೆಪಿ ಬಡ್ಡೆತ್ತವು. ಅದ್ಕೆ ಅವು ಇಂತ ಕಾನೂನು ತಂದವೆ."

"ಊರ್ಯಲ್ಲ ಉಗಾದಿ ಮಾಡಿದ್ರೆ ಹಡ್ನಾಡಿ ಅಮಾಸೆ ಮಾಡಿತ್ತಂತೆ, ಅಂಗಾಯ್ತು ಇವುನು ಮಾಡದು."

"ಕರಟ್ಯಾಗೇಳಿದೆ ಕಣ ಮಾವ. ಅವುನು ಬಂದಾಗ್ಲಿಂದ ಮಾಡದ್ಯೆಲ್ಲ ಬರೀ ಇಂತ ಕ್ಯಲಸಗಳೆಯಾ. ವಳ್ಳೆ ಕ್ಯಲಸಗಳೆ ಕಾಣದಿಲ್ಲ ಅವುನಿಗೆ" ಎಂದ ಉಗ್ರಿ.


"ವಳ್ಳೆ ಕ್ಯಲಸಗಳು ಅವುರಿಗೆ ಹೊಳಿಯದಿಲ್ಲ ಕಣೊ ಉಗ್ರಿ. ಈ ಈಡಿಯಟ್‌ಗಳಿಂದ ದೇಶನೆ ಟ್ರಬಲ್ಲಲ್ಲದೆ" ಎಂದುಕೊಂಡು ವಾಟಿಸ್ಸೆ ಬಂದ.

"ದನವ ಸಾಬರಿಗೆ ಮಾರಂಗಿಲವಂತಲ್ಲಾ?" ಎಂದಳು ಜುಮ್ಮಿ.

"ಊ ಕಣಕ್ಕ. ಕಾಳದೊಡಪ್ಪ ತನ್ನ ಮುದಿ ಎತ್ತ ಮಾರದಾದ್ರೆ ಸೀರ ಚಿಗಪ್ಪನಿಗೆ ಮಾರಬೇಕು. ಸೀರ ಚಿಗಪ್ಪ ತನ್ನತ್ರ ಇರೊ ಏಜಡ್ ಕೌ ಮಾರದಾದ್ರೆ ಕಾಳದೊಡಪ್ಪನಿಗೇ ಮಾರಬೇಕು. ಈ ತರ ಮಾರುವಾಗ ಅವುರಿಬ್ರು ರೈತರು ಅಂತ ದಾಖಲಾತಿಗಳ ಹೊಂದಿರಬೇಕು. ಇದನ್ನೆಲ್ಲ ನೋಡಿದ್ರೆ ಈ ತುಘಲಕ್ ಮೋದಿ ಇನ್ನ ಏನೇನು ಮಾಡ್ತನೊ ಅಂತ ಹೆದ್ರಿಕಾಗ್ಯದೆ."

"ಅಲ್ಲ ಈ ಮುಂಡೆ ಮಕ್ಕಳಿಗೆ ಸಾಬರ ಕಂಡ್ರಾಗದಿಲ್ಲ ಅಂತ ನಮ್ಮ ತಲಿಗೆ ತಂದ್ರಲ್ಲ ಹೇಳು" ಎಂದ ಸೀರ.

"ಅಲ್ಲಾ, ಸಾಬರೇನು ದನವ ಇವತ್ತಿಂದ ತಿಂದರೆ. ಆ ಕಾಲದಿಂದ ತಿನ್ನಕಂಡು ಬಂದ್ರು. ನಮ್ಮಲ್ಲೇ ಕೆಲವುರು



ಯಮ್ಮೆ ಕ್ವಾಣನ್ನ ತಿನ್ನಕಂಡು ಬಂದ್ರು. ಅದ್ಯಂಗೊ ಯಲ್ಲಾ ನ್ಯಡಕಂಡು ಹೋಯ್ತಾಯಿತ್ತಪ್ಪ. ಅವುರ ಮ್ಯಾಗಲ ಸಿಟ್ಟಿಗೆ ನಾವು ದನ ಮಾರದಂಗೆ ಮಾಡಿದನಲ್ಲಾ ಮುಂದ್ಯಂಗೇ" ಎಂದು ಕಾಳಮಾವ ಚಿಂತಾಕ್ರಾಂತನಾದ.

"ಏನು ಇಲ್ಲ ದೊಡಪ್ಪ ವಯಸ್ಸಾದ ದನ ತಗಂಡೋಗಿ ಬಿಜೆಪಿಗಳ ಮನೆ ಬಾಗಲಿಗೆ ಕಟ್ಟಿ ಬರನ. ಅದೊಂದು ಚಳವಳಿ ನ್ಯಡದೋಗ್ಲಿ."

"ಅವುರೆಲ್ಲಿ ಸಾಕ್ಯಾರು, ಬುಟ್ಟು ಓಡುಸ್ತರಪ್ಪ"

"ಓಡುಸದಂಗೆ ನೋಡಿಕಬೇಕು ಕಣೊ ಉಗ್ರಿ. ಆ ಪಾರ್ಟಿ ಪ್ರಸಿಡೆಂಟು, ಪದಾಧಿಕಾರಿಗಳು, ಕಾಲಾಳುಗಳ ಮನೆ ಬಾಗಲಿಗೇ ಕಟ್ಟಬೇಕು. ಅವುರು ಮನಿಂದ ಈಚೆಗೆ ಬರದಂಗೆ ಕಟ್ಟಬೇಕು. ಅವು ಹುಲ್ಲು ನೀರಿಲ್ದೆ ಸಾಯತವೆ. ಆಗ ತಾವು ತಂದಿರೊ ಕಾನೂನಿನ ಪರಿಣಾಮ ಗೊತ್ತಾಯ್ತದೆ. ಅಲವೆ ದೊಡಪ್ಪ?"

"ಅವ್ರಲ್ಲ ಆಗದ ಕ್ಯಲಸ ಕಂಡ್ಯ. ಈಗೇನು ಮಾಡಬೇಕು ಅಂದ್ರೆ ಸಾಬರೆ ರೈತರ ಯಾಸ ಹಾಕಬೇಕು" ಎಂದು ಹಾಸ್ಯ ಮಾಡಿದ.

"ಅಂದ್ರೆ ಸಾಬರು ಇಜಾರ ಬಿಚ್ಚ ಯಸ್ತು ನಿನ್ನ ಸೀರ ಚಿಗಪ್ಪನ ಡ್ರೆಸ್ನಲ್ಲಿ ಯವಾರ ಮಾಡಬೇಕು ಅಂತಿಯಾ? ಮಂಡುಸ್ತುಲ್. ಆದ್ರೆ ಹೆಸರನೂ ಬದ್ಲಾಸಿಗಂಡು ಬರಬೇಕಲ್ಲ ಹೇಳು" ಎಂದು ವಾಟಿಸ್ಸೆ ನಕ್ಕ.

"ಯಾವುದೇ ಕಾನೂನು ಜಾರಿಯಾದ್ರು ತಪ್ಪಿಸಿಗಂಡು ಕಾಲಾ ಮಾಡೊ ದಾರಿಗಳೂ ಇರತವೆ ಕಣೊ ವಾಟಿಸ್ಸೆ. ಈಗ ಗೋಹತ್ಯೆ ನಿಷೇಧ ಕಾನೂನು ಜಾರಿಲಿತ್ತು, ಆದ್ರೂ ಸಾಬರು ಅದ್ಯಂಗೋ ದನ ತಿನ್ನಕಂಡೇ ಬಂದ್ರು. ಈಗ್ಲೂ ಯಾವುದಾರ ದಾರಿ ಕಾಣತದೆ ತಗೊ" ಎಂದ ಉಗ್ರಿ.

"ಬಿಜೆಪಿಗಳ ಮನೆ ಬಾಗಿಲಿಗೆ ದನ ಕಟ್ಟದು ಬುಟ್ರೆ ಬ್ಯಾರೆ ರೂಟೆ ಇಲ್ಲ ಕಣೊ ಉಗ್ರಿ."

"ಇವುನಿಂತ ಕ್ಯಲಸನೇ ಮಾಡದರಿಂದ ಆ ಕಾಶ್ಮೀರದ ಸಾಬರು ಮ್ಯಾಲ ಬಿದ್ದವುರಂತಲ್ಲಾ" ಎಂದ ಸೀರ.

"ಇವುರಿರಗಂಟ ಅವುರಂಗೆ ಚಿಗಪ್ಪ ನೋಡು ಇಲ್ಲಿಗಂಟ ತಲಾಕ್ ತಗಂಡು ಗುಂಜತಾಯಿದ್ರು. ಈಗ ದನಿನ ಬಾಲಹಿಡಕಂಡು ಯಳದಾಡತಾ ಅವೆ."

"ತಲಾಕು ಅಂದ್ರೇನ್ಲ?" ಎಂದಳು ಜುಮ್ಮಿ.

"ಓಹೊ ನಿನಿಗೆ ಇಂಪಾರ್ಟೆಂಟು ಮ್ಯಾಟ್ರೆ ಗೊತ್ತಿಲ್ಲ ಕಣಕ್ಕ. ಈಗ ನಮ್ಮಲ್ಲಿ ಕಟಗಂಡೋಳು ಇಷ್ಟ ಇಲ್ಲ ಅಂದ್ರೆ ಬುಟಬುಡ್ತೀವಿ. ಅದೇ ಸಾಬರಲ್ಲಿ ಮೂರು ಸತಿ ತಲ್ಲಾಕ್, ತಲಾಕ್, ತಲಾಕ್ ಅಂದೇಟಿಗೆ ಹೆಡತಿ ಗಂಟುಮೂಟೆ ಕಟಗಂಡು ಹೊಯ್ತಾಯಿರಬೇಕು. ಅದ್ಕೆ ತಲಾಕ್ ಅಂತರೆ ಕಣಕ್ಕ"

"ಅಯ್ಯೋ ಅಂಗೂ ಇದ್ದತೇನ್ಲ?"

"ಊ ಕಣಕ್ಕ. ಅದ ಸಾಬರು ನಮ್ಮ ಧರಮದಲ್ಲೇ ಅದೆ. ಅದ ಕಟಗಂಡು ನಿಮಗೇನು. ನಿಮ್ಮ ಕ್ಯಲಸ ನೀವು ಮಾಡಿ. ನಮ್ಮ ಹಣೆಬರ ನಾವು ಪಡದದ್ದ ನಾವು ಅನುಭವುಸ್ತಿವಿ ಅಂತ ಸಮಜಾಯಿಸಿ ನೀಡಿದ್ರು. ಮೋದಿ ಸರಕಾರ ಆದ ಕೋರ್ಟಿಗೆ ಎತ್ತಿಗಂಡು ಕುಂತದೆ."

"ನೀನೇನೆ ಅಂದ್ರು ತಲಾಕ್ ಸರಿಲ್ಲ ಕಣೊ. ಆ ಯೂಸೂಫ್‌ನ ತಮ್ಮನೆಡ್ತಿ ಪಾಪ ಬಸುರಿ ಹೆಂಗುಸು. ಒಂದು ಹೆಣ್ಣುಮಗ ಬ್ಯಾರೆ ಇತ್ತು, ಅಂಥೋಳಿಗೆ ತಲಾಕ್ ಕೊಟ್ಟ. ಆ ಹುಡುಗಿ ಬೆಂಗಳೂರು ಕಡಿಕೋಯ್ತು" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ಇನ್ನೊಬ್ಬರ ಯಲೆಲಿ ಬಿದ್ದಿರೋ ಇಲಿ ಕಡೆ ಗಮನ ಹರಸದಕಿಂತ ಮೊದ... ತನ್ನ ಯಲೆಲಿ ಬಿದ್ದಿರೊ ಯಗ್ಗಣದ... ಮಾಡಬೇಕಾಗಿತ್ತು ಕಣೊ. ಈಗ ಅವ... ಅಂತ ಗೊತ್ತೇನೋ?" ಎಂದ ವಾಟಿಸ್ಸೆ.

"ಗುಜರಾತಲ್ಲಿ ಇದ್ದಳಂತೆ ಕಂಡ್ಯ."

"ನಿನಿಗ್ಯಾರು ಚಿಗಪ್ಪ ಹೇಳಿದ್ದು?"

"ಸೂರತ್ ರಾಮಣ್ಣ ಅಂಗಂದ. ... ಹೋಟ್ಲು ಮಡಗಿರದು. ಈ ಮೋದಿ ... ಪಾಪ ಅವುಳು ಬಾಳ ವಳ್ಳೆ ಹೆಂಗುಸು ... ವರ್ಸ ಜ್ವತೆಲಿ ಇದ್ರಂತೆ. ಮಕ್ಕಳಾಗಲಿಲ್ಲ ... ಬುಟ್ಟೋದನಂತೆ" ಎಂದ ಸೀರ.

"ಮಕ್ಕಳಾಗಲಿಲ್ಲ ಅಂದ್ರೆ ಇವ... ಡಿಪೆಕ್ಟಿರಬೇಕು."

"ಎತ್ತಿಗೆಲ್ಲಿ ಮಕ್ಕಳಾದವೊ? ವ... ಎತ್ತಿದ್ದಂಗೆ."

"ವಳ್ಳೆ ಜೋಕು ಕಣೊ ಉಗ್ರಿ. ... ಬಿಜೆಪಿ ಎತ್ತಿದ್ದಂಗೆ. ಸುಮ್ಮನೆ ಕ್ಯಲಸ ಮಾಡ... ಮೇಣಿ ಮಾತ್ರ ಬ್ರಾಂಬ್ರು ಕೈಲಿರತದೆ. ಆ ... ಹೇಳಿದ್ನಲ್ಲ ಮಾಡಿಕಂಡು ಸುಮ್ಮನೆ ಹೋದ... ನೋಡೀಗ್ಲು ಆ ಅದ್ವಾನಿ ರಾಷ್ಟ್ರಪತಿಯಾ... ಮಸೀದಿ ಮ್ಯಾಟ್ರು ಕೆದಕಿ ಧೂಳೆಬ್ಬಿಸಿಬುಟ... ರಾಷ್ಟ್ರಪತಿಯಾಗದು ಬ್ಯಾಡ, ಬಾಬರಿ ... ಬಚಾವಾದ್ರು ಸಾಕಾಗ್ಯದೆ."

"ಓ ಅಂಗರೆ ಮಸೀದಿ ವಿಷಯ ಅದ... ಅನ್ನು."

"ಇಲ್ಲ ಕಣೊ ಉಗ್ರಿ. ನಮಾಜ ಮಾಡಕೆ... ಮಸೀದಿನೆ ಮ್ಯಾಲೆ ಕೆಡಿಕಂಡ ಅಂತ ಈ ... ಮಸೀದಿ ಕೆಡವಿದ ಕೇಸು ಈಗ ಹಕನಾ...

"ಅಂಗರವುನು ಅದರಲ್ಲೆ ಕಡಿಯಾಯ..."

"ಆಗಲೆಬೇಕಲವೆ. ಅಂತದೇ ಒಂ... ಮೋದಿಗೂ ಬರೋದಿತ್ತು, ಯಾಕಪ್ಪ ... ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಮ... ಮೂರು ಸಾವುರ ಸಾಬರ ಉಡಾಯಿಸಿದ್ದ... ಕೇಸನೂ ಮುಚ್ಚಿ ಸಾಕ್ಷಿ ಹಾಳು ಮಾಡಿ ಬ... ಪ್ರಧಾನಿ ಆದ. ಇಲ್ಲ ಅಂದ್ರೆ ಅವುನಿಗೂ ... ಬರದು."

"ಯಾವನಿಗೆ ಯಾವ ಗತಿನಾರ ... ಮುದಿಯಸ ಯಾರಿಗೆ ಮಾರನ್ಲ?"

"ಮಾರಬ್ಯಾಡ ದೊಡಪ್ಪ, ಈ ಹಿಂದೆ ... ಸುಮಾರು ದನ ಸುಖವಾಗಿ ಪ್ರಾಣ ... ನೋಡಿದ್ದಿನಿ. ಅವುನ್ನ ಧಪನ್ ಮಾಡಿದ್ರಿ. ಈ... ತಗಿಯಂಗಿಲ್ಲ, ಜೆಸಿಬಿ ಅವೆ. ಆದ್ರಿಂದ ... ಇರ್ಲಿ ಬುಡು."

"ಹುಲ್ಲು ನೀರು ತಂದು ಕೊಡ್ತಿಯಾ ..."

"!?"

06 ◀◀

ಮಾಡಿಕೊಂಡು ಬನ್ನಿ ಅಂತ ಮಾತಿಗೆ ಹೇಳಿದ್ದರು. ಅಶೋಕ್ ಅಷ್ಟು ಹೇಳಿದ್ದೆ ತಡ, ಇತ್ತ ಅಶೋಕ್ ಜಯನಗರದ ತನ್ನ ಮನೆಗೆ ಹೋಗುವುದಕ್ಕು ಮೊದಲೇ ಅಲ್ಲಿಗೆ ಹಾಜರಾದ ಸ್ವಾಮೀಜಿ ಒಂದಷ್ಟುಹೊತ್ತು ಹರಟಿ, ಗಡದ್ದಾಗಿ ಊಟ ಮಾಡಿ ಎದ್ದು ಬಂದಿದ್ದರು. ಸಹಜವಾಗೇ ಕುಶಲೋಪರಿ ಮಾತಿನ ನಡುವೆ ಪಕ್ಷದ ಜ್ವಲಂತ ಬಿಕ್ಕಟ್ಟಿನ ಬಗ್ಗೆಯೂ ಮಾತುಕತೆ ನಡೆದಿರಬಹುದು. ಆದರದು ಸಂಧಾನ ಮಾಡಿಸುವಷ್ಟು ಪ್ರಭಾವದ್ದಂತೂ ಆಗಿರಲಿಕ್ಕಿಲ್ಲ. ಅಶೋಕ್ ಮನೆಗೆ ಹೋಗುವುದು ಖಾತ್ರಿಯಾಗುತ್ತಿದ್ದಂತೆಯೇ ತನ್ನ ಚೇಲಾಗಳ ಮೂಲಕ ಟೀವಿ ಚಾನೆಲ್‌ಗಳಿಗೆ 'ಸಂಧಾನಕ್ಕೆಂದೇ ಸ್ವಾಮೀಜಿಯಿಂದ ಅಶೋಕ್ ಭೇಟಿ' ಎಂಬ ಬ್ರೇಕಿಂಗ್ ನ್ಯೂಸ್ ರವಾನಿಸಿ ಪುಕ್ಕಟೆ ಸುದ್ದಿಯಾಗಿದ್ದರು. ಇದಿಷ್ಟೇ ಅವರ ಸಂಧಾನದ ಹಕೀಕತ್ತು. ಇವೆರಡು ಭೇಟಿಯ ಹೊರತಾಗಿ ಯಡ್ಯೂರಪ್ಪ, ಈಶ್ವರಪ್ಪರನ್ನು ಮುಖಾಮುಖಿ ಅಥವಾ ಪ್ರತ್ಯೇಕವಾಗಿ ಕೂರಿಸಿಕೊಂಡ ಮಾತಾಡಿಸಲಿಲ್ಲ, ಹೈಕಮಾಂಡ್ ಮಂದಿಯನ್ನು ಎಡತಾಕಲಿಲ್ಲ, ಸಂಘಿ ದಿಗ್ಗಜರನ್ನು ಭೇಟಿಯಾಗಲಿಲ್ಲ, ಸಮಸ್ಯೆಯ ಮೂಲವಾದ ಪ್ರಧಾನ ಕಾರ್ಯದರ್ಶಿ ಸಂತೋಷ್ ಜೊತೆ ಚರ್ಚಿಸಲಿಲ್ಲ, ಅದು ಹೇಗೆ ಸಂಧಾನವಾಗುತ್ತೆ?

ಈಗಾಗಲೇ ಬಿಜೆಪಿ ಉನ್ನತ ಮಟ್ಟದಲ್ಲಿ ಆಗಿದ್ದ ಸಂಧಾನದ ಕ್ಲೈಮ್ಯಾಕ್ಸ್ ದೃಶ್ಯಾವಳಿಗಳಿಗೆ ತನಗೆ ಬೇಕಂತೆ ಡಬ್ಬಿಂಗ್ ಮಾಡಿಕೊಂಡಿದ್ದಷ್ಟೇ ಮಾದಾರ ಚೆನ್ನಯ್ಯ ಸ್ವಾಮೀಜಿಯ ಸಾಧನೆ!

ಮಾದಾರ ಸ್ವಾಮಿಯ ಪೊಲಿಟಿಕಲ್ ಕನಸು

ಅಷ್ಟಕ್ಕೂ ಮಾದಾರ ಚೆನ್ನಯ್ಯ ಸ್ವಾಮೀಜಿಗೆ ಇಂಥಾ ಪ್ರಚಾರದ ದರ್ದು ಯಾಕೆ ಅಂತ ಕೆದಕುತ್ತಾ ಹೋದರೆ ಕಾವಿಯೊಳಗೆ ಅವಿತಿಟ್ಟುಕೊಂಡಿರುವ ಖಾದಿ ಕನಸಿನ ಹಪಾಹಪಿ ಗಾಬರಿ ಹುಟ್ಟಿಸುತ್ತದೆ. ಹೌದು, ಮಾದಾರ ಚೆನ್ನಯ್ಯ ಸ್ವಾಮೀಜಿಯು ಪೂರ್ವಾಶ್ರಮದ ಜರ್ನಲಿಸ್ಟ್ ಕೃಷ್ಣ ಆಗಿದ್ದ ದಿನದಿಂದಲೇ ಬಲು ಮಹತ್ವಾಕಾಂಕ್ಷಿ ಮನುಷ್ಯ. ಪೇಪರ್ ಕೃಷ್ಣನಾಗಿದ್ದರೆ ಯಾರೂ ತನ್ನನ್ನು ಗುರುತಿಸುವುದಿಲ್ಲ ಎಂಬ ಕೊರಗಿನಲ್ಲಿ ಇದ್ದಾಗಲೇ ಚಿತ್ರದುರ್ಗದ ಮುರುಘಾ ಶರಣರು ಜಾತಿಗೊಬ್ಬ ಜಗದ್ಗುರು ಹುಟ್ಟುಹಾಕುವ ಅಭಿಯಾನಕ್ಕೆ ಕೈಹಾಕಿದ್ದರು. ಆಗ ಮಾದಿಗ ಸಮಾಜದ ಇದೇ ಕೃಷ್ಣನಿಗೆ ಕಾವಿ ತೊಡಿಸಿ, ಸನ್ಯಾಸ ದೀಕ್ಷೆ ಕೊಟ್ಟು ಹೆದ್ದಾರಿ ಪಕ್ಕದಲ್ಲೇ ಒಂದಷ್ಟು ಜಮೀನು ಮೀಸಲಿಟ್ಟು ಮಾದಾರ ಚೆನ್ನಯ್ಯ ಪೀಠಕ್ಕೆ ಮಠಾಧಿಪತಿಯನ್ನಾಗಿ ಪ್ರತಿಷ್ಠಾಪಿಸಿದ್ದರು. ಶರಣ ಪರಂಪರೆಯ ಮೂಲಕ ಸಮಸಮಾಜದ ಕನಸು ಬಿತ್ತಲು ಮುರುಘಾ ಶರಣರು ಈ ಕಾಯಕಕ್ಕೆ ಕೈ ಹಾಕಿದ್ದೇನೊ ನಿಜ, ಆದರೆ ಅದೇ ಸದುದ್ದೇಶ ಹೊಂದಿದ್ದವರನ್ನು ಪೀಠಗಳಿಗೆ ಆಯ್ಕೆ ಮಾಡುವಲ್ಲಿ ಅವರು ಎಡವಿದ್ದರು. ತುಸು ಪಾಳೇಗಾರಿಕೆಯ ಗತ್ತು ತೋರಿಸುತ್ತಿದ್ದ ಮುರುಘಾ ಶರಣರ ವಿರುದ್ಧವೇ ತಿರುಗಿಬಿದ್ದ ಜಾತಿ ಜಗದ್ಗುರುಗಳು ಅವರ ಪ್ರಭಾವದಿಂದ ಹೊರಬಂದು ತಮ್ಮದೇ ಅಸ್ತಿತ್ವ ರೂಪಿಸಿಕೊಳ್ಳಲು ಶುರು ಮಾಡಿದ್ದರು. ಆಗ ಈ ಮಾದಾರ ಚೆನ್ನಯ್ಯ ಸ್ವಾಮೀಜಿ ತನ್ನ ಅಸ್ತಿತ್ವವನ್ನು ಕಂಡುಕೊಂಡದ್ದು ಶರಣ ಪರಂಪರೆಗೇ ತದ್ವಿರುದ್ಧವಾದ ವೈದಿಕಶಾಹಿ ಮನುವಾದಿ ಸಂಘ ಪರಿವಾರದ ತೆಕ್ಕೆಯಲ್ಲಿ!

ಪೇಜಾವರ ಸ್ವಾಮೀಜಿಯ ತೆಕ್ಕೆಯಲ್ಲಿ ಕಾಣಿಸಿಕೊಳ್ಳುತ್ತಲೇ ಬಾಬಾ ಬುಡನ್‌ಗಿರಿಯಂತಹ ಸೆನ್ಸೇಷನಲ್ ವಿಷಯದಲ್ಲಿ ಸಿ.ಟಿ.ರವಿ ಜೊ... ಹೆಜ್ಜೆ ಹಾಕುತ್ತಾ ಬಂದ ಮಾದಾರ ಚೆನ್ನಯ್ಯ ಸ್ವಾಮೀಜಿ ಅಥ... ಕೃಷ್ಣನಿಗೆ ರಾಜಕೀಯದಲ್ಲಿ ಬೇರೂರಬೇಕೆಂಬ ಕನವರಿಕೆ ಮೊ... ಇತ್ತು. ಕಾವಿ ನಂಟಿನ ಮೂಲಕ ಬಿಜೆಪಿ ಸಖ್ಯವನ್ನು ಗಟ್ಟಿಯ... ಬಂದ ಮಾದಾರ ಚೆನ್ನಯ್ಯರಿಗೆ ಚಿತ್ರದುರ್ಗದ ಎಂಪಿ ಆಗುವ ತುಡ... ಎಂಬ ಗುಸುಗುಸು ಅವರ ಆಪ್ತ ವಲಯದಿಂದಲೇ ಕೇಳಿಬರು... ಎಂಪಿ ಎಲೆಕ್ಷನ್ ಹೊತ್ತಿಗೆ ಚಿತ್ರದುರ್ಗದ ಬಿಜೆಪಿ ಟಿಕೆಟು ... ಕಸರತ್ತು ಶುರು ಮಾಡಿದ್ದಾರಂತೆ. ಹೇಗೂ ಬಿಜೆಪಿಯ ಹ... ಜನಾರ್ದನ ಸ್ವಾಮಿಯನ್ನು ಕಳೆದ ಎಲೆಕ್ಷನ್‌ನಲ್ಲಿ ಜನ ತಿರಸ್ಕರಿ... ಮೋದಿ ಅಲೆಯಲ್ಲೂ ಆತ ಮಕಾಡೆ ಮಲಗಿದ್ದನೆಂದರೆ ಮ... ಯಾವ ಖಾತ್ರಿಯೂ ಇಲ್ಲ, ಹಾಗಾಗಿ ಬಿಜೆಪಿಗೆ ಒಬ್ಬ ಪ್ರಭಾವಿ ... ಜರೂರು ಕಾಡುತ್ತಿದೆ. ತಾನು ಟ್ರೈ ಮಾಡಿದರೆ ಟಿಕೆಟ್ ಸಿಗಬ... ಅವರ ಲೆಕ್ಕಾಚಾರ ಇದ್ದಂತಿದೆ. ಇತ್ತೀಚಿನ ಅವರ ನಡವಳಿಕೆ... ಪುಷ್ಟೀಕರಿಸುತ್ತಿವೆ. ಅದರಲ್ಲೂ ಉತ್ತರಪ್ರದೇಶದ ಭರ್ಜರಿ ಗೆಲುವಿ... ತನ್ನ ಕೋಮು ಅಜೆಂಡಾವನ್ನು ಅನುಷ್ಠಾನಕ್ಕೆ ತರುವ ಸಲುವಾಗಿ... ಯೋಗಿಯಂತಹ ಕಾವಿಧಾರಿಯನ್ನು ಬಿಜೆಪಿ ಸಿಎಂ ಗಾದಿಯಲ್ಲಿ... ನಂತರವಂತೂ ಮಾದಾರ ಚೆನ್ನಯ್ಯರ ಪೊಲಿಟಿಕಲ್ ಕದಲಿಕೆ... ಬಿರುಸು ಪಡೆದುಕೊಂಡಿವೆ. ಈಗಿನಿಂದಲೇ ರಾಜಕೀಯ ರಂಗ... ಪ್ರಚಾರ ಗಿಟ್ಟಿಸಿಕೊಳ್ಳಬೇಕೆನ್ನುವ ಹಪಾಹಪಿಯಿಂದಲೇ ಸ್ವಾಮೀಜಿ... ಅಂತಃಕಲಹದ ಸಂಧಾನವನ್ನು ಹೈಜಾಕ್ ಮಾಡಲು ಯತ್ನಿಸಿ...



ಇಷ್ಟರ ಹೊರತಾಗಿ ಮನುಸಂತಾನಿ ಬಿಜೆಪಿಗಳ ರಗಳೆಯ... ಚೆನ್ನಯ್ಯ ಸ್ವಾಮೀಜಿಗೆ ಯಾವ ಪಾತ್ರವೂ ಇಲ್ಲ, ಪ್ರಾಧಾನ್ಯವೂ ಇ... ಸ್ವಾಮಿಯಂತಹ ವೈದಿಕ ಕಾವಿಧಾರಿಯನ್ನೇ ನಿರ್ಲಕ್ಷಿಸಿ ಮಾದಾ... ತನ್ನ ಆಂತರಿಕ ಉಸಾಬರಿಯನ್ನು ಬಿಜೆಪಿ ಒಪ್ಪಿಸುತ್ತೆ ಅನ್ನೋದ...

■ ಟಿ.ಎನ್.

ಬೆಂಗಳೂರು ಅಂತರ್‌ರಾಷ್ಟ್ರೀಯ ಸಿನಿಮೋತ್ಸವ Bengaluru


■ ಕೆಷ್ಣೆರಾಜ್ 14

ಹಿರಿಯರಿಗಾಗಿ ಮಕ್ಕಳ ಭಯಾನಕ ಸಾಹಸಗಾಥೆ



...ಕಿರುಚಿತ್ರಗಳು ಹಾಗು ಒಂದು ಸಾಕ್ಷ್ಯಚಿತ್ರ ಮಾಡಿರುವ ಯನಿವ್‌ನ ...ಥಾಚಿತ್ರವಿದು. ಇಸ್ರೇಲಿನ ಕಲಾವಿದರು ಎಂದಮೇಲೆ, ಅವರ ...ರಾಜಕೀಯ ನಿಲುವು ಏನು? ಎಂದು ಕೇಳುವುದು ಅಪ್ರಸ್ತುತವಲ್ಲ. ...ಭಾಗದಲ್ಲಿ ಜೈವಿಕವಾಗಿ ಒಂದಾಗಿದ್ದ ಪ್ಯಾಲಸ್ತೈನಿ ಅರಬ್ ಹಾಗು ...ಸಮುದಾಯಗಳು, 1918ರಿಂದ ಎರಡು ರಾಷ್ಟ್ರಗಳಾಗಿ ಒಡೆದು ...ಇಸ್ರೇಲ್ ಮಹತ್ವಾಕಾಂಕ್ಷಿ ರಾಷ್ಟ್ರೀಯ ಯೋಜನೆಗೆ ಪಶ್ಚಿಮದ ...ಷ್ಟ್ರಗಳ ಮಿಲಿಟರಿ-ರಾಜಕೀಯ ಬೆಂಬಲವಿದ್ದು, ತಮ್ಮ ನಾಡಲ್ಲೇ ...ಅರಬರ ಅಸ್ತಿತ್ವವೂ ಮೂರಾಬಟ್ಟೆಯಾಗಿ ಹೋಗಿದೆ. ಏಳು ದಶಕಗಳ ...ಕದನ ಬರಿ ರಾಜಕೀಯ ವಿದ್ಯಮಾನ ಮಾತ್ರವಾಗಿರದೆ, ...ಅರಬ್ ಮುಸಲ್ಮಾನ ಸಮುದಾಯಗಳ ನಡುವಣ ಬುದ್ಧಿಭಾವದ ... ಆಗಿಹೋಗಿದೆ. ಬಲಶಾಲಿ ಇಸ್ರೇಲಿನ ಸಾಮಾನ್ಯ ಪ್ರಜೆಯೊಬ್ಬನಿಗೆ ...ಮುಸಲ್ಮಾನರ ಬಗೆಗಿರುವ ಭಾವವು ಅವನ ಬದುಕಿನ ತತ್ವವೂ ... ಸಾಮಾಜಿಕ ಪರಿಸರ ಅಲ್ಲಿದೆ. ಅಂಥದ್ದರಲ್ಲಿ, ಇಸ್ರೇಲಿನ ಯಹೂದಿ ... ತನ್ನ ರಾಷ್ಟ್ರ ನಡೆಸುತ್ತಿರುವ ಆಕ್ರಮಣದ ರಾಜಕೀಯ ತಾತ್ವಿಕತೆಯನ್ನು ...ದೂ, ಅರಬ್ ಮುಸ್ಲಿಂ ಪ್ಯಾಲಸ್ತೈನಿಯರ ಬದುಕಿನ ಅಂತರಂಗಕ್ಕೆ

...ಅಫ್ ದಿ
...ಪಲ್ (2016)
ನಿರ್ದೇಶನ:
...ಬೆರ್ಮನ್
...ಸ್ರೇಲ್
...ಹಣ:
...ವ್



...ದೂ, ಒಂದು 'ದೇಶ ವಿರೋಧಿ' ಕೃತ್ಯವಾಗಿಯೇ ಇಸ್ರೇಲಿನ ...ಯರಿಗೆ ಕಾಣುತ್ತದೆ. ಅಂತಹ 'ದೇಶ ವಿರೋಧಿ' ತಾತ್ವಿಕತೆಗೆ ...ವನು ಯನಿವ್. ಅವನು ಹೀಗಾಗುವುದಕ್ಕೂ ವಿಲಕ್ಷಣ ಕಾರಣಗಳಿವೆ. ...ವ್, ಯೌವನಕಾಲದಲ್ಲಿ ಸ್ಥಿರ ಛಾಯಾಚಿತ್ರಗ್ರಹಣದ ಹುಚ್ಚು ...ಂಡು, ಅತ್ಯಂತ ಸೂಕ್ಷ್ಮ ತಂತ್ರಜ್ಞಾನದ ಕ್ಯಾಮೆರಾಗಳನ್ನು ಬಳಸಿ, ...ಪ್ರದೇಶಗಳ ಚಿತ್ರಗಳನ್ನು ಸೆರೆ ಹಿಡಿಯುವ ಗುಂಗಿಗೆ ಬಿದ್ದವನು- ...ಲ್ಲಿ ಒಂದು ಪಾಳು ಬಿದ್ದ ಕಟ್ಟಡಗಳ ಹೊರ ಒಳ ಆವರಣಗಳನ್ನು ...ರೆ ಹಿಡಿಯುವುದು. ಹೀಗಿರುವಾಗ, 2002ರಲ್ಲಿ ಅವನು ಅತ್ಯಂತ ...ದ ಅಲ್ಫಾ ಕಂಪೆನಿಯ ವಿಡಿಯೊ ಕ್ಯಾಮೆರಾ ಬಳಸಿ ಬೀರು ಬೀಸಿನ ... ಮಾಡಬೇಕೆಂದಿದ್ದಾಗ, ಇಸ್ರೇಲಿನ ಪ್ರಭುತ್ವವು ಅವನನ್ನು 'ಮೀಸಲು ...ಸೈನಿಕನನ್ನಾಗಿಸಿ, ಚೆಕ್ಪಾಯಿಂಟ್ ಕಾರ್ಯಾಚರಣೆಗೆ ಕಳಿಸಿತು. ಅಲ್ಲಿ ಅವನ ...ಡಿಯ ಕೆಲಸ, ಶಂಕಿತ ಅರಬ್ ಪ್ರಜೆಗಳ ಮನೆಗೆ ನುಗ್ಗಿ ವಿಚಾರಣೆ ...ದು, ಶಂಕಿತರನ್ನು ಬಂಧಿಸಿ ಸೇನಾ ಪೊಲೀಸರ ವಿಚಾರಣೆಗೆ ...ದು-ಇತ್ಯಾದಿ. ಇದೀಗ, ಯನಿವ್ ತನ್ನ ಕ್ಯಾಮೆರಾದ ಮೂಲಕ, ತನ್ನ ... ಕಾರ್ಯಾಚರಣೆಗಳನ್ನು ಹಿಡಿಯತೊಡಗಿದ. ಒಂದು ತಿಂಗಳ ಕಾಲ ... ಕಾರ್ಯಾಚರಣೆಯಲ್ಲಿದ್ದ. ಇದಾದ ಐದು ವರ್ಷಗಳ ಕಾಲ ತಾನೇ ...ಗಿದ್ದ ಕಾರ್ಯಾಚರಣೆಯ ಚಿತ್ರ ತುಣುಕುಗಳನ್ನು ಧ್ಯಾನಿಸಿದ; 2007ರಲ್ಲಿ ...ನ್ನು ಸಂಕಲಿಸಿ 'ಅಲ್ಫಾ ಡೈರೀಸ್' ಎಂಬ ಸಾಕ್ಷ್ಯಚಿತ್ರ ಮಾಡಿದ; ಅದು ...ವಿಶ್ವ ಪ್ರಖ್ಯಾತಿ ತನಗೆ ತಾನೇ ಹಿಡಿದುಕೊಂಡ ಕನ್ನಡಿಯಾಗಿತ್ತು, ...3ರಲ್ಲಿ ಯನಿವ್, ವಿಭಿನ್ನ ಪ್ಯಾಲಸ್ತೈನಿ ಸಿನಿಮಾ ನಿರ್ಮಾಪಕ ಜೋಲಿ ...ಮನು ನಿರ್ಮಿಸಿ, ರಾನಿ ರೆಮ್ನಿನ ನಿರ್ದೇಶಿಸಿದ ವಿಶಿಷ್ಟ ಸಿನಿಮಾ ...' 2013ರ ಬೆಂಗಳೂರು ಅಂತಾರಾಷ್ಟ್ರೀಯ ಸಿನಿಮಾ ಹಬ್ಬದಲ್ಲಿ ...ಜೊತೆಗೂಡಿ, 'ಸಮುದಾಯ ಹಣ ಸಂಗ್ರಹಣೆ' (ಕ್ರೌಡ್ ...) ಮೂಲಕ ಪ್ರಸ್ತುತ ಸಿನಿಮಾ ಮಾಡಿರುವನು.

ಸಿನಿಮಾದ ಕಥಾ ಸಾರಾಂಶ

...ರಿನ ಗಡಿಭಾಗದಲ್ಲಿರುವ ಒಂದು ಮಿಲಿಟರಿ ವಸತಿ ಸಮುಚ್ಚಯ. ...ಮನೆಗಳು, ಮನೆ ಸುತ್ತ ಮನುಷ್ಯ ನಿರ್ಮಿತಿಯ ಉದ್ಯಾನವನಗಳು ... ಈ ವಸತಿ ಸಮುಚ್ಚಯದಲ್ಲಿ ವಾಸಿಸುವವರು ಬಹುತೇಕ, ಬಸುರಿಯರಾದ ... ಅವರ ಯೌವನಕ್ಕೆ ಬರುತ್ತಿರುವ ಮಕ್ಕಳು ಮತ್ತು ಅತಿ ವಿರಳವಾದ ...ಕರೆಗೆ ಕಾದಿರುವ ಪುರುಷ ಸೈನಿಕರು. ಮನೆಗಳಲ್ಲಿ ಸದಾ ಟಿವಿಯಲ್ಲಿ ...ದೇಶಪ್ರೇಮ' ಕಲೆಗಳು, 'ವೈರಿಗಳ ಪಾತಕ' ಪ್ರಸಂಗಗಳ ನಿರೂಪಣೆ ...ದೇಶರಕ್ಷಣೆ'ಯ ಉದಾತ್ತ ಕಲೆಯ ಪ್ರಸಾರದ ವೀಕ್ಷಣೆ ನಿತ್ಯಕಾಯಕ.

ಈ ವಸತಿಪ್ರದೇಶದ ಮಕ್ಕಳ ನಿತ್ಯದ ಆಟ ಪಾಠ ವಯಸ್ಸಲ್ಲಿ ದೊಡ್ಡವರಾದವರು ಕಿರಿಯರ ಮೇಲೆ ನಡೆಸುವ ಬುಡಾವಣೆ ಹಾಗು ಆಜ್ಞಾಪಾಲನೆಗೆ ಬಗ್ಗಿಸುವ ದೈಹಿಕ ಹಲ್ಲೆ. ಮಕ್ಕಳ ಮನೆ ಪಾಠ: ವೈರಿ ಸದಾ ಮನೆ ಬಾಗಿಲಲ್ಲಿರುವ; ಅವನನ್ನು ಬಗ್ಗು ಬಡಿಯುವುದೇ ಬದುಕಿನ ಗುರಿ; ಹೀಗಾಗಿ ಮಕ್ಕಳ ನಡುವೆಯೇ ಒಬ್ಬರನ್ನೊಬ್ಬರು ಬಗ್ಗುಬಡಿದು ಉಳಿಯಲಿಕ್ಕೆ ನಿತ್ಯ ತಂತ್ರ ಕದನ. ಮಕ್ಕಳ ಗುಂಪುಗಳ ನಡುವಿನ ಜಗಳ ಬಡಿದಾಟವೇ ನಿತ್ಯದಾಟ.

ಈ ವಸತಿ ಪ್ರದೇಶದ ಮಗ್ಗುಲಲ್ಲಿ ಪಾಳುಬಿದ್ದ ಕೃಷಿ ಭೂಮಿಯಲ್ಲಿ ಬೆಳೆದ ಕುರುಚಲು ಕಾಡು. ಈ ಕಾಡ ಮಗ್ಗುಲಲ್ಲಿ ಪಾಳುಬಿದ್ದ ಒಂದು ಸೈನಿಕ ಕಾರ್ಯಾಚರಣೆಯ ಬಂಕರ್. ಸೈನಿಕ ವಸತಿಪ್ರದೇಶದ ನಾಲ್ಕು, ಹದಿಹರೆಯಕ್ಕೆ ಕಾಲಿಡುತ್ತಿರುವ ಮಕ್ಕಳ ಒಂದು ಗುಂಪಿಗೆ-ಕೆಮಿ, ಲೂಯಿ, ಟಾಲಿ ಎಂಬ ಹುಡುಗರು ಹಾಗು ಟಾಲಿ ಎಂಬ ಹುಡುಗಿ- ಈ ಬಂಕರ್ ತಮ್ಮ ಸಮರತಂತ್ರಗಾರಿಕೆಗೆ ತರಬೇತುದಾಣ. ಈ ಗುಂಪು ಕುರುಚಲುಕಾಡಲ್ಲಿ ಓಡಾಡುವ ಪ್ರಾಣಿಗಳನ್ನು ಹಿಡಿಯಲು, ಕಾಲು ಸಿಕ್ಕಿಹಾಕಿಸುವ ಇಕ್ಕಳ (ಬೂಬಿ ಟ್ರ್ಯಾಪ್) ನೆಡುತ್ತಾರೆ, ತಾನೇ ತಯಾರಿಸಿದ ಬಿಲ್ಲು ಬಾಣಗಳಿಂದ ಬೇಟೆಯಾಡುತ್ತಾರೆ. ಆರೆ ಬದುಕುಳಿದ ಪ್ರಾಣಿಗಳನ್ನು ಯಾವ ಕರುಣೆಯೂ ಇಲ್ಲದೆ ಕಲ್ಲಿಂದ ಹೊಡೆದು ಕೊಲ್ಲುತ್ತಾರೆ. ಹೀಗೆ ಬಲಿಯಾದ ಪ್ರಾಣಿಗಳನ್ನು, ಪಾಳುಬಿದ್ದ ಬಂಕರ್‌ನಲ್ಲಿರುವ ಒಂದು ಬಾವಿಗೆ ಒಯ್ದು ಬಲಿಯರ್ಪಣೆ ಕಾರ್ಯಾಚರಣೆ ಮಾಡುತ್ತಾರೆ; ಅವರ ಪ್ರಕಾರ ಆ ಬಾವಿಯ ಆಳದಲ್ಲಿ ಸದಾ ಪ್ರಾಣಿ ರಕ್ತಕ್ಕಾಗಿ ಹಸಿದಿರುವ ದೈವವೊಂದಿದೆ. ಅವಳಿಗೆ ಬಲಿಯರ್ಪಿಸಿ ಸಂತೃಪ್ತಗೊಳಿಸುವ ಕಾಯಕಕ್ಕೆ ತಾವು ಯೋಧರಾಗಿ ಕಾರ್ಯಾಚರಿಸುತ್ತಿದ್ದೇವೆ.

ಇಂತಿರಲು, ಆ ಪಾಳು ಬಂಕರನ್ನು ಮಿಲಿಟರಿಯಿಂದ ಹೊರದಬ್ಬಲ್ಪಟ್ಟ ಇಬ್ಬರು ಸೈನಿಕರು ತಮ್ಮ ತಾತ್ಕಾಲಿಕ ವಾಸಸ್ಥಾನ ಮಾಡಿಕೊಳ್ಳುತ್ತಾರೆ. ಇದು ಮಕ್ಕಳ ಗುಂಪಿಗೆ, ತಮ್ಮ ಪವಿತ್ರ ಸ್ಥಳದ ಅತಿಕ್ರಮಣವಾಗಿ ಕಾಣುತ್ತದೆ; ಆ ಪರಿತ್ಯಜಿತ ಸೈನಿಕರನ್ನು ನಿಗ್ರಹಿಸುವ ಯುದ್ಧ ಯೋಜನೆಯಲ್ಲಿ ತೊಡಗುತ್ತಾರೆ. ಯುದ್ಧ ಶುರುವಾದ ಮೇಲೆ ಆಕ್ರಮಣ-ಪ್ರತ್ಯಾಕ್ರಮಣ, ಅವಮಾನ-ಸೇಡು ತಿರುಗೇಟಿನ ಘಟನಾವಳಿಗಳು ನಡೆಯತೊಡಗುತ್ತವೆ.

ಮಕ್ಕಳ ತುಕಡಿ, ಆ ಇಬ್ಬರು ಸೈನಿಕರನ್ನು ಪ್ರಾಣಿಗಳಂತೆ ಬಲಿಕೊಡುವುದೇ ಪವಿತ್ರವೆಂಬ ಸಮರೋತ್ಸಾಹದಲ್ಲಿ, ಮನುಷ್ಯ ಕರುಣೆಯ ಭಾವ ಲವಲೇಶವೂ ಇರದ ಕಾರ್ಯಾಚರಣೆಯಲ್ಲಿ ತೊಡಗಿ, ಇಬ್ಬರನ್ನೂ ಬಲಿಗೊಟ್ಟು, ಯಾವ ಭಯ-ಪಶ್ಚಾತ್ತಾಪಗಳಿಲ್ಲದೆ ವಾಪಾಸು ತಮ್ಮ ವಸತಿಪ್ರದೇಶ ಪ್ರವೇಶಿಸುತ್ತವೆ.

ಈ ಸಿನಿಮಾ ಯಾಕೆ ಮುಖ್ಯ

ಕೆಲವು ಸಿನಿಮಾ ಪ್ರಯೋಗಾರ್ಥಿಗಳು, ಒಂದು ಅಸ್ಪಷ್ಟವಾದ ತಾತ್ವಿಕ ಎಳೆಯನ್ನು ಹಿಡಿದುಕೊಂಡು, ತಮ್ಮ ದೃಶ್ಯಕಲೆಯ ಸೃಜನತೆಯ ಮೂಲಕ ಆದಕ್ಕೊಂದು ತಾತ್ವಿಕ ದರ್ಶನದ ರೂಪಕೊಡಲು ಪ್ರಯತ್ನಿಸುತ್ತಾರೆ. ಕಲೆಯ ಮೂಲಕ ಒಂದು ತಾತ್ವಿಕ ದರ್ಶನದ ಬೀಜವನ್ನು ಪಡೆಯುವ ಹಾದಿಯನ್ನು ನಾವು 'ಬೈ ದಿ ಟೈಂ ಇಟ್ ಗೆಟ್ಸ್ ಡಾರ್ಕ್', 'ಲಿಲ್ಲಿ ಲೇನ್', 'ಹರಿಕಥಾ ಪ್ರಸಂಗ'', 'ಒತ್ತಾಯಿಲ್ ಪಥ್' ದಂಥ ಸಿನಿಮಾಗಳಲ್ಲಿ ನೋಡಬಹುದು ಮತ್ತೂ ಕೆಲವು ಪ್ರಯೋಗಾರ್ಥಿಗಳು, ದೇಶ-ಕಾಲಗಳ ಸನ್ನಿವೇಶದಲ್ಲಿ ಘಟಿಸುತ್ತಿರುವ ಚದುರಿದ ರಾಜಕೀಯ-ಸಾಮಾಜಿಕ ವಿದ್ಯಮಾನಗಳ ಸಾರವನ್ನು ಬೀಜರೂಪದಲ್ಲಿ ಕಟ್ಟಿಕೊಂಡು, ಅದನ್ನು ಕಲೆಯ ಹೊಲದಲ್ಲಿ ಬಿತ್ತಿ ಬೆಳೆಯುವ ಫಸಲಿನ ಮೂಲಕ ಒಂದು ಕಾಲದ ತಾತ್ವಿಕ ಸಂಘರ್ಷಗಳನ್ನು ಒಟ್ಟಂದದಲ್ಲಿ ಕಾಣಿಸಲು ಪ್ರಯತ್ನಿಸುವವರು- 'ಐ ಡೇನಿಯಲ್ ಬ್ಲೇಕ್', 'ಮಾರೋಸೆ', 'ಡೆತ್ ಇನ್ ಸರಯೇವೊ', 'ರೋಡ್ ಟು ಮಂಡಾಲಾಯ್'ನಂಥ ಸಿನಿಮಾಗಳಲ್ಲಿ ಕಾಣಬಹುದು. ಮೊದಲ ಬಗೆಯ ಸಿನಿಮಾಗಳು ಬೀಜರೂಪಿ ಚಿತ್ರಕಥೆ ಹಾಗು ಸೃಜಶೀಲ ಕ್ಯಾಮೆರಾ ಕಲಾವಂತಿಕ, ಸಂಕಲದಲ್ಲಿ ಅರಳುತ್ತವೆ. ಎರಡನೇ ಬಗೆಯವು ವಸ್ತುವಿಗೆ ಹೊಂದುವ, ಬೀಜದಿಂದ ಸಮೃದ್ಧ ಫಸಲು ಪಡೆಯುವ ಬಿಗಿ ಚಿತ್ರಕಥೆ ಹಾಗು ಅದಕ್ಕೆ ಅನುವಾಗುವ ಕ್ಯಾಮೆರ ಕಲಾವಂತಿಕೆಯನ್ನು ನೆಚ್ಚಿಕೊಂಡಿರುತ್ತವೆ. ಎರಡೂ ಪರಸ್ಪರ ವಿರುದ್ಧ ಕಲಾಮಾರ್ಗಗಳಾಗಿ ಕಂಡರೂ, ಸಂಯಮದಿಂದ ಕಂಡರೆ, ಎರಡೂ ಪರಸ್ಪರ ಆಂತರಿಕ ಸಂಬಂಧ ಹೊಂದಿರುವುದು ಕಾಣುತ್ತದೆ. ವಾಸ್ತವದ ಅರಿವನ್ನು ಬೀಜರೂಪದಲ್ಲಿ ಕಟ್ಟುವ ಮೊದಲ ಬಗೆಯ ಸಿನಿಮಾ ಪರಂಪರೆಯಿಂದಲೇ ಬೀಜವನ್ನು ಪಡೆದು ಎರಡನೇ ಬಗೆಯ ಸಿನಿಮಾಗಳು ಫಸಲು ಕೊಡುತ್ತವೆ. ಎರಡನೆಯ ಮಾರ್ಗದ ಬೀಜವೇ ಬೊಟ್ಟಿಯಾದಾಗ, ಮೊದಲ ಮಾರ್ಗದ ಅನ್ವೇಷಣೆ ಶುರುವಾಗುತ್ತದೆ. 'ಐ ಡೇನಿಯಲ್ ಬ್ಲೇಕ್'ನ ಕೆನ್ ಲೋಚ್ ಹಾಗು 'ಡೆತ್ ಇನ್ ಸರಯೇವೊ'ದ ದಾನಿಶ್ ತನೋವಿಕರ ಚಿತ್ರಾವಳಿಗಳನ್ನು ನೋಡಿದರೆ, ಈ ಮಾತುಗಳು ವಿಧಿತವಾಗುತ್ತವೆ. ಯನಿವ್ ಬೆರ್ಮನ್ ಎರಡನೇ ಪಥದವನು.

ಥಿಯೋಡೋರ್ ಹರ್ಝಲ್, 1880ರ ದಶಕದಲ್ಲಿ, ಪ್ಯಾಲಸ್ತೈನ್ ದೇಶವಿರುವ ಭೂಪ್ರದೇಶವು ಯಹೂದಿಗಳ ದೇವದತ್ತ ಪವಿತ್ರ ಸ್ಥಳವಾಗಿದ್ದು ಜಗತ್ತಿನ ಎಲ್ಲ ಯಹೂದಿಗಳಿಗೆ ವಾಸಸ್ಥಾನವಾಗಿ ಆ ಪ್ರದೇಶದಲ್ಲಿ ಇಸ್ರೇಲ್ ರಾಷ್ಟ್ರ ನಿರ್ಮಾಣವಾಗಬೇಕು ಎಂಬ ಸಿದ್ಧಾಂತದ ಮೂಲಕ 'ಜಿಯೋನಿಸ್ಟ್' ಚಳವಳಿ-ಸಂಘಟನೆ ಕಟ್ಟಿದವನು; ಮುಂದೆ ಇದೇ 'ಜಿಯೋನಿಸ್ಟ್' ವೈಚಾರಿಕತೆಯು 1918ರಿಂದ ಇಂದಿನವರೆಗಿನ ಹಿಂಸಾತ್ಮಕ ಇಸ್ರೇಲ್-ಪ್ಯಾಲಸ್ತೈನ್ ವಿದ್ಯಮಾನಗಳಿಗೆ ಅಡಿಗಲ್ಲಾಗಿದೆ. ಪ್ರಸ್ತುತ ಸಿನಿಮಾವು "ಮನುಷ್ಯರು ರಾಷ್ಟ್ರ ಧ್ವಜದ ಮಾನ ಸಮ್ಮಾನವನ್ನುಳಿಸಲು ಬದುಕುತ್ತಾರೆ, ಪ್ರಾಣಾರ್ಪಣೆ ಮಾಡುತ್ತಾರೆ. ಜನಸಮೂಹ ಬದುಕಲು ಸಾಯಲು ಇರುವ ಕಾರಣ ಇದೊಂದೇ-ಇದನ್ನು ಜನರ ಅರಿವಿಗೆ ತರುವ ಶಿಕ್ಷಣ ವ್ಯವಸ್ಥೆ ಬೇಕಷ್ಟೇ" ಎಂಬ ಹರ್ಝಲನ ಉದ್ಧರಣೆಯ ಮೂಲಕ ಶುರುವಾಗಿ ತನ್ನ ಕಥನ ದಿಶೆಯನ್ನು ಸ್ಪಷ್ಟವಾಗಿ ಬಿಚ್ಚಿಡುತ್ತದೆ. ಇದು ಯನಿವ್ ಗ್ರಹಿಸಿರುವ ಇಸ್ರೇಲ್ ಯಹೂದಿ ಸಮಾಜದ ಬದುಕಿನ ಚಿಂತನೆಯ ಸಾರವಾದ ಬೀಜ. ಇದರ ಅರ್ಥ ಹಾಗು ಪರಿಣಾಮಗಳನ್ನು ಅವನು ತನಗೇತಾನೇ 'ಅಲ್ಫಾ ಡೈರೀಸ್' ಮೂಲಕ ಕಲಿತಿದ್ದಾನೆ. ಹೀಗಾಗಿ, ಈ ಬೀಜದಿಂದ ಬೆಳೆಯುವ ಸಮಾಜದ ಫಸಲು ಎಂಥದ್ದು ಎಂದು ತನ್ನ ದೃಶ್ಯಕಲೆಯ ಮೂಲಕ ತೋರಿಸುವ ಯತ್ನದಲ್ಲಿ ಆತ ತೊಡಗಿದ್ದಾನೆ.

ಪ್ಯಾಲಸ್ತೈನಿ ಅರಬರು ಹಾಗು ಮೂಲ ಪ್ಯಾಲಸ್ತೈನ್ ಸಾಮುದಾಯಿಕ ಮನೋಭಾವದಿಂದ ಜೀವಿಸುವ ಯಹೂದಿಗಳೂ, ಇಸ್ರೇಲಿ ಯಹೂದಿಗಳಿಗೆ 'ಅನ್ಯರು', 'ಅನ್ಯ'ರಾಗಿರುವ ಕಾರಣಕ್ಕೇ ಸದಾ ಆಕ್ರಮಣ ಸನ್ನದ್ಧರಾಗಿರುವ 'ವೈರಿ'ಗಳು, 'ವೈರಿ'ಗಳ ನಿಗ್ರಹವೇ ನಮ್ಮ 'ಸ್ವಸಂರಕ್ಷಣೆ'ಯ ಮೂಲಮಂತ್ರ- ಎಂಬ ವೈಚಾರಿಕತೆಯು, ಪ್ರಭುತ್ವ ಹಾಗು ನಾಗರಿಕ ಸಮಾಜದ ಬುದ್ಧಿಭಾವವಾದರೆ, ಅದರ ಪರಿಣಾಮವೇನು? 'ಅನ್ಯ' ವೈರಿಯ ನಿರೂಪಣೆ ಹಾಗು ನಿಷ್ಕರುಣ ನಿಗ್ರಹ ಮನೋಭಾವ ನಿತ್ಯದ ಭಾವವಾದಲ್ಲಿ, ಆ ಕಿಚ್ಚು ಇಸ್ರೇಲಿನ ಯಹೂದಿ ಸಮುದಾಯದೊಳಗೇ 'ವೈರಿ'ಗಳನ್ನು ಹುಡುಕುವ ಹಾಗು 'ನಿಗ್ರಹಿಸುವ' ಕಿಚ್ಚಾಗಿ ಹಬ್ಬಲಾರದೇ? ಎಂಬ ಬಹುದೊಡ್ಡ ರಾಜಕೀಯ-ಸಾಮಾಜಿಕ ಸವಾಲನ್ನು ಯನಿವ್ ಈ ಸಿನಿಮಾದ ಮೂಲಕ ಎತ್ತುತ್ತಾನೆ. 'ಬಹಿರಂಗ'ದಲ್ಲಿ ಆಕ್ರಮಣಶೀಲವಾದ ಸಮುದಾಯವು, 'ಅಂತರಂಗ'ದಲ್ಲಿ ಕರುಣಾಭಾವದಲ್ಲಿ ಇರಲು ಸಾಧ್ಯವೇ? 'ಬಹಿರಂಗದ ಶತ್ರುವಿನ ಹುಡುಕಾಟ' ಒಂದು ಬದುಕಿನ ತತ್ವವಾಗಿ 'ಅಂತರಂಗದ ಶತ್ರುವಿನ ಹುಡುಕಾಟ'ವೂ ಆದರೆ ಅಂಥ ಸಮಾಜವು ಎಂಥ ಸಮಾಜವಾಗಿರುತ್ತದೆ? ಎಂಬ ಭೀಭತ್ಸತೆಯನ್ನು ಪ್ರಕಟಿಸುವುದು ಪ್ರಸ್ತುತ ಸಿನಿಮಾದ ಉದ್ದೇಶವಾಗಿದೆ.

ಎರಡು ವರ್ಷಗಳ ಕಾಲ ಚಿತ್ರಕಥೆಯ ಸ್ವರೂಪ ಹೆಣೆಯಲೂ, ಒಂದು ವರ್ಷ ಈ ಚಿತ್ರಕಥೆಯನ್ನು ಸಾಕಾರಗೊಳಿಸುವ ಬಾಲನಟರ ಪಡೆಯನ್ನು ಹೊಂದಿಸಲೂ ಹಾಗೂ ಎರಡು ವರ್ಷಗಳ ಕಾಲ ಪ್ರಭುತ್ವ ವಿರೋಧಿಯಾದ ಸಿನಿಮಾ ನಿರ್ಮಾಣಕ್ಕೆ ಹಣ ಹೊಂದಿಸಲು ಚಿತ್ರತಂಡ ದುಡಿದಿದೆ-ಇದು ಕೂಡ ಕಲೆಯ ಭಾಗವೇ!

ಇಡಿ ಚಿತ್ರವನ್ನು ಹೆಗಲ ಮೇಲೆ ಹೊತ್ತು, ಪಾತ್ರಗಳನ್ನು ಅನುಸರಿಸುವ ಕ್ಯಾಮೆರಾ ಚಲನೆಯ ಮೂಲಕ ಚಿತ್ರೀಕರಿಸಲಾಗಿದ್ದರೂ-ವೀಕ್ಷಣೆಯಲ್ಲಿ ಒಂದಿನಿತೂ ಲೋಪವಿರದ ಹಾಗೆ ರಜತಪರದ ಮೇಲೆ ಬಿಚ್ಚುವ ಪರಿಣಾಮ ಬದ್ಧ ದೃಶ್ಯಾವಳಿಗಳಂತೂ-ಸಿನಿಮಾ ಕಲೆಯ ಭಾವವೇ!

ಚಿತ್ರೋತ್ಸವದಲ್ಲಿ ತನ್ನ ಸಿನಿಮಾ ಪ್ರದರ್ಶನದ ನಂತರದಲ್ಲಿ, ಪ್ರೇಕ್ಷಕರ ಜೊತೆ ಸಂವಾದದಲ್ಲಿ ಭಾಗವಹಿಸಿದ ಯನಿವ್ ಮಾರ್ಮಿಕವಾಗಿ ಹೇಳಿದ ಮಾತು: "ನಿಮ್ಮ ದೇಶದ ಪ್ರಸ್ತುತ ರಾಜಕೀಯ-ಸಾಮಾಜಿಕ ಸನ್ನಿವೇಶದಲ್ಲಿ ಈ ಸಿನಿಮಾ ನಿಮಗೂ ಹೆಚ್ಚು ಪ್ರಸ್ತುತವಾದೀತು ಎಂದು ಭಾವಿಸುವೆ"- ಚರ್ಚಾರ್ಹವಾದರೂ, ಇದೂ ಕಲೆಯ ಭಾಗವೇ ಅಲ್ಲವೇ! ■

...2017: "ಮಮತಾ ಬ್ಯಾನರ್ಜಿ ಅಲ್ಪಸಂಖ್ಯಾತರಿಗಾಗಿ ಪ್ರತ್ಯೇಕ ...ಲಯ ಸ್ಥಾಪಿಸಲಿದ್ದಾರೆ" ಎಂಬ ಲೇಖನ ಪ್ರಕಟವಾಗಿದೆ. ಆದರೆ ...014ರ ಸುದ್ದಿ, ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ...ರುವುದು ಸುಪ್ರೀಂ ಕೋರ್ಟಿನ ತೀರ್ಪೊಂದಕ್ಕೆ ಅನುಗುಣವಾಗಿ ... ಹಾಗಾಗಿ ಅಲ್ಲ.

...2017: "ಒಳ್ಳೆ ಸುದ್ದಿ! ಈ ಕ್ಷೇತ್ರದಲ್ಲಿ ಮೀಸಲಾತಿ ಕೊನೆಗೊಳಿಸಲು ... ಯೋಗಿ ಆದಿತ್ಯನಾಥ್" ಎಂಬ ಲೇಖನದಲ್ಲಿ ಯೋಗಿ ಖಾಸಗಿ ...ಯ ಕಾಲೇಜುಗಳಲ್ಲಿ ಮೀಸಲಾತಿ ವ್ಯವಸ್ಥೆಯನ್ನು ನಿಲ್ಲಿಸಲು ...ದ್ದಾರೆಂದು ಬರೆಯಲಾಯಿತು. ಆದರೆ ವಾಸ್ತವದಲ್ಲಿ ಖಾಸಗಿ ವೈದ್ಯಕೀಯ ...ಗಳಲ್ಲಿ ಮೀಸಲಾತಿ ಪದ್ಧತಿಯೇ ಇರಲಿಲ್ಲ!


...2017: "ಬಿಬಿಸಿ ನ್ಯೂಸ್ ಪಾಯಿಂಟ್‌ನಲ್ಲಿ 2017ರಲ್ಲಿ ವಿಶ್ವದ 10 ಅತ್ಯಂತ ಭ್ರಷ್ಟ ರಾಜಕೀಯ ಪಕ್ಷಗಳನ್ನು ಹೆಸರಿಸಲಾಗಿದೆ" ಎಂಬ ತಲೆಬರಹದ ಲೇಖನದಲ್ಲಿ ಕಾಂಗ್ರೆಸ್ 4ನೆ ಅತ್ಯಂತ ಭ್ರಷ್ಟ ಪಕ್ಷವೆಂದು ತಿಳಿದುಬಂದಿದೆ ಎನ್ನಲಾಯಿತು. ಆದರೆ ತಕ್ಷಣ ಇದಕ್ಕೆ ಪ್ರತಿಕ್ರಿಯಿಸಿದ ಬಿಬಿಸಿ ಇದು ಸಂಪೂರ್ಣ ಸುಳ್ಳು. ತಾನು ಅಂತಹದೊಂದು ಸಮೀಕ್ಷೆಯನ್ನೆ ಮಾಡಿಲ್ಲ ಎಂದಿದೆ. ಡಿಎನ್‌ಎ ಪತ್ರಿಕೆಯ ಪ್ರಕಾರ ಬಿಬಿಸಿ ನ್ಯೂಸ್ ಪಾಯಿಂಟ್ ಒಂದು ನಕಲಿ ಜಾಲತಾಣವಾಗಿದೆ.

3.1.2017: "ಪ್ರಧಾನಿ ಮೋದಿಗೆ ಭಾರಿ ರಾಜತಾಂತ್ರಿಕ ವಿಜಯ: ಯುಎಇನಲ್ಲಿ ದಾವೂದ್ ಇಬ್ರಾಹಿಂಗೆ ಸೇರಿದ 15000 ಕೋಟಿ ಮೌಲ್ಯದ ಆಸ್ತಿಪಾಸ್ತಿ ಮುಟ್ಟುಗೋಲು" ಎಂಬ ಲೇಖನ ಕೂಡಾ ಶುದ್ಧ ಸುಳ್ಳುಗಳ ಕಂತೆಯೆಂದು ಸಾಬೀತಾಗಿದೆ.

19.8.2016: "ಹಿಜ್ಬುಲ್ ಉಗ್ರ ಬುರ್ಹಾನ್ ವಾನಿಯ ಸ್ಕೂಟರ್‌ನಲ್ಲಿ ಬರ್ಖಾ ದತ್ ಪಯಣಿಸಿದಳೇ?" ಎಂಬ ಲೇಖನದ ಜತೆ ಚಿತ್ರಗಳನ್ನೂ ಪ್ರಕಟಿಸಲಾಯಿತು. ಆದರೆ ಇವೆಲ್ಲ ತಿರುಚಲಾದ ಫೋಟೊಗಳು ಎಂದು ಪತ್ತೆಯಾಗಿದೆ.

ಅಮೆರಿಕದಲ್ಲಿ ಟಿವಿ ವೀಕ್ಷಕರು ಸಂಪ್ರದಾಯವಾದಿ ಟಿವಿ ಮಾಧ್ಯಮಗಳಿಂದ ಉದಾರವಾದಿ ಮಾಧ್ಯಮಗಳತ್ತ ಹೊರಳಲಾರಂಭಿಸಿದ್ದಾರೆ ಎಂದು ವರದಿಯಾಗಿದೆ. ಸಂಪ್ರದಾಯ ವಾದಿ ದೃಶ್ಯ ಮಾಧ್ಯಮಗಳು ಅಧ್ಯಕ್ಷ ಟ್ರಂಪ್‌ನ ಭಾನಗಡಿಗಳನ್ನು ವರದಿ ಮಾಡುವ ಬದಲು ಕೇವಲ ತಮ್ಮ ಎಂದಿನ ಜನಾಂಗೀಯವಾದ, ಅನ್ಯದ್ವೇಷ, ಸ್ತ್ರೀದ್ವೇಷದಂತಹ ವಿಷಯಗಳ ಸುತ್ತಲಿನ ಚರ್ಚೆಗಳಲ್ಲೇ ತೊಡಗಿರುವುದರಿಂದ ಇತ್ತೀಚಿನ ಸುದ್ದಿಗಳಿಗಾಗಿ ಹಾತೊರೆಯುತ್ತಿರುವ ಅಮೆರಿಕನ್ನರು ಉದಾರವಾದಿ ಚಾನಲ್‌ಗಳನ್ನು ವೀಕ್ಷಿಸತೊಡಗಿದ್ದಾರಂತೆ. ಭಾರತದಲ್ಲಿ ನಮಗೆ ನಮ್ಮ ಈ ಭಟ್ಟಂಗಿ ಮಾಧ್ಯಮಗಳು ಮತ್ತು ಬೂಸಿತಾಣಗಳಿಂದ ಬಿಡುಗಡೆ ಭಾಗ್ಯ ಲಭಿಸುವ ಆ ಸುದಿನ ಎಂದು ಬರಲಿದೆಯೊ ಗೊತ್ತಿಲ್ಲ.

(ಆಧಾರ: ಆಲ್ಟ್‌ನ್ಯೂಸ್.ಇನ್‌ನಲ್ಲಿ ಟಿ.ನವೀನ್ ಮತ್ತು ಪ್ರತೀಕ್ ಸಿನ್ಹಾ ಮತ್ತು ಟೈಮ್ಸ್ ಆಫ್ ಇಂಡಿಯಾ.ಕಾಮ್‌ನಲ್ಲಿ ಆಕಾರ್ ಪಟೇಲ್ ಲೇಖನಗಳು)




ಎಂತಹ ಚಲೋ ಉದ್ಯೋಗಗಳನ್ನು ಮೋದಿ ಸೃಷ್ಟಿಸಿದ್ದಾರೆ ನೋ

ತಮ್ಮ ಸರಕಾರವು ಎಲ್ಲಾ 125 ಕೋಟಿ ಭಾರತೀಯರಿಗೆ ನೌಕರಿ ಕೊಡಲು ಸಾಧ್ಯವಿಲ್ಲ, ಹಾಗಾಗಿ ಜನರು ಸ್ವ-ಉದ್ಯೋಗ ಕೈಗೊಳ್ಳಬೇಕು ಎಂದು ಮೊನ್ನೆ ಮೋದಿ ಸರಕಾರ ಮೂರು ವರ್ಷ ಪೂರೈಸಿದ ಸಂದರ್ಭದಲ್ಲಿ ಬಾಯಿತಪ್ಪಿ ಅಮಿತ್ ಷಾ ಹೇಳಿದನು. ಮೋದಿ ಆಡಳಿತದಲ್ಲಿ ಸ್ವ-ಉದ್ಯೋಗಕ್ಕೆ ವಿಪುಲ ಅವಕಾಶ ಇದೆ ಎಂದು ಅಮಿತ್ ಷಾ ಹೇಳಿದ್ದಾನೆ. ಅವನು ಹೇಳದಿದ್ದರೂ ನಮಗೆ ಮೋದಿ ಸರಕಾರ ಒದಗಿಸಬಹುದಾದ ಸ್ವ-ಉದ್ಯೋಗಗಳ ವಿವರ ಸಿಕ್ಕಿದೆ. ಅದು ಈ ಕೆಳಗಿನಂತೆ ಇದೆ:

ಮೊದಲನೆಯದಾಗಿ ಗೋರಕ್ಷಕರಾಗಿ ಕೆಲಸ ಮಾಡಲು ಸುಮಾರು ಹತ್ತು ಕೋಟಿ ವ್ಯಾಕೆನ್ಸಿ ಇದೆ. ಇದು ಕೇವಲ ಹಿಂದುಳಿದ ವರ್ಗದ ಅರೆ-ಸಾಕ್ಷರ ಓಬಿಸಿಗಳಿಗೆ ಮೀಸಲು. ಕೋಮು ಗಲಭೆ ಹಬ್ಬಿಸುವ ಕೆಲಸದ ಒಂದು ಕೋಟಿ ಹುದ್ದೆ ಖಾಲಿ ಇದೆ. ಸಿಂಧಗಿಯಂತೆ ಇತರೆಡೆ ರಾತ್ರೋರಾತ್ರಿ ಪಾಕಿಸ್ತಾನದ ಧ್ವಜ ಗುಟ್ಟಾಗಿ ಹಾರಿಸಿ ಅದನ್ನು ಮುಸ್ಲಿಮರ ತಲೆಗೆ ಕಟ್ಟುವ ಕೆಲಸಕ್ಕಾಗಿ ಲಕ್ಷಾಂತರ ವ್ಯಾಕೆನ್ಸಿಯಿದೆ. ಅನೈತಿಕ ಪೊಲೀಸ್‌ಗಿರಿ ಮಾಡಿ ದಾರಿಯಲ್ಲಿ ಹೋಗುವ ಹುಡುಗ-ಹುಡುಗಿಯರಿಗೆ ಬಡಿಯುವ ನೌಕರಿ ಸಹಾ ತುಂಬಾ ದೊಡ್ಡ ಸಂಖ್ಯೆಯಲ್ಲಿ ಲಭ್ಯವಿದೆ. ಮಧ್ಯಪ್ರದೇಶದ ವ್ಯಾಪಂ ಪ್ರಕರಣದಲ್ಲಿ ಸುಪಾರಿ ಕೊಲೆ ಮಾಡುವ ಕೆಲಸದ ಹತ್ತು ಲಕ್ಷ ವ್ಯಾಕೆನ್ಸಿ ಇದೆ.

ಗಣಿ ಮಾಫಿಯಾ ಮರಳು ಮಾಫಿಯಾ ಟಿಂಬರ್ ಮಾಫಿಯಾ, ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸಿ ಅರಣ್ಯವನ್ನು ಮಾರ್ವಾಡಿ ಜೈನ ಉದ್ಯಮಿಗಳಿಗೆ ಜುಜುಬಿ ಬೆಲೆಗೆ ಮಾರುವುದು, ನಕ್ಸಲೈಟ್ ದಮನ ನೆಪದಲ್ಲಿ ಅಮಾಯಕ ಆದಿವಾಸಿಗಳನ್ನು ಮತ್ತು ಅವರ ಚಿಕ್ಕ ಮಕ್ಕಳನ್ನು ಕೊಲ್ಲುವುದು, ಈ ಎಲ್ಲಾ ವಿಭಾಗದಲ್ಲಿ ಐದು ಕೋಟಿ ನೌಕರಿಯ ವ್ಯಾಕೆನ್ಸಿ ಇದೆ. ರೆಡ್ಡಿಗಳಂತೆ ಗಣಿಗಳ್ಳರಾಗಲು ಅಪರಿಮಿತ ಅವಕಾಶ ಇದೆ. ಗುಜರಾತಿನಂತೆ ಇತರ ರಾಜ್ಯದಲ್ಲೂ ನಕಲಿ ಎನ್ಕೌಂಟರ್ ಮಾಡುವ ಪೊಲೀಸರಾಗಲು ಹತ್ತು ಲಕ್ಷ ವ್ಯಾಕೆನ್ಸಿ ಇದೆ. (ಇದರ ಕೋಚ್ ಅಮಿತ್ ಷಾ). ಗೋಮಾಂಸ ರಫ್ತು ಕ್ಷೇತ್ರದಲ್ಲೂ ಭಾರಿ ಅವಕಾಶವಿದೆ, ಆದರೆ ಈ ಕ್ಷೇತ್ರದ ಕೆಲಸ ಜೈನರಿಗೆ ಮತ್ತು ಬ್ರಾಹ್ಮಣರಿಗೆ ಮಾತ್ರ ಮೀಸಲು. ದೊಡ್ಡ ಸಂಖ್ಯೆಯಲ್ಲಿ ಚುನಾವಣಾ ಮತಯಂತ್ರ (ಇವಿಎಮ್) ತಿರುಚುವ ಕೆಲಸ ಲಭ್ಯವಿದೆ, ಆದರೆ ಇದು ಕೇವಲ ಮೇಲ್ಜಾತಿ ಸಾಫ್ಟ್‌ವೇರ್ ಇಂಜಿನಿಯರುಗಳಿಗೆ ಮಾತ್ರ ಮೀಸಲು. ಭಾರತದ ಇತಿಹಾಸ ಮತ್ತು ಪುರಾಣಗಳನ್ನು ಸಂಘಿಗಳ ಮೂಗಿನ ನೇರಕ್ಕೆ ತಿರುಚುವ "ಸಂಶೋಧಕ" ಎಂಬ ಹಣೆಪಟ್ಟಿಯ ಸಾವಿರಾರು ಹುದ್ದೆಗಳು ಹೊಸದಾಗಿ ಸೃಷ್ಟಿಯಾಗಿವೆ.

ಸೆಕ್ಸ್ ರ್‍ಯಾಕೆಟ್, ಮಕ್ಕಳ ಕಳ್ಳ ಸಾಗಾಣಿಕೆ ಜಾಲ, ಪಂಜಾಬಿನಂತೆ ಡ್ರಗ್ ಗಾಂಜಾ ಜಾಲ ನಡೆಸುವುದು- ಇತ್ಯಾದಿ ಕ್ಷೇತ್ರದಲ್ಲಿ ಎರಡು ಕೋಟಿ ವ್ಯಾಕೆನ್ಸಿ ಇದೆ. ಸಿಕ್ಕಸಿಕ್ಕವರಿಗೆಲ್ಲಾ ನೀವು ದೇಶದ್ರೋಹಿ 'ಪಾಕಿಸ್ತಾನಕ್ಕೆ ಹೋಗಿ' ಅನ್ನುವ ನೌಕರಿಗಾಗಿ ಲಕ್ಷಾಂತರ ವ್ಯಾಕೆನ್ಸಿ ಇದೆ. ಕಲ್ಲಡ್ಕ ಭಟ್ಟ, ತೊಗಾಡಿಯಾ, ಮುತಾಲಿಕ್ ಅಥವಾ ಸೂಲಿಬೆಲೆಯಂತೆ ಮುಸ್ಲಿಂ, ಕ್ರೈಸ್ತ ಮತ್ತು ದಲಿತರ ವಿರುದ್ಧ ವಿಷ ಕಾರುತ್ತಾ ಭಾಷಣ ಮಾಡುವ ಕೆಲಸದಲ್ಲೂ ಲಕ್ಷಾಂತರ ವ್ಯಾಕೆನ್ಸಿ ಇದೆ. ದೇಶದ ಮಿಲಿಟರಿ ಗುಪ್ತ ಮಾಹಿತಿಗಳನ್ನು ಕದ್ದು ಪಾಕಿಸ್ತಾನಕ್ಕೆ ಮಾರುವ ಕೆಲಸದ ಲಕ್ಷಾಂತರ ಹುದ್ದೆಗಳನ್ನು ಮಧ್ಯ ಪ್ರದೇಶ ಮತ್ತು ಉತ್ತರ ಪ್ರದೇಶದ ಬಿಜೆಪಿ ಸರಕಾರಗಳು ಸೃಷ್ಟಿಸಿವೆ. ಈ ಹುದ್ದೆ ಮೇಲ್ಜಾತಿ ಹಿಂದೂಗಳಿಗೆ ಮಾತ್ರ ಮೀಸಲು. ಕೇರಳದ ಶ್ರೀಹರಿ ಕುಣ್ಣೆಕಟ್ ಸ್ವಾಮಿಯಂತೆ ಇತರ ಸ್ವಾಮೀಜಿಗಳೂ ಕೊಯ್ಸಿ ಕೊಳ್ಳಬಾರದು ಎಂದು ಇತರ ಕಾವಿಧಾರಿಗಳು ಸ್ತ್ರೀಯರನ್ನು ಏಕಾಂತದಲ್ಲಿ ಭೇಟಿಯಾಗಲು ಬರುವಾಗ ಆ ತರುಣ ಮಹಿಳಾ ಭಕ್ತರು ಚಾಕು-ಕತ್ತರಿ ತಂದಿಲ್ಲ ಎಂಬುದನ್ನು ಖಾತರಿಪಡಿಸಲು ವಿಮಾನ ನಿಲ್ದಾಣದ ಸೆಕ್ಯುರಿಟಿ ತಪಾಸಣೆಯಂತೆಯೇ ಎಲ್ಲಾ ವೈದಿಕ ದೇವಮಾನವ ಆಶ್ರಮಗಳಲ್ಲೂ ಮಹಿಳಾ ಭಕ್ತರನ್ನು ಬಟ್ಟೆ ಬಿಚ್ಚಿಸಿ ತಪಾಸಣೆ ಮಾಡಲು ಮತ್ತು ಮೆಟಲ್ ಡಿಟೆಕ್ಟರ್ ಮೂಲಕ ಚೆಕ್ ಮಾಡುವ ಪರಿಣಿತಿ ಹೊಂದಿರು



ವವರಿಗೆ ಲಕ್ಷಾಂತರ ನೌಕರಿ ಈಗ ಹಿಂದಿನ ಒಂದು ವಾರದಲ್ಲಿ ಹೊಸದಾಗಿ ಹುಟ್ಟಿಕೊಂಡಿದೆ. ಕಾವಿಧಾರಿ ಆಶ್ರಮಗಳ ಕ್ಷೇತ್ರದಲ್ಲಿ ಸೆಕ್ಯುರಿಟಿ ನೌಕರರಾಗಿ ಮತ್ತು ಮಹಿಳಾ ಬೌನ್ಸರ್‌ಗಳಾಗಿ ಕೆಲಸ ಮಾಡಲು ಹೊಸ ಹುದ್ದೆಗೆ ಭಯಂಕರ ಬೇಡಿಕೆ ಹುಟ್ಟಿಕೊಂಡಿದೆ. ಇದಕ್ಕೆ ನಿರುದ್ಯೋಗಿಗಳು ಕೇರಳದ ಕಟ್ಟಿಂಗ್ ನಾಯರ್ ಸ್ವಾಮಿಗೆ ಭಾರಿ ಋಣಿಯಾಗಿರಬೇಕು.

ಮೋದಿಯ ಸಾರ್ವಜನಿಕ ಸಭೆಗಳಲ್ಲಿ ಜನರ ನಡುವೆ ಕುಳಿತು ಗಂಟಲು ಹರಿಯುವಂತೆ 'ಮೋದಿ ಮೋದಿ' ಎಂದು ಕಿರುಚಾಡುವ ಬಾಡಿಗೆ ಭಕ್ತರಾಗುವ ಕೆಲಸವೂ ಭರಪೂರ ಸಂಖ್ಯೆಯಲ್ಲಿ ಲಭ್ಯವಿದೆ. ಎಲ್ಲಕ್ಕಿಂತ ಮಿಗಿಲಾಗಿ ಪತ್ರಿಕೆಗಳ ಸುದ್ದಿ ಪೋರ್ಟಲ್ಲುಗಳಲ್ಲಿ ಮೋದಿ ಪರ ಹಾಗೂ ರಾಹುಲ್ ಗಾಂಧಿ, ಕೇಜ್ರಿವಾಲ್ ವಿರುದ್ಧ ಕಾಮೆಂಟ್ ಪೋಸ್ಟ್ ಮಾಡುವ ಕೆಲಸದ ವ್ಯಾಕೆನ್ಸಿಯೂ ತುಂಬಾ ಇದೆ. ಒಂದು ಕಾಮೆಂಟಿಗೆ ಕನಿಷ್ಠ ರೂ.25/- ಹಾಗೂ ಗರಿಷ್ಠ 75/- ರೂಪಾಯಿ ಸಂಭಾವನೆ ಗ್ಯಾರಂಟಿ. ಆದರೆ ಈ ನೌಕರಿಗೆ ಕನಿಷ್ಠ ಅರ್ಹತೆಯೆಂದರೆ- ಮೋದಿ ವಿರೋಧಿಗಳ ಬಗ್ಗೆ ಕೊಳಕು ಭಾಷೆ ಬಳಸುವುದು ಹೇಗೆ ಹಾಗೂ ಪ್ರಗತಿಪರರನ್ನು ವೈಯಕ್ತಿಕ ನಿಂದನೆಯೊಂದಿಗೆ ಟ್ರೋಲ್ ಮಾಡುವುದು ಹೇಗೆ ಎಂಬ ಬಗ್ಗೆ ಸೂಲಿಬೆಲೆ ಅಕಾಡೆಮಿಯಲ್ಲಿ ತರಬೇತಿ ಪಡೆದಿರಬೇಕು. ಇದು 'ವರ್ಕ್ ಫ್ರಾಮ್ ಹೋಂ' ಅರ್ಥಾತ್ ನೀವು ನಿಮ್ಮ ಮನೆಯಲ್ಲೇ ಕುಳಿತು ಮಾಡುವ ಕೆಲಸ. ನಿಮ್ಮಲ್ಲಿ ಕಂಪ್ಯೂಟರ್ ಮತ್ತು ಇಂಟರ್ನೆಟ್ ಸಂಪರ್ಕ ಇದ್ದರೆ ಸಾಕು.

ಒಟ್ಟಾರೆ ಮೋದಿಯ ಬಿಜೆಪಿ ಸರಕಾರದಡಿ ನಿರುದ್ಯೋಗಿಗಳಿಗೆ ಮನಸ್ಸಿದ್ದರೆ ಮಾರ್ಗವಿದೆ, ಕೊಳಕು ಮನಸ್ಸಿದ್ದರೆ ಭರ್ಜರಿ ಉದ್ಯೋಗವಿದೆ, ಅಮಿತ್ ಷಾನ ಕೃಪೆಯಡಿ ಅಪರಿಮಿತ ಅವಕಾಶವಿದೆ. ಒಟ್ಟಾರೆ ನಿಮ್ಮ ಹೃದಯದಲ್ಲಿ ಕೋಮು ದ್ವೇಷ, ಜಾತಿವಿಷ, ಹಣದ ಸ್ವಾರ್ಥ ಇರಬೇಕು ಹಾಗೂ ತಲೆಯಲ್ಲಿ ಮೆದುಳು ಇರಬಾರದು ಅಷ್ಟೇ! ನಿರುದ್ಯೋಗಿಗಳೇ- ಮೋದಿ ಸರಕಾರದಡಿ ನಿಮಗಾಗಿ ಭರ್ಜರಿ ಆದಾಯದ ಕೋಟ್ಯಂತರ ಸ್ವಉದ್ಯೋಗಗಳು ಕಾದಿವೆ. ಏಳಿ ಎದ್ದೇಳಿ ದೇಶ ಭಕ್ತಿಯ ನಾಟಕ ಆಡುತ್ತಾ ಗೋವಿನ ಬಾಲ ಹಿಡಿಯುತ್ತಾ ಬೀದಿಗಿಳಿಯಿರಿ, ನಿಮ್ಮ ಭವಿಷ್ಯ ನೀವೇ ರೂಪಿಸಿ (ಆದರೆ ಅಪ್ಪಿತಪ್ಪಿಯೂ ನಿಜವಾದ ಸೇನಾಪಡೆ ಸೇರಬೇಡಿ).

ಸ್ವಉದ್ಯೋಗ ಮಾಡಿ ಆದರೆ ಮದುವೆಯಾಗಬೇಡಿ, ಅಥವಾ ಮದುವೆ ಆಗಿದ್ದರೂ ಪ್ರಧಾನಿಯಂತೆ ಹೆಂಡತಿಯನ್ನು ದೂರವಿಡಿ, ಅಪ್ನಾ ಹಾಥ್ ಜಗನ್ನಾಥ್. ಕಾಯಕವೇ ವಿಲಾಸ, ಕೈ ಕೊಚ್ಚೆಯಾದರೆ ಕಿಸೆ ಬೆಚ್ಚ (ನಿರುದ್ಯೋಗಿಗಳಿಗೆಲ್ಲಾ ಸರಕಾರ ಪ್ರತಿ ವರ್ಷ ಎರಡು ಕೋಟಿ ಹೊಸ ನೌಕರಿ ಸೃಷ್ಟಿಸುತ್ತಾ ಹೋದರೆ ತಮ್ಮ ಸಂಘ ಪರಿವಾರದ ಗೂಂಡಾ ಪಡೆಯ ಕಾಲಾಳಾಗಿ ಕೆಲಸ ಮಾಡಲು ಯಾರು ಸಿಗುವುದಿಲ್ಲ ಎಂಬ ಭಯ ಮೋದಿ ಮತ್ತು ಅಮಿತ್ ಷಾಗೆ ಕಾಡಿದ್ದರಿಂದ ಅವರು ಕೋಟಿ ಕೋಟಿ ಹೊಸ ನೌಕರಿ ಸೃಷ್ಟಿಸುವ ತಮ್ಮ ಚುನಾವಣಾ ಆಶ್ವಾಸನೆ ಮುದ್ದಾಂ ಅನುಷ್ಠಾನಗೊಳಿಸಿಲ್ಲ ಎಂಬ ಗುಟ್ಟು ಮಾತ್ರ ಇನ್ನೂ ಬಿಟ್ಟು ಕೊಟ್ಟಿಲ್ಲ)


- ಜೆ.ರವಿಕಿರಣ, ಮೈಸೂರು

ದಲಿತರಿಗೆ ರಾಮ ಭಜನೆ ಮಂದಿರ ಕಟ್ಟಿಸಿಕೊಡಿ

ದಲಿತರ ಮನೆಯಲ್ಲಿ ಊಟ ಮಾಡುವ ಪ್ರಹಸನ ಮೊಟ್ಟ ಮೊದಲು ಶುರು ಆಗಿದ್ದು ಇಂದಿರಾ ಗಾಂಧಿಯವರ ಕಾಲದಲ್ಲಿ, ನಂತರ ಅದನ್ನು ಅನುಕರಿಸಿ ಇತರ ಎಲ್ಲಾ ಪಕ್ಷದ ನೇತಾರರೂ ದಲಿತರ ಮನೆಯಲ್ಲಿ ಊಟ ಮಾಡುವ ನಾಟಕ ಆಡಿ ದಲಿತರ ಮೇಲೆ ಅದೇನೋ ಬಹುದೊಡ್ಡ ಉಪಕಾರ ಮಾಡಿದಂತೆ ಆಡತೊಡಗಿದರು. ಅಂದಿನಿಂದ ಎರಡು ತಲೆಮಾರು ಕಳೆದರೂ ಭಾರತೀಯ ಸವರ್ಣೀಯರ ಮನಸ್ಥಿತಿ 47 ವರ್ಷಗಳ ನಂತರವೂ ಬದಲಾಗಿಲ್ಲ ಎಂಬುದಕ್ಕೆ ಈಗಿನ ಯಡ್ಡಿ ನಾಟಕ ಸಾಕ್ಷಿ.

ಮೊನ್ನೆ ಮೊನ್ನೆ ತುಮಕೂರು ಹತ್ತಿರ ಒಂದು ಜಾತ್ರೆಯ ಸಮಯದಲ್ಲಿ ದಲಿತರು ಗ್ರಾಮ ದೇವತೆಯ ಗುಡಿ ಪ್ರವೇಶಿಸಿದರು ಎಂದು ಸವರ್ಣೀಯರು ಆ ಜಾತ್ರೆಯನ್ನೇ ಅರ್ಧಕ್ಕೆ ರದ್ದು ಮಾಡಿರುವಂತಹ ಹೇಯ ಕಾರ್ಯ ನಡೆದಿದೆ. ಅದೇ ದಿನ ಯಡಿಯೂರಪ್ಪನವರು ಚಿತ್ರದುರ್ಗದಲ್ಲಿ ದಲಿತರ ಮನೆಯಲ್ಲಿ ಹೋಟೆಲಿನಿಂದ ತರಿಸಿಕೊಂಡ ಉಪಾಹಾರವನ್ನು ಹೊಸ ಸ್ಟೀಲ್ ಪ್ಲೇಟುಗಳಲ್ಲಿ ತಿನ್ನುವ ನಟನೆ ಮಾಡಿ ಫೋಟೋ ತೆಗೆಸಿ ಪತ್ರಿಕೆಗಳಲ್ಲಿ ಹಾಕಿಸಿಕೊಂಡರು. ಹೋಟೇಲ್ ತಿಂಡಿ ತಿಂದಿದ್ದಕ್ಕೆ ದಲಿತ ಸಂಘಟನೆಗಳಿಂದಲೇ ಟೀಕೆ ವ್ಯಕ್ತವಾಗಿದ್ದರಿಂದ, ಮರುದಿನವೇ ಬಾಗಲಕೋಟೆಯಲ್ಲಿ ಮತ್ತೊಮ್ಮೆ ಯಡಿಯೂರಪ್ಪ ಮತ್ತು ಅವರ ರಾಖಿ-ಬೆಹೆನ್ ಶೋಭಕ್ಕ ದಲಿತರ ಮನೆಯಲ್ಲಿ ಮೊದಲು ಉಪಾಹಾರ ಸೇವಿಸಿ, ಅದರ ಬೆನ್ನಿಗೇ ಊಟವನ್ನೂ ಮಾಡಿ ತಮ್ಮ ತಮ್ಮ ಹೊಟ್ಟೆ ಉಬ್ಬರಿಸಿಕೊಂಡು ವಿರೋಧಿಗಳ ಮೇಲೆ ಸೇಡು ತೀರಿಕೊಂಡರು. ಇದು ಹೆಚ್ಚು ಕಮ್ಮಿ ನಮ್ಮ ಪೇಜಾವರ ಶ್ರೀಗಳು ಉಡುಪಿಯಲ್ಲಿ ದಲಿತ ಕೇರಿಗೆ ಭೇಟಿ ನೀಡಿ ಅಲ್ಲಿ ದಲಿತರಿಂದ 'ಬಿಸ್ಲೇರಿ' ನೀರಿನಲ್ಲಿ ತಮ್ಮ ಪಾದ ತೊಳೆಸಿಕೊಂಡ ಪರಿ ಆಯಿತು.

ರಾಜಕಾರಣಿಗಳು ಹಾಗೂ ಅರೆ ರಾಜಕಾರಣಿ-ಸ್ವಾಮೀಜಿಗಳು ದಲಿತ ಕೇರಿಗೆ ಭೇಟಿ ನೀಡಿ ಅಲ್ಲಿ ಊಟ ಮಾಡುವ ದೃಶ್ಯ ಹಿಂದಿನ 47 ವರ್ಷಗಳಿಂದ ನೋಡಿ ನೋಡಿ ಈಗ ಎಲ್ಲಾ ದಲಿತರಿಗೆ ಬೋರ್ ಹೊಡೆದಿದೆ. ಇದು 1960 ರ ದಶಕದ ಸಪ್ಪೆ ಕಪ್ಪು-ಬಿಳುಪು ಚಲಚಿತ್ರ ನೋಡಿದಷ್ಟೇ ನೀರಸ ಅನಿಸುತ್ತಿದೆ. ಅದಕ್ಕಾಗಿ ದಲಿತರು ಸ್ವಲ್ಪ ರಂಗುರಂಗಿನ ಬದಲಾವಣೆ ಬಯಸುತ್ತಿದ್ದಾರೆ. ಈಗಿನ ಕಾಲಕ್ಕೆ ತಕ್ಕಂತೆ ಪಾತ್ರಗಳು ಸ್ವಲ್ಪ ಅದಲುಬದಲು ಆಗಲಿ.



ಅಂದರೆ ದಲಿತರು ಇನ್ನು ಮುಂದೆ ಮೇಲ್ಜಾತಿಯವರ ಮನೆಯ ಅಡುಗೆ ಕೋಣೆಯಲ್ಲಿ ಕುಳಿತು ಊಟ ಮಾಡಲು ಬಯಸುತ್ತಾರೆ. ಹಾಗಾಗಿ ಯಡಿಯೂರಪ್ಪನವರೇ ನಿಮ್ಮ ಚೆಡ್ಡಿ ಪಟಾಲಮ್ಮಿಗೆ ದಲಿತರ ಮನೆ ಊಟದ ನಾಟಕ ಇನ್ನು ನಿಲ್ಲಿಸುವಂತೆ ಹೇಳಿ. ಸ್ವಲ್ಪ ಸಿದ್ದರಾಮಯ್ಯನವರನ್ನು ಅನುಕರಿಸಲು ಪ್ರಯತ್ನಿಸಿ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮನೆಯಲ್ಲಿ ಅಡುಗೆ ಮಾಡುವ ಹೆಂಗಸು ಒಬ್ಬ ಕೆಳಜಾತಿ ಮಹಿಳೆ. ಇಂತಹ ನೈಜ ಜಾತ್ಯತೀತ ಮನಸ್ಥಿತಿ ಯಡಿಯೂರಪ್ಪ ಮತ್ತು ಇತರ ಬಿಜೆಪಿ ಮೇಲ್ಜಾತಿಯವರೂ ಬೆಳೆಸಿಕೊಳ್ಳಬೇಕು. ಸಂಘ ಪರಿವಾರದವರೇ, ನೀವು ಇನ್ನೂ ದಲಿತರ ಮನೆ ಊಟದ ಹಳೇ ನಾಟಕದಲ್ಲಿಯೇ ಇದ್ದೀರಾ. ಅದು ಬಿಟ್ಟು ದಲಿತರನ್ನು ನಿಮ್ಮ ಅಡುಗೆ ಮನೆಗೆ ಅಥವಾ ಡೈನಿಂಗ್ ಹಾಲ್‌ಗೆ ಕರೆಸಿ ನಿಮ್ಮ ಕೈಯಾರೆ ತಯಾರಿಸಿದ ಊಟ ಬಡಿಸುವುದು ಯಾವಾಗ? ನೀವು ದಲಿತರನ್ನು ನಿಮ್ಮ ಮನೆಯಲ್ಲಿ ಅಡುಗೆ ಕೆಲಸಕ್ಕೆ ಇಟ್ಟುಕೊಂಡರೆ ಆಗ ನೀವು ಅಪ್ಪಟ ಪ್ರಾಮಾಣಿಕ ಜಾತ್ಯತೀತರು ಅನ್ನಬಹುದು.

ಬಿಎಸ್‌ವೈ ಸಸ್ಯಾಹಾರಿ ಲಿಂಗಾಯತ ಗಾಣಿಗ, ಶೋಭಾ ಮಾಂಸಾಹಾರಿ ಗೌಡತಿ. ಇದು ಬಲು ಅಪರೂಪದ ಅಣ್ಣಾ-ತಂಗಿ ಜೋಡಿ! ದಲಿತರೆಲ್ಲಾ ಮಾಂಸಾಹಾರಿಗಳು. ಹಾಗಾಗಿ ಶೋಭಕ್ಕ-ಯಡಿಯೂರಣ್ಣರ ಮನೆಯಲ್ಲಿ ದಲಿತರನ್ನು ಕರೆಸಿ ಮಾಂಸಾಹಾರದ ಊಟ ಹಾಕಿದರೆ ಆಗ ಅವರು ನಿಜವಾದ ಜಾತ್ಯತೀತರು ಮಾತ್ರವಲ್ಲ ಎಲ್ಲಾ ಜನಾಂಗಗಳ ಆಹಾರದ ಹಕ್ಕನ್ನು ಮನ್ನಿಸುವವರು ಎಂದು ಒಪ್ಪಿಕೊಳ್ಳಬಹುದು. ಇದಕ್ಕೂ ಸ್ವಲ್ಪ ಮುಂದೆ ಹೋಗಿ ದಲಿತರೊಟ್ಟಿಗೆ ಎಲ್ಲಾ ಪಕ್ಷದ ರಾಜಕಾರಣಿಗಳೂ ವಿವಾಹ ಸಂಬಂಧ ಬೆಳೆಸುವಂತಾದರೆ ಅದು ಅತ್ಯುತ್ತಮ. ಆಗ ಜಾತಿಗಳೇ ಉಳಿಯುವುದಿಲ್ಲ, ಹಾಗಾಗಿ ಊಟದ ಪ್ರಹಸನಗಳೂ ಬೇಕಾಗುವುದಿಲ್ಲ. ಆದರೆ ನಿಮ್ಮ ಮನು ಋಷಿ ಮಾತ್ರ ಕೋಪದಿಂದ ತನ್ನ ಗೋರಿಯೊಳಗೆಯೇ ವಿಪರೀತ ಹೊರಳಾಡಿ ತಾನು ಬರೆದ ಮನುಸ್ಮೃತಿ ಹರಿದು ಹಾಕಿ ಅದರ ಮೇಲೆಯೇ ಬೋರಲು ಮಲಗಬಹು ಸಂಘ ಪರಿವಾರ ಇರುವವರೆಗೆ ಇನ್ನು ಐನೂ ಹೋದರೂ ಅಂತಹ ಜಾತ್ಯತೀತ ಸಮಾಜ ಸೃ ಸಾಧ್ಯವಿಲ್ಲ ಅನಿಸುತ್ತದೆ. ಮೋದಿಯ ಅಚ್ಛೆ ದಿನ್ ಜಾತ್ಯತೀತ ಸಮಾಜವೂ ಒಂದು ಕನಸಾ ಉಳಿಯಲಿದೆ. ಹಾಗಾಗಿ ಗೋರಿಯಲ್ಲಿ ಮನು ನಿದ್ದೆಗೆ ಭಂಗ ಬರಲಾರದು. ನಿಶ್ಚಿಂತೆಯಿಂದ

ಸಂಘಿಗಳೇ ಮೀಸಲಾತಿ ತೆಗೆದುಹಾಕಬೇಕ ಬೊಬ್ಬೆ ಮಾತ್ರ ನಿಲ್ಲಿಸಬೇಡಿ. ಅದರಿಂದ ನಿಮಗೆ ವೋಟು ಸಿಗುತ್ತದೆ ತಾನೇ, ಅಷ್ಟು ಸಾಕು. ರಾಮ ಭಜನೆ ಮಂದಿರ ಕಟ್ಟಿಸಿಕೊಟ್ಟು ಅವರ ತಬಲ ತಂಬೂರಿ ಹಿಡಿಸಿ ಅವರಿಗೆ ವೈದಿಕ ದೇವ ಏರಿಸಿ ಬಿಡಿ ಸಾಕು, ಅವರು ಬುದ್ಧ-ಅಂಬೇಡ್ಕರ್ ಮರೆತು ತಾಳ ಕುಟ್ಟುತ್ತಾ ತಂಬೂರಿ ಬಾರಿಸುತ್ತಾ ರಾ ಯಲ್ಲಿ ತಲ್ಲೀನರಾಗುತ್ತಾರೆ. ಆಗ ಮತಾಂತರದ ಇರುವುದಿಲ್ಲ, ಏಸುಕ್ರಿಸ್ತ ಮಹಾತ್ಮೆ ಯಕ್ಷಗಾನ ಜನರೇ ಇರುವುದಿಲ್ಲ, ಅದೇ ತಾನೇ ಸಂಘಿಗಳಿಗೆ ವುದು. ದಲಿತರ ಉದ್ಧಾರ ಯಾರಿಗೆ ತಾನೇ

- ಜಗದೀಶ್ ಗಾಂಭೀರ್, ಮಂ

ಯಕ್ಷಗಾನ ಮತ್ತು ಮತಾಂತ

ನಾಲ್ಕು ದಶಕಗಳ ಹಿಂದೆ ಮುಳಿಯ ಎನ್ನುವವರು ರಚಿಸಿದ್ದ ಕ್ರಿಸ್ತ ಮಹಾತ್ಮೆ ಯಕ್ಷಗಾನ ಕುರಿತಾಗಿ ಮತಾಂತರದ ನೆವನ ಹೇಳಿ ಬಿತ್ತಲು ನೋಡಿದ ಶಕುನಿಯೊಬ್ಬನ ತಂತ್ರ ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು.

ಯಕ್ಷಗಾನ ಒಂದು ಕಾಲದಲ್ಲಿ ಕರಾವಳಿ ಬಹುವಾಗಿ ಪ್ರಭಾವಿಸಿದ ಕಲೆಯಾಗಿತ್ತು. ಅದ ಇತ್ಯಾದಿಗಳ ಪ್ರಭಾವದಿಂದ ಇಂದಿನ ತಲೆಮ ಬಗೆಯ ಆಸಕ್ತಿಯೇನೂ ಇದೀಗ ಉಳಿದಿಲ ಸಾಕ್ಷಿಯಾಗಿ ಹಿಂದೆ ರಾತ್ರಿಯಿಡೀ ನಡೆಯುತ್ತಿದ್ದ ಇದೀಗ ಸಂಜೆ ಆರು ಗಂಟೆಗೆ ಆರಂಭವಾ ಒಂಭತ್ತು-ಹತ್ತು ಗಂಟೆಯೊಳಗೆ ಮುಗಿಯು ಯಕ್ಷಗಾನವಾಗಿ ಬದಲಾಗುತ್ತಿರುವುದು. (ರಾ ನಡೆಯುವ ಹರಕೆ ಯಕ್ಷಗಾನಕ್ಕೆ ಬೆರಳೆಣಿಕೆಯ ಅವರೂ ಕೂಡ ಪ್ರಸಂಗದ ಕೊನೆಯ ತನಕ ಕುಳಿತಿರುವುದಿಲ್ಲ, ಬಹುತೇಕ ಒಂದೇ ಬಗೆ ಪ್ರಸಂಗವಿರುವ ಕಾರಣಕ್ಕೆ ಕಥೆ ಕೇಳುವಂತಹ ಯಾರಿರೂ ಇರುವುದಿಲ್ಲ.)

ಮೂಲತಃ ಸಾಮಾನ್ಯ ಜನಪದ ಕಲೆಯಾಗಿದ್ದ ಜನರನ್ನು ಸೆಳೆಯಬಲ್ಲ ಪೌರಾಣಿಕ ಪ್ರಸಂಗಗಳನ್ನು ವಾಗಿ ಅಳವಡಿಸಿಕೊಳ್ಳುತ್ತಾ ಹೋದಂತೆ ಅ ಧಾರ್ಮಿಕ ಚೌಕಟ್ಟು ರೂಪುಗೊಳ್ಳುತ್ತಾ ಹ ಯಕ್ಷಗಾನ ಪ್ರಸಂಗಕ್ಕೆ ಸಂಬಂಧಿಸಿದಂತೆ ಬೇಕುಬೆ ನಿರ್ಧರಿಸುವ, ಮೂಗು ತೂರಿಸುವ ಹಾಗು ರೀತಿಯಲ್ಲಿ ಪ್ರಭಾವಿಸುವ ಗುಂಪುಗಳೂ ತೆರೆ ಹುಟ್ಟಿಕೊಂಡವು. ರಾತ್ರಿಯಿಡೀ ನಡೆಯುವ ನೋಡಬೇಕಾದಂತಹ ಪದ್ಯ, ನೃತ್ಯ ಮಾತುಗಾರಿಕ ಮಿಶ್ರಣದ ಮೊದಲ ನೋಟಕ್ಕೆ ಬೋರೆನಿಸುವ ಸುಳಿಗೆ ಒಮ್ಮೆ ಸಿಕ್ಕಿ ಬಿದ್ದದ್ದೆಂದರೆ ಅದರಿಂದ ಹ ವುದು ಸುಲಭವಿಲ್ಲ, ಅಂತಹ ಆಕರ್ಷಣೆ ಈ ಕಲೆ ಸತ್ಯ.

ಈಗ ಸುದ್ದಿಯಲ್ಲಿರುವ ಕ್ರಿಸ್ತ ಮಹಾತ್ಮೆಯಂತಹ ಪ್ರಯೋಗಗಳು ಯಕ್ಷಗಾನಕ್ಕೆ ಸಂಬಂಧಿಸಿದಂತೆ ಸಲ ನಡೆದಿವೆ. ಈ ಪ್ರಸಂಗದ ಮುನ್ನುಡಿಯಲ್ಲಿ ಕರ್ತರಾದ ಮುಳಿಯ ಕೇಶವರು 1976ರ ಸ "ಇದರಿಂದ ಯಕ್ಷಗಾನ ಕಲೆಯನ್ನು ಕ್ರೈಸ್ತ ನಡುವೆ ಪರಿಚಯಿಸಿದಂತಾಗುತ್ತದೆ" ಎಂದು ವಾಗಿಯೇ ಹೇಳಿಕೊಂಡಿದ್ದರು. ಯಕ್ಷಗಾನ ಸಾಂಪ್ರದಾಯಿಕ ದೃಷ್ಟಿಯಲ್ಲಿ ನೋಡುವವರ ಮೊದಲಿಂದಲೂ ಇತ್ತು, ಅಷ್ಟೇ ಏಕೆ ಯಕ್ಷಗಾನ ದೊಡ್ಡ ಪ್ರಯೋಗವನ್ನೇ ಮಾಡಿದಂತಹ ಕಾರಂತರೂ ಇಂತವರಿಂದ ಟೀಕೆಗೊಳಗಾಗಿದ್ದರು ಇವತ್ತಿನ ಮತಾಂತರದ ತಳಕು ಮಾತ್ರ ಇಲ್ಲಿ ಆದರೆ ವಿಚಿತ್ರವೆಂದರೆ ಮತಾಂತರಕ್ಕೂ ಯ ಇರುವ ನಂಟನ್ನು ಯಾವತ್ತಿದ್ದರೂ ಅಲ್ಲಗಳೆಯ ಆದರದು ಮಿಷನರಿಗಳದ್ದಲ್ಲ ಅದು ತಣ್ಣನೆಯ ಮತಾಂತರ!

ಹೌದು, ಕರ್ನಾಟಕ ಕರಾವಳಿಯ ನೆಲವೆಂದ ಕೊಲ್ಲೂರು ಧರ್ಮಸ್ಥಳವೇ ಮೊದಲಾದ ಅ ಕೇಂದ್ರಗಳ ತವರೂರೆಂಬ ಕಲ್ಪನೆ ಅನೇಕರಿಗಿದ ಅನೇಕಾನೇಕ ಚಿಕ್ಕಪುಟ್ಟ ದೇಗುಲಗಳು ಇ ಪುರಾಣಗಳಿಂದಲೇ ವೈಭವೀಕರಿಸಲ್ಪಟ್ಟು ಜನಮ ಪ್ರಸಿದ್ಧಿಯನ್ನು ಹೊಂದಿವೆ. ದೂರದ ಉತ್ತರ ಭ ಬಾಳಿ ಬದುಕಿದ್ದ ಪಾಂಡವರಾಗಲೀ ತ್ರಿಮೂ

ಗಿಲಾದ ದೇವಿ ಮಹಾತ್ಮೆಯ ಛಾಯೆಯನ್ನು ಹೊಂದಿರುವ ಇಲ್ಲಿನ ಅನೇಕ ಕ್ಷೇತ್ರಗಳ ಸ್ಥಳ ಪುರಾಣಗಳು ಜನಸ್ಸಿಗೆ ರಂಜನೆಯನ್ನು ಕೊಡುತ್ತವೆಯೆನ್ನುವುದು ದಾದರೂ ತಮ್ಮ ಹೆಗ್ಗಳಿಕೆಯನ್ನು ತೋರ್ಪಡಿಸಿಕೊಳ್ಳಲು ದಿಕರು ಕಟ್ಟಿದ ಈ ಕಟ್ಟುಕಥೆಗಳು ನಡೆಸಿದಂತಹ ಶೋಷಣೆ ದಾಳಿಗೆ ದೊಡ್ಡ ಇತಿಹಾಸವೇ ಇದೆ. ಆ ಕ್ಷೇತ್ರ ಮಹಾತ್ಮೆ, ಈ ಕ್ಷೇತ್ರ ಮಹಾತ್ಮೆಗಳೆಂದು ನಂಬಿಕೆ ಹಾಗು ಭಕ್ತಿ ಇತ್ಯಾದಿಗಳ ಮೂಲಕ ಜೀವಂತವಿದ್ದ ಸ್ಥಳೀಯ ಮಹಾಪುರುಷರ ವ್ಯಕ್ತಿತ್ವಗಳು ಈ 'ಮಹಾತ್ಮೆ'ಗಳ ಹಾವಳಿಯಿಂದಾಗಿ ಒಂದೋ ಸಮಾಧಿಗತವಾದರೆ ಬಹುತೇಕ ಆಚಾರಗಳು ವೈದಿಕತೆಯೊಂದಿಗೆ ಬೆಸೆದುಕೊಂಡು ದೇವಗಣಗಳಾಗಿ ಮಾರ್ಪಟ್ಟವು. ಇದು ಒಂದು ಸಮುದಾಯಿಕ ಮತಾಂತರವಲ್ಲದೇ ಮತ್ತಿನ್ನೇನು?

ಬಹಳ ಹಿಂದೆಯೇ ಇಂದಿರಾ ಸರಕಾರ ನಡೆಸಿದ ಬಾಂಗ್ಲಾ ವಿಮೋಚನೆಯ ಕುರಿತಾಗಿ ಹಾಗು ಎರಡನೆಯ ಮಹಾ ಸಮರವೇ ಮೊದಲಾದ ಕಥೆಯ ಅನೇಕ ಪ್ರಸಂಗಗಳು ರಚನೆಗೊಂಡಿದ್ದವು. ಅಷ್ಟೇ ಏಕೆ, ಏಯ್ಡ್ಸ್ ಮಹಾ ಮಾರಿಯ ಕುರಿತಾಗಿಯೂ ಜನಜಾಗೃತಿಗಾಗಿ ಪ್ರಸಂಗವೊಂದು ರಚನೆಯಾಗಿತ್ತು. 'ಆಪ್ತಮಿತ್ರ'ದಂತಹ ಸಿನಿಮಾ ಕಥೆಯೂ ಯಕ್ಷಗಾನವಾಗಿತ್ತು. ಅಂತಾದ್ದರಲ್ಲಿ ಯಕ್ಷಗಾನಕ್ಕೆ ಮಹಾ ಮಹಿಮನೆನಿಸಿದ ಯೇಸು ಕ್ರಿಸ್ತನ ಕತೆಯ ಸೇರ್ಪಡೆ ಆಕ್ಷೇಪವೇನಲ್ಲ. ಇನ್ನೂ ವಿಚಿತ್ರವೆಂದರೆ ಕಾಲನ ಹೊಡೆತಕ್ಕೆ ಪ್ರೇಕ್ಷಕರೇ ಇಲ್ಲದೇ ಹರಕೆಯಾಟ ಹಾಗು ಧರ್ಮಸ್ಥಳದಂತಹ ಶ್ರೀಮಂತ ಪ್ರಾಯೋಜಕರ ನೆರವಿನಿಂದಷ್ಟೇ ಜೀವಂತವಿರುವ ಯಕ್ಷಗಾನದ ಮೂಲಕ ಮತಾಂತರ ನಡೆಸಲಾಗುತ್ತಿದೆ ಎನ್ನುವ ಮೂರ್ಖರ ವಾದಕ್ಕೆ ಯಾವ ಗಟ್ಟಿ ಹಿನ್ನೆಲೆಯೂ ಇಲ್ಲ. ಮಾತ್ರವಲ್ಲ, ಇದೇ ಹಿಂದೂಗಳ ಪವಿತ್ರ ವೇದಪುರಾಣಗಳಲ್ಲೂ ಇದೇ ಯೇಸುಕ್ರಿಸ್ತನ ಬಗ್ಗೆ ಉಲ್ಲೇಖವಿರುವುದು ವಿಚಿತ್ರವಾದರೂ ಸತ್ಯ. ವಾಸ್ತವವಾಗಿ ಕೆಲ ಶತಮಾನಗಳ ಹಿಂದೆ ಆವಿಷ್ಕೃತಗೊಂಡ ಇಂತಹ ಭವಿಷ್ಯ ಪುರಾಣದಂತಹ ಪೌರಾಣಿಕ ಸಾಹಿತ್ಯದಲ್ಲಿ ಸಾಂದರ್ಭಿಕವಾಗಿ ಯಾರೋ ಇದನ್ನು ಸೇರಿಸಿರಬೇಕು. ಹೀಗಿದ್ದರೂ ಅನೇಕ ನಮ್ಮ ಪೌರಾಣಿಕ ಗ್ರಂಥಗಳು ಇಂತಹ 'ಪ್ರಕ್ಷಿಪ್ತ(ಸಾಂದರ್ಭಿಕ ಸೇರ್ಪಡೆ)'ಗಳಿಂದಲೇ ಅನುಕೂಲಕ್ಕೆ ತಕ್ಕಂತೆ ಕೊಬ್ಬಿದಂತವುಗಳಲ್ಲವೇ?

ಇನ್ನೂ ವಿಶೇಷವೆಂದರೆ ಕ್ರಿಸ್ತನ ವಿಚಾರದಲ್ಲಿ ಜನರನ್ನು



ಸೆಳೆಯಲು ನೋಡುತ್ತಿರುವ ಈ ಸೋಕಾಲ್ಡ್ ಯಕ್ಷಾಭಿಮಾನಿ ದನಿ ಪಡೆಗೆ ಈ ಕರಾವಳಿ ನೆಲದಲ್ಲಿ ಈ ಯಕ್ಷಗಾನ ಕಲೆಯನ್ನು ಧರ್ಮಾತೀತವಾಗಿ ಪ್ರೀತಿಸುತ್ತಾರೆಂಬುವುದು ಗೊತ್ತಿಲ್ಲದೇ ಇರದು. ಅನೇಕ ಕ್ರಿಶ್ಚಿಯನ್ -ಮುಸಲ್ಮಾನ ಯಕ್ಷಗಾನ ಕಲಾವಿದರು ಈ ಕಲೆಯಲ್ಲಿ ಇಂದಿಗೂ ತೊಡಗಿಸಿಕೊಂಡು ಯಾರ ತಕರಾರಿಲ್ಲದೇ ಜನ ಮನ್ನಣೆ ಪಡೆದು ಮುಂದುವರೆಯುತ್ತಿದ್ದಾರೆ. ಇಲ್ಲಿ ದಶಕಗಳ ಕಾಲ ಯಕ್ಷಗಾನದಲ್ಲಿ ಸೇವೆ ಸಲ್ಲಿಸಿರುವ ಗೌಸ್ ಮಹಮ್ಮದ್ ಹಾಗು ಜಬ್ಬಾರ್ ಸಮೋರಂತಹ ಮುಸಲ್ಮಾನ ಕಲಾವಿದರು ಇಂದಿಗೂ ಅನೇಕರಿಗೆ ಮಾದರಿಯೆನಿಸಿದ್ದಾರೆ. ಹರಕೆ ಸೇವೆಯಾಡಿಸುವ ಅನ್ಯ ಧರ್ಮೀಯರೂ ಇದ್ದಾರೆ. ಇತ್ತೀಚೆಗೆ ಮುಸಲ್ಮಾನನೊಬ್ಬ ಈ ಕಲೆಗಿಳಿಯುವ ತುಮುಲದ ಕುರಿತಾಗಿ ಇಸ್ಮಾಯಿಲ್ ಮೂಡು ಶೆಡ್ಡೆ ಎನ್ನುವವರ "ಬಣ್ಣ ದ ಬದುಕು" ಎನ್ನುವ ಚಲನಚಿತ್ರವೂ ಬಿಡುಗಡೆಯಾಗಿತ್ತು, ಇದೆಲ್ಲ ಈ ಕಲೆಗೆ ಧಾರ್ಮಿಕ ಜಗತ್ತಿನಾಚೆಗೂ ಇರುವ ನಂಟನ್ನು ಬಿಂಬಿಸುತ್ತದೆ.

ಧಾರ್ಮಿಕ ಜಿಗುಟುಗಾರರ ತೆಕ್ಕೆಗೆ ಸಿಕ್ಕ ಬಳಿಕ ವೈದಿಕತೆ ಧ್ರುವೀಕರಣ, ಜಾತೀಯತೆ (ಕೆಲ ವರ್ಷಗಳ ಹಿಂದೆ ಮಂದರ್ತಿ ಮೇಳದಲ್ಲಿ ಬಿಲ್ಲವರ ಪ್ರವೇಶದ ಕುರಿತಾಗಿ ನಡೆದಿದ್ದ ಜಟಾಪಟಿ ನೆನಪಿಸಿ) ಮೊದಲಾದ ರೋಗಗಳು ಈ ಕಲೆಗೂ ಅಂಟಿರುವುದು ನಿಜವಾದರೂ ಅನ್ಯ ಧರ್ಮೀಯರು ಮತಾಂತರಕ್ಕಾಗಿ ಈ ಯಕ್ಷಗಾನವನ್ನು ಬಳಸುತ್ತಿದ್ದಾರೆ ಎನ್ನುವ ಮಟ್ಟಕ್ಕಂತೂ ಖಂಡಿತ ಹೋಗಿದ್ದಿಲ್ಲ, ಮನೆಹಾಳ ಬುದ್ಧಿಯವರಿಗೆ ಎಲ್ಲಾ ಕಡೆಯೂ ಮನೆಹಾಳತನವೇ ಕಾಣಿಸಿದರೆ ಏನೂ ಮಾಡಲಾಗದು.

- ಓದುಗ, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಅನಿಸಿಕೆಗಳನ್ನು 9980331427 ನಂಬರ್‌ಗೂ ಸ್ಪಷ್ಟವಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

ನಕ್ಸಲ್ಬರಿ- ಒಂದು ಮುಗಿಯದ ಇತಿಹಾಸ

EPW ಸಂಪಾದಕೀಯ

ಕೃಪೆ: *Economic and Political Weekly*

May 27, 2017. Vol. 52. No. 21

■ ಅನು: ಶಿವಸುಂದರ್

ಭಾರತೀಯ ಬಂಡವಾಳದ ಅತಾರ್ಕಿಕತೆ, ಬರ್ಬರತೆ ಮತ್ತು ಅಮಾನವೀಯತೆಗಳ ಮೇಲೆ ವಿಶ್ವಾಸ, ಪ್ರೀತಿ ಮತ್ತು ಭರವಸೆಗಳು ವಿಜಯ ಸಾಧಿಸಬಲ್ಲದೇ?

ಬರ್ನಾಡ್ ಡಿಮೆಲ್ಲೋ ಬರೆಯುತ್ತಾರೆ:

1947ರಲ್ಲಿ ಭಾರತದ ಆಳುವ ವರ್ಗಗಳಿಗೆ ಅಧಿಕಾರ ವರ್ಗಾವಣೆಯಾಯಿತು. ಆದರೆ ಆ ನಂತರ, ಅತಿ ಸ್ವಲ್ಪ ಸಮಯದಲ್ಲೇ ಭಾರತದ ಹೊಸ ಆಳುವ ವರ್ಗ 1948ರಲ್ಲಿ ತೆಲಂಗಾಣಕ್ಕೆ ಸೈನ್ಯವನ್ನು ಕಳಿಸಿ ತನ್ನ ನಿಜಬಣ್ಣವನ್ನು ಬಯಲುಮಾಡಿಕೊಂಡಿತು. ಹೊಸ ಸರ್ಕಾರದ ಈ ಸೈನಿಕ ಕಾರ್ಯಾಚರಣೆಗೆ ಇತರ ಉದ್ದೇಶಗಳಿದ್ದವಾದರೂ, ಅದರ ಪ್ರಮುಖವಾದ ಉದ್ದೇಶ ತೆಲಂಗಾಣದಲ್ಲಿ ಅಸ್ತಿತ್ವದಲ್ಲಿದ್ದ ಅರೆ ಊಳಿಗಮಾನ್ಯತೆಯ ವಿರುದ್ಧದ ಪ್ರಜಾತಾಂತ್ರಿಕ ಕ್ರಾಂತಿಯನ್ನು ಪೂರ್ಣಗೊಳಿಸಬೇಕೆಂದು ಪಣತೊಟ್ಟಿದ್ದ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ರೈತ ಬಂಡಾಯಗಾರರನ್ನು ಮಟ್ಟ ಹಾಕುವುದೇ ಆಗಿತ್ತು. ವಾಸ್ತವವಾಗಿ ಭಾರತೀಯ ಸೈನ್ಯವು ತೆಲಂಗಾಣದ ಗ್ರಾಮೀಣ ಪ್ರದೇಶದಲ್ಲಿ ಅರೆ ಊಳಿಗಮಾನ್ಯತೆಯು ಮತ್ತೆ ನೆಲೆಗೊಳ್ಳಲು ಬೇಕಾದ ಸಕ್ರಿಯ ಸಹಕಾರವನ್ನೆಲ್ಲಾ ನೀಡಿತು. ಅಂದಿನಿಂದಲೂ ಭಾರತದ ಕೋಟ್ಯಾಂತರ ಜನತೆ ಭಾರತೀಯ ಬಂಡವಾಳದ ಅತಾರ್ಕಿಕತೆ, ಬರ್ಬರತೆ ಮತ್ತು ಅಮಾನವೀಯತೆಗಳಿಗೆ ಬಲಿಯಾಗುತ್ತಲೇ ಬಂದಿದ್ದಾರೆ. ಹೀಗಾಗಿ ಕಳೆದ 50 ವರ್ಷಗಳ ನಕ್ಸಲೈಟರ ಅರ್ಥಾತ್ ಭಾರತೀಯ ಮಾವೋವಾದಿಗಳು ನಡೆಸುತ್ತಿರುವ ನಿರಂತರ ಸಮರ ಭಾರತದ ಈ ದಮನಕಾರಿ ಮತ್ತು ಶೋಷಕ ಸಾಮಾಜಿಕ ವ್ಯವಸ್ಥೆಯನ್ನು ಕ್ರಾಂತಿಕಾರಿಯಾಗಿ ಬದಲಾಯಿಸುವುದಕ್ಕೇ ಆಗಿದೆ ಹಾಗೂ ಇದರಲ್ಲಿ ಆಶ್ಚರ್ಯವೇನೂ ಇಲ್ಲ.



ಭಾರತೀಯ ಕಮ್ಯುನಿಸ್ಟ್ ಪಕ್ಷ(ಸಿಪಿಐ)ವು 1964ರಲ್ಲಿ ಎರಡಾಗಿ ವಿಭಜನೆಗೊಂಡಿತ್ತು. ಆದರಿಂದ ಹೊರಬಂದ ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)-ಸಿಪಿಎಂ-ನ ಒಳಗಿದ್ದ ಮಾವೋವಾದಿ ಬಣವು ಐವತ್ತು ವರ್ಷಗಳ ಕೆಳಗೆ ಉತ್ತರ ಬಂಗಾಳದ ದುರ್ಗಮ ಪ್ರದೇಶವಾದ ನಕ್ಸಲ್ಬರಿಯಲ್ಲಿ ಒಂದು ಸಶಸ್ತ್ರ ರೈತ ಹೋರಾಟವನ್ನು ಸಂಘಟಿಸಿತು. ಈ ಕಾರಣಕ್ಕೆ ಭಾರತೀಯ ಮಾವೋವಾದಿಗಳಿಗೆ ನಕ್ಸಲೈಟರೆಂಬ ಹೆಸರೂ ಬಂದಿತು.

ಅದು 1967ರ ಮಾರ್ಚಿನಲ್ಲಿ ಪ್ರಾರಂಭವಾದರೂ ಅದೇ ವರ್ಷದ ಜುಲೈ ವೇಳೆಗೆ ಕ್ರೂರವಾಗಿ ದಮನಿಸಲ್ಪಟ್ಟಿತು. ಆ ಸಮಯದಲ್ಲಿ ಆ ಹೋರಾಟಕ್ಕೆ ನಾಯಕತ್ವ ನೀಡಿದ್ದ ಮತ್ತು ನಂತರದಲ್ಲಿ ಇಡೀ ದೇಶದ ನಕ್ಸಲೈಟ್ ಚಳವಳಿ ಮುನ್ನಡೆಸಿದ ಸಿಪಿಐ (ಮಾರ್ಕ್ಸ್‌ವಾದಿ-ಲೆನಿನ್‌ವಾದಿ) ಪಕ್ಷದ ಕಾರ್ಯದರ್ಶಿಯೂ ಆದ ಚಾರು ಮುಜುಂದಾರ್ ಹೀಗೆ ಹೇಳಿದ್ದರು: "...ಭಾರತದಲ್ಲಿ ನೂರಾರು ನಕ್ಸಲ್ಬರಿಗಳು ಸಿಡಿದೇಳಲು ಸಿದ್ಧವಾಗಿವೆ...ನಕ್ಸಲ್ಬರಿ ಸತ್ತಿಲ್ಲ..ಸಾಯುವುದೂ ಇಲ್ಲ." ಆ ನಂತರದಲ್ಲಿ ನಡೆದ ಬೆಳವಣಿಗೆಗಳು ಚಾರು ಮಜುಂದಾರ್ ಅವರು ಹಗಲು ಕನಸನ್ನೇನೂ ಕಾಣುತ್ತಿರಲಿಲ್ಲವೆಂಬುದನ್ನು ಸಾಬೀತುಪಡಿಸಿತು. ಏಕೆಂದರೆ ವಸಾಹತು ಕಾಲಘಟ್ಟದಲ್ಲಿ ನಡೆದ ಸಶಸ್ತ್ರ ರೈತ ಬಂಡಾಯಗಳ ನೆನಪುಗಳೂ ಮತ್ತು ಅವು ಹುಟ್ಟುಹಾಕಿದ ಕನಸುಗಳೂ ಚಳವಳಿಗೆ ಹೊಸ ಕಸುವನ್ನೇ ನೀಡಿದವು. 1968-1972ರ ನಡುವೆ ದೇಶದ ಹತ್ತಾರು ಭಾಗಗಳಲ್ಲಿ ಹಲವಾರು ನಕ್ಸಲ್ಬರಿಗಳು ಸಿಡಿದವು. ಅದರಲ್ಲಿ ಪ್ರಮುಖವಾದವು ಆಂಧ್ರ ಪ್ರದೇಶದ ಶ್ರೀಕಾಕುಳಂ ಮತ್ತು ಬಿಹಾರದ ಭೋಜ್‌ಪುರ್‌ಗಳಲ್ಲಿ ಸಿಡಿದೆದ್ದ ಹೋರಾಟಗಳು. ಆದರೆ ಅವುಗಳನ್ನೂ ಪ್ರಭುತ್ವವು ಅತ್ಯಂತ ಕ್ರೂರವಾಗಿ ದಮನಮಾಡಿತು.

ಆದರೆ ಒಂದು ಕ್ರಾಂತಿಗೆ ಅತ್ಯಗತ್ಯವಾದ ಭಾವನಾತ್ಮಕ ಸತ್ವಾಂಶಗಳಾದ ವಿಶ್ವಾಸ, ಪ್ರೀತಿ ಮತ್ತು ಭರವಸೆಗಳನ್ನು ತಮ್ಮ ಒಡಲ ತುಂಬಾ ತುಂಬಿಕೊಂಡಿದ್ದ ಕ್ರಾಂತಿಕಾರಿಗಳು ಈ ಹೋರಾಟವನ್ನು ಮುಂದುವರೆಸುತ್ತಾ ತಮ್ಮ ಜೀವಗಳನ್ನೇ ಅಪಾಯಕ್ಕೆ ಒಡ್ಡಿಕೊಂಡರು. ದೇಶದ ಬಡಜನತೆ ಹತ್ತಾರು ಅನ್ಯಾಯ ಮತ್ತು ಅಪಮಾನಗಳನ್ನು ಅನುಭವಿಸುವಂತೆ ಮಾಡಿರುವ ಈ ಶೋಷಕ ವ್ಯವಸ್ಥೆಯ ಎದುರು ಮೌನವಾಗುಳಿಯಲು ಅವರು ಒಪ್ಪಲಿಲ್ಲ. ಅವರು ತಮ್ಮ ತಮ್ಮ ಒಳಿತಿನ ಬಗ್ಗೆ ಮಾತ್ರ ಕಾಳಜಿ ಮಾಡುವ ಸ್ವಾರ್ಥದ ಸಂಕೋಲೆಗಳನ್ನು ಕಿತ್ತೊಗೆದರು. ಪ್ರಭುತ್ವವು 1960ರ ಮತ್ತು 1970ರ ಕ್ರಾಂತಿಕಾರಿಗಳನ್ನು ಸೋಲಿಸಿದರೂ, ಇಂಥಾ ಕ್ರಾಂತಿಕಾರಿ ಹೋರಾಟವನ್ನು ಹುಟ್ಟುಹಾಕಿದ ಶೋಷಕ ಪರಿಸ್ಥಿತಿಗಳು ಹಾಗೆಯೇ ಮುಂದುವರೆದಿದ್ದರಿಂದ ಶೋಷಿತ ಮತ್ತು ದಮನಿತ ಸಮುದಾಯಗಳ ಹೊಸ ಪೀಳಿಗೆಯು ಕ್ರಾಂತಿಯನ್ನು ಮತ್ತೆ ದೇಶದ ಮುನ್ನೆಲೆಗೆ ತಂದರು. ಹಾಗೆಯೇ ಮೌನದ್ರೋಹ ಮಾಡಲೊಪ್ಪದ ಬುದ್ಧಿಜೀವಿಗಳು ಸಹ ಅವರ ಬೆಂಬಲಕ್ಕೆ ನಿಂತು ನಿಧನರಾದ ಅಥವಾ ನಿವೃತ್ತರಾದವರ ಜಾಗಗಳನ್ನು ಭರ್ತಿಮಾಡಿದರು.

ನಕ್ಸಲೈಟ್ ಚಳವಳಿಯ ಎರಡನೇ ಅವಧಿಯು (1977-2003) ಪ್ರಧಾನವಾಗಿ ಸಮೂಹ ಹೋರಾಟಗಳು ಮತ್ತು ಸಮೂಹ ಸಂಘಟನೆಗಳಿಂದ ಕೂಡಿದ್ದವು. ಇವು ವಿಶೇಷವಾಗಿ ಅಂದಿನ ಅವಿಭಜಿತ ಆಂಧ್ರಪ್ರದೇಶದ ಉತ್ತರ ತೆಲಂಗಾಣ ಮತ್ತು ಇತರ ಪ್ರದೇಶಗಳಲ್ಲಿ, ಅಂದಿನ ಮಧ್ಯ ಬಿಹಾರ ಮತ್ತು ಇಂದು ಜಾರ್ಖಂಡ್ ಎಂದು ಕರೆಸಿಕೊಳ್ಳಲ್ಪಡುವ ದಕ್ಷಿಣ ಬಿಹಾರಗಳಲ್ಲಿ ಹಾಗೂ ದಂಡಕಾರಣ್ಯ ಎಂದು ಕರೆಸಿಕೊಳ್ಳಲ್ಪಡುವ ಆಂಧ್ರಪ್ರದೇಶ, ಒಡಿಶಾ, ಛತ್ತೀಸ್‌ಘಡ್ ಮತ್ತು ಮಹಾರಾಷ್ಟ್ರಗಳ ಆದಿವಾಸಿ ಗಡಿಜಿಲ್ಲೆಗಳಲ್ಲಿ ವ್ಯಾಪಕವಾಗಿತ್ತು. ದಕ್ಷಿಣ ಛತ್ತೀಸ್‌ಘಡ್‌ನ ಬಸ್ತರ್ ಪ್ರದೇಶವು ನಿಧಾನವಾಗಿ ಈ ಚಳವಳಿಯ ಗಟ್ಟಿನೆಲೆಯಾಗತೊಡಗಿತು. ಆತ್ಮ ರಕ್ಷಣೆಗಾಗಿ ಸಶಸ್ತ್ರ ದಳಗಳನ್ನೂ ಮತ್ತು ಗ್ರಾಮ ಮಟ್ಟದ ಮಿಲಿಷಿಯಾಗಳನ್ನು ಸಂಘಟಿಸಲಾಯಿತು. ಉಳುವವನಿಗೆ ಭೂಮಿ ಮತ್ತು ಅರಣ್ಯವಾಸಿಗಳಿಗೆ ಸಂಪೂರ್ಣ ಹಕ್ಕುಗಳು ಎಂಬವು ಪ್ರಮುಖವಾದ ಹಕ್ಕುಪ್ರತಿಪಾದನೆಗಳಾಗಿದ್ದವು.

ಚಳವಳಿಯು ವಿಸ್ತೃತಗೊಳ್ಳುತ್ತಿದ್ದಂತೆ ಭಾರತ ಸರ್ಕಾರವೂ ಸಹ ಅದರ ಮೇಲೆ ಪೂರ್ಣಪ್ರಮಾಣದ ಪ್ರತಿಯುದ್ಧವನ್ನೇ ಸಾರಿತು. ಪಕ್ಷವು ಹಲವಾರು ನಷ್ಟಗಳನ್ನು ಅನುಭವಿಸತೊಡಗಿತಲ್ಲದೆ ತನ್ನ ಅತ್ಯುತ್ತಮ ನಾಯಕರನ್ನು, ಅದರಲ್ಲೂ ವಿಶೇಷವಾಗಿ ತೆಲಂಗಾಣ ಮತ್ತು ಆಂಧ್ರಪ್ರದೇಶಗಳಲ್ಲಿ ಕಳೆದುಕೊಂಡಿತು. ಅದೇನೇ ಇದ್ದರೂ, ಹೊಸ ಶತಮಾನದ ಪ್ರಾರಂಭದೊಂದಿಗೆ ಚಳವಳಿಯನ್ನು ದಮನ ಮಾಡುವುದು ಕಷ್ಟಕರವೇ ಆಗತೊಡಗಿತು. ಜನತಾ ಗೆರಿಲ್ಲಾ ಸೇನೆ (ಪೀಪಲ್ಸ್ ಗೆರಿಲ್ಲಾ ಆರ್ಮಿ)ಯನ್ನು ಕಟ್ಟುವುದರೊಂದಿಗೆ ಎಂಥಾ ಅಸಾಧ್ಯವಾದ ಸಂದರ್ಭಗಳನ್ನೂ ಸಹ ಎದುರಿಸುತ್ತಾ ಮುಂದೆ ನುಗ್ಗಲು ಚಳವಳಿಯು ಸಿದ್ಧವಾಯಿತು. 1998 ಮತ್ತು 2004ರಲ್ಲಿ ಸುದೀರ್ಘ ಪ್ರಜಾಯುದ್ಧಕ್ಕೆ ಬದ್ಧರಾಗಿದ್ದ ಮಾವೋವಾದಿ ಶಕ್ತಿಗಳು ವಿಲೀನವಾಗುವುದರೊಂದಿಗೆ ಚಳವಳಿಯು ಗುರುತಿಸಲೇಬೇಕಾದಂಥ ಗಮನಾರ್ಹ ಶಕ್ತಿಯನ್ನು ಸಂಚಯಿಸಿಕೊಂಡಿತು.

2004ರ ನಂತರದ ಈ ಮೂರನೇ ಅವಧಿಯಲ್ಲಿ ಬಸ್ತರ್ ಪ್ರದೇಶವು ಪುಟಿದೇಳುವ ಮಾವೋವಾದಿ ಪ್ರತಿರೋಧದ ಗಟ್ಟಿನೆಲೆಯಾಗಿ ಪರಿವರ್ತನೆಯಾಗಿದೆ. ಅಲ್ಲಿ ಎರಡು ಗಮನಾರ್ಹವಾದ ಸಮೂಹ ಸಂಘಟನೆಗಳು ಅಸ್ತಿತ್ವದಲ್ಲಿವೆ. ಒಂದು ದಂಡಕಾರಣ್ಯ ಆದಿವಾಸಿ ಕಿಸಾನ್ ಮಜ್ದೂರ್ ಸಂಘಟನೆ. ಇದು ಆದಿವಾಸಿ ರೈತರ ಮತ್ತು ಕೃಷಿ ಕಾರ್ಮಿಕರ ಸಂಘಟನೆಯಾಗಿದೆ. ಮತ್ತೊಂದು ಕ್ರಾಂತಿಕಾರಿ ಆದಿವಾಸಿ ಮಹಿಳಾ ಸಂಘ. ಇದು ಆದಿವಾಸಿ ಮಹಿಳಾ ಸಂಘಟನೆಯಾಗಿದೆ. ಇದಲ್ಲದೆ ಭೂಮ್ಕಾಲ್ ಮಿಲಿಷಿಯಾ (ಭೂಮ್ಕಾಲ್ ಎಂಬುದು 1910ರಲ್ಲಿ ಆ ವಲಯದಲ್ಲಿ ನಡೆದ ಆದಿವಾಸಿ ದಂಗೆಯ ಹೆಸರು) ಕೂಡಾ ಅಸ್ತಿತ್ವದಲ್ಲಿದ್ದು ಪ್ರಜಾ ವಿಮೋಚನಾ ಗೆರಿಲ್ಲಾ ಸೇನೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ.

ಸತತ ಐದು ದಶಕಗಳ ಕಾಲ ಎಡಬಿಡದೆ ಮುನ್ನಡೆಯುತ್ತಲೇ ಬಂದಿರುವ ಈ ಕ್ರಾಂತಿಕಾರಿ ಚಳವಳಿಯನ್ನು ಹೇಗೆ ವಿವರಿಸಿಕೊಳ್ಳಬೇಕು?

ಅಲ್ಪಾ ಶಾ ಎಂಬ ಮಾನವಶಾಸ್ತ್ರಜ್ಞರು ಜಾರ್ಖಂಡಿನಲ್ಲಿರುವ ಮಾವೋವಾದಿ ಗೆರಿಲ್ಲಾ ವಲಯದಲ್ಲಿ ಸುದೀರ್ಘ ಕಾಲದಿಂದ ಜನಾಂಗೀಯ ಅಧ್ಯಯನವನ್ನು ಮಾಡುತ್ತಾ ಬಂದಿದ್ದಾರೆ. ಅವರ ಪ್ರಕಾರ ಈ ಕ್ರಾಂತಿಕಾರಿ ಚಳವಳಿಯು ಇಷ್ಟು ಸುದೀರ್ಘ ಕಾಲ ಬಾಳುತ್ತಾ ಬೆಳೆಯುತ್ತಾ ಬಂದಿರಲು ಪ್ರಧಾನವಾದ ಕಾರಣ ಅಲ್ಲಿ ಕೆಲಸ ಮಾಡುತ್ತಿರುವ ಮಾವೋವಾದಿ ಸಂಘಟನೆಗೂ ಮತ್ತು ಅಲ್ಲಿನ ಜನರಿಗೂ ನಡುವೆ ಏರ್ಪಟ್ಟಿರುವ ಆಪ್ತ ಸಂಬಂಧಗಳು. ಮಾವೋವಾದಿಗಳು ಸಾಮಾನ್ಯ ಜನರನ್ನು ಅದರಲ್ಲೂ ನಿರ್ದಿಷ್ಟವಾಗಿ ದಮನಿತ ಜಾತಿಗಳ ಜನರನ್ನು ಮತ್ತು ಆದಿವಾಸಿಗಳನ್ನು ಗೌರವ, ಘನತೆ ಮತ್ತು ಸಮಾನತೆಯಿಂದ ಕಾಣುತ್ತಾರೆ.

ಭಾರತದ ಮಾವೋವಾದಿ ಚಳವಳಿ ಎತ್ತ ಸಾಗುತ್ತಿದೆ?

ಭಾರತ ಪ್ರಭುತ್ವವು ಮಾವೋವಾದಿಗಳಿಗೂ ಮತ್ತು ಆ ದಮನಿತ ಜನರಿಗೂ ನಡುವೆ ಏರ್ಪಟ್ಟಿರುವ ಈ ಆಪ್ತ ಸಂಬಂಧಗಳನ್ನು ಕಡಿದುಹಾಕಲು ಬಯಸುತ್ತಿದೆ. ಜೊತೆಗೆ ಮಾವೋವಾದಿ ಚಳವಳಿಯನ್ನು ನಾಶಮಾಡಲು ಎಲ್ಲಾ ಬಗೆಯ ನ್ಯಾಯ ಹಾಗೂ ಅನ್ಯಾಯಯುತ ಕ್ರಮಗಳನ್ನು ಆಕ್ರಮಣಕಾರಿಯಾಗಿ ಬಳಸುತ್ತಿದೆ. ಈ ಪ್ರಕ್ರಿಯೆಯಲ್ಲಿ ಅದು ರಾಷ್ಟ್ರವೊಂದರ ಗಡಿಯೊಳಗೆ ನಡೆಯುವ ಸಶಸ್ತ್ರ ಸಂಘರ್ಷದ ಸಂದರ್ಭದಲ್ಲಿ ಅನುಸರಿಸಬೇಕಿರುವ ಜಿನೀವಾ ಒಪ್ಪಂದದ ಎರಡನೇ ಪ್ರೊಟೋಕಾಲಿನ ಸಾಮಾನ್ಯ ನಿಬಂಧನೆಗಳನ್ನೂ ಉಲ್ಲಂಘಿಸುತ್ತಿದೆ. ಮತ್ತೊಂದು ಕಡೆ ಮಾವೋವಾದಿ ಚಳವಳಿಯು ಸುದೀರ್ಘ ಪ್ರಜಾ ಯುದ್ಧ ಮತ್ತು ಸಮೂಹ ಹೋರಾಟಗಳ ಸಮ್ಮಿಶ್ರಣದಿಂದ ಮತ್ತು ದಮನಿತ ರಾಷ್ಟ್ರೀಯತೆಗಳೊಂದಿಗೆ ವ್ಯೂಹಾತ್ಮಕವಾದ ಮೈತ್ರಿಗಳನ್ನು ಮಾಡಿಕೊಳ್ಳುವ ಮೂಲಕ ಭಾರತ ಪ್ರಭುತ್ವವನ್ನು ಕಿತ್ತೊಗೆಯಲು ಪಣತೊಟ್ಟು ನಿಂತಿದೆ.

ಆದರೆ ವಾಸ್ತವವೆಂದರೆ ಭಾರತ ಪ್ರಭುತ್ವದ ಪ್ರಯತ್ನ ವಾಗಲೀ, ಮಾವೋವಾದಿಗಳ ಬಯಕೆಗಳಾಗಲಿ ಈ ಕಾಲಘಟ್ಟದಲ್ಲಿ ಈಡೇರುವಂತಹ ಸಾಧ್ಯತೆಗಳಿಲ್ಲ.

ಜಗತ್ತಿನ ಅಭಿವೃದ್ಧಿಶೀಲ ದೇಶಗಳಲ್ಲೇ ಅತ್ಯಂತ ಪ್ರಬಲವಾಗಿರುವ ಭಾರತ ಪ್ರಭುತ್ವ ಮತ್ತು ಆಳುವವರ್ಗಗಳ ಶಕ್ತಿಸಾಮರ್ಥ್ಯಗಳಿಗೆ ಸಡ್ಡುಹೊಡೆಯುವ ಪ್ರಕ್ರಿಯೆಯಲ್ಲಿ ಮಾವೋವಾದಿ ಚಳವಳಿಯು ಹೆಚ್ಚೆಚ್ಚು ಸೈನ್ಯೀಕರಣಗೊಳ್ಳುತ್ತಾ ಸಾಗಿದೆ. ಭಾರತ ಪ್ರಭುತ್ವವೂ ಸಹ ಈ ಚಳವಳಿಯನ್ನು ಸಂಪೂರ್ಣವಾಗಿ ಸಶಸ್ತ್ರ ಸಂಘರ್ಷಕ್ಕೇ ಸೀಮಿತಗೊಳಿಸಿಟ್ಟುಕೊಳ್ಳಲು ಪ್ರಯತ್ನಿಸುತ್ತಿದೆ. ಇದರ ಪರಿಣಾಮವಾಗಿ ಚಳವಳಿಯು ಮುನ್ನಡೆಯನ್ನು ಸಾಧಿಸುವುದು ಕಷ್ಟವಾಗುತ್ತಿದೆ. ಅಲ್ಲದೆ ಮಾವೋವಾದಿಗಳ ನಿಯಂತ್ರಣದಲ್ಲಿ ಯಾವುದೇ ಸ್ಥಾವರ ಪ್ರದೇಶಗಳು (ಬೇಸ್ ಏರಿಯಾ- ಈ ವ್ಯವಸ್ಥೆಯ ಆಡಳಿತವನ್ನು ಮತ್ತದರ ಸಂಸ್ಥೆಗಳನ್ನು ಕಿತ್ತೊಗೆದು ಅದಕ್ಕೆ ಪರ್ಯಾಯವಾದ ಮಾವೋವಾದಿ ಸರ್ಕಾರ, ಸೇನೆ ಮತ್ತು ಸಂಸ್ಥೆಗಳು ಅಧಿಕಾರ ಚಲಾಯಿಸುವ ಭೌಗೋಳಿಕ ಪ್ರದೇಶ- ಅನುವಾದಕನ ಟಿಪ್ಪಣಿ) ಇಲ್ಲದಿರುವುದು ಸಹ ಚಳವಳಿಗೆ ಹಲವಾರು ಸ್ವರೂಪದ ತೊಡರುಗಳನ್ನು ಉಂಟುಮಾಡುತ್ತಿದೆ: ಪ್ರಧಾನವಾಗಿ, ತನ್ನದೆ ಆದ ಒಂದು ಸ್ಥಾವರ ಪ್ರದೇಶವಿಲ್ಲದಿದ್ದರೆ ಪಕ್ಷದ ಪ್ರಜಾತಾಂತ್ರಿಕ ಸಮೂಹ ನೀತಿಯನ್ನು ಆಚರಣೆಗೆ ತರುವ ಸಾಧ್ಯತೆ ಇರುವುದಿಲ್ಲ, ಇದರಿಂದಾಗಿ ಮಾವೋವಾದಿಗಳು ತಮ್ಮ ಪ್ರಜಾತಂತ್ರವು ಈ ವ್ಯವಸ್ಥೆಯ ಕೊಳೆತ ಉದಾರವಾದಿ- ರಾಜಕೀಯ ಪ್ರಜಾತಂತ್ರಕ್ಕಿಂತ ಶ್ರೇಷ್ಠವಾದದ್ದೆಂದು ಜನಮೆಚ್ಚುವ ರೀತಿಯಲ್ಲಿ ನಿರೂಪಿಸುವುದೂ ಕಷ್ಟವಾಗುತ್ತದೆ.

ಇದರ ನಡುವೆಯೂ ಒಂದು ಸಾಧ್ಯತೆಯು ಎದ್ದುಕಾಣುತ್ತಿದೆ. ವಿವಿಧ ಪ್ರದೇಶಗಳ ಸಮಾಜ ರಚನೆಗಳೊಳಗಿಂದ ಏಕಕಾಲದಲ್ಲಿ ಪ್ರತಿರೋಧಗಳು ಭುಗಿಲೆದ್ದು ಉಂಟಾಗುವ ದೊಡ್ಡ ಕೋಲಾಹಲದೊಳಗಿಂದ ಕ್ರಾಂತಿಕಾರಿ ಜನದಂಗೆಗಳು ಸ್ಫೋಟಗೊಳ್ಳಬಹುದು ಮತ್ತು ಅದು ಕ್ರಾಂತಿಕಾರಿ ಚಳವಳಿಯ ಕೀಲಕ ಮುನ್ನಡೆಗೆ ನಾಂದಿ ಹಾಡಬಹುದು. ■

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 14-06-2017



'ಕಾಲ'ನ್ ರಾಜಕೀಯ

ರಜನೀಕಾಂತ್ ಅವರ ಹೊಸ ಸಿನಿಮಾದ ಪೋಸ್ಟರ್ ಸದ್ಯ ಸಾಕಷ್ಟು ಚರ್ಚೆಗೆ ಕಾರಣವಾಗಿದೆ. 'ಕಾಲ' ಸಿನಿಮಾದ ಫಸ್ಟ್‌ಲುಕ್ ಮೊನ್ನೆಯಷ್ಟೇ ರಿಲೀಸ್ ಆಗಿದ್ದು, ಆಡಳಿತ ವ್ಯವಸ್ಥೆಯು ಅನೇಕ ರೂಪಗಳನ್ನು ಬಳಸಿಕೊಂಡು ಪೋಸ್ಟರ್ ರೆಡಿ ಮಾಡಿದ್ದಾರೆ. ಈ ವ್ಯವಸ್ಥೆಗೆ ನಾನೇ ಅಧಿಪತಿ ಎನ್ನುವಂತೆ ರಜನೀಕಾಂತ್ ಕೂತಿದ್ದಾರೆ. ರಜನಿ ಕೂತಿದ್ದ ವಾಹನ ಮಹೀಂದ್ರಾ ಕಂಪೆನಿಯ ಜೀಪ್ ಆಗಿದ್ದರೂ, ಅದನ್ನು ಸಿಂಹಾಸನ ಎಂದು ಬಿಂಬಿಸಲಾಗಿದೆ. ಹಾಗಾಗಿ ರಜನಿ ರಾಜಕೀಯ ರಂಗಕ್ಕೆ ಬರುವುದನ್ನು ಸೂಕ್ಷ್ಮವಾಗಿ ವಿವರಿಸಿದಂತಿದೆ.

ತಲೈವಾ ತಮಿಳು ರಾಜಕೀಯ ಕಣಕ್ಕೆ ಇಳಿಯುವುದರ ವಿರುದ್ಧವೂ ಹೋರಾಟ ನಡೆಯುತ್ತಿದೆ. ರಜನಿ ಕನ್ನಡಿಗ ಎಂಬ ಕಾರಣಕ್ಕಾಗಿ ವಿರೋಧಿಗಳು ಹೋರಾಟ ನಡೆಸಿದ್ದಾರೆ. ಇದಕ್ಕೆ ಉತ್ತರ ಕೊಡುವಂತಹ ಕತೆ ಸಿನಿಮಾದಲ್ಲಿದೆಯಂತೆ. ಹಾಗಾಗಿ ಈ ಚಿತ್ರ ಬೇಗ ತೆರೆ ಕಾಣಲಿದೆ. ರಾಜಕಾರಣದಲ್ಲಿ ಗಟ್ಟಿಯಾಗಿ ನೆಲೆಯೂರಲು 'ಕಾಲನ್' ಸಿನಿಮಾ ಸಹಾಯ ಮಾಡಬಲ್ಲದಂತೆ.

ಈ ಚಿತ್ರವನ್ನು ನಿರ್ಮಾಣ ಮಾಡುತ್ತಿರುವುದು ರಜನಿ ಅಳಿಯ ಧನುಷ್. ಹಗಲುರಾತ್ರಿ ಎನ್ನದೇ ಶೂಟಿಂಗ್‌ನಲ್ಲಿ ಬಿಜಿ ಆಗಿದ್ದಾರೆ ರಜನೀಕಾಂತ್. ಈ ನಡುವೆ ಅಭಿಮಾನಿಗಳನ್ನು ಭೇಟಿ ಮಾಡುವುದರಲ್ಲಿಯೂ ಹಿಂದೆ ಬಿದ್ದಿಲ್ಲ. ಹಾಗಾಗಿ ರಜನಿ ರಾಜಕಾರಣಕ್ಕೆ ಬರುವುದು ಪಕ್ಕಾ ಆಗಿದೆ.



ಗಾಳಿಸುದ್ದಿಯಲ್ಲ ಗಾಳಿ

ತಮ್ಮ ಮೂರು ಸಿನಿಮಾಗಳ ಸೀಕ್ವೆಲ್‌ಗೆ ರೆಡಿಯಾ... ನಿರ್ದೇಶಕ ಯೋಗರಾಜ್ ಭಟ್. ಗಾಳಿಪಟ, ಮನಸಾ... ಪಂಚರಂಗಿ ಚಿತ್ರಗಳ ಕತೆಯನ್ನು ಮುಂದುವರೆಸಿಕೊಂಡು ... ಪ್ಲಾನ್ ಅವರದ್ದು.

ಈ ಕುರಿತು ಮೂರು ಸಿನಿಮಾಗಳಲ್ಲಿ ನಟಿಸಿರುವ ದಿಗ... ಮಾತುಕತೆ ಕೂಡ ನಡೆದಿದೆಯಂತೆ. ಆಯಾ ಸಿನಿಮಾಗಳಿಗೆ ... 2, ಮನಸಾರೆ-2 ಮತ್ತು ಪಂಚರಂಗಿ-2 ಎಂಬ ಹೆಸರ... ಮಾಡಿದ್ದಾರೆ. ಇವು ಯಾವಾಗಿಂದ ಶುರುವಾಗಲಿವೆ ಅ... ಮಾತ್ರ ಅವರು ಹೇಳಿಕೊಂಡಿಲ್ಲ.

ಒಂದೊಂದು ಸಲ ಭಟ್ ಪ್ರಚಾರಕ್ಕಾಗಿ ಈ ... ಗಾಳಿಸುದ್ದಿಯನ್ನು ಹರಿಬಿಡುತ್ತಾರೆ. ಇವು ಕೂಡ ಹಾಗೆಯೇ ಇ... ಅನ್ನುವುದು ಭಟ್‌ರ ಆಪ್ತರ ಮಾತು. ಆದರೆ, ದಿಗಂತ್ ಈ... ಸಿನಿಮಾಗಳಲ್ಲಿ ಒಂದಾದರೂ ಭಾಗ-2 ಬರಲಿದೆ ಎಂಬ ಭರವ... ನೀಡಿದ್ದಾರೆ. ಸದ್ಯಕ್ಕೆ ಯೋಗರಾಜ್ ಭಟ್ 'ಮುಗುಳುನಗೆ' ... ಶೂಟಿಂಗ್ ಮುಗಿಸಿದ್ದಾರೆ. ದಿಗಂತ್ 'ಉತ್ಸವ್' ಸಿನಿಮಾಗಾಗಿ ... ಮಾಡಿಕೊಳ್ಳುತ್ತಿದ್ದಾರೆ. ಹಾಗಾಗಿ ಇನ್ನೆರಡು ತಿಂಗಳಲ್ಲಿ ಮೂರು ... ಒಂದು ಸಿನಿಮಾ ಸೆಟ್ಟೇರಲಿದೆ ಎನ್ನಲಾಗುತ್ತಿದೆ.

'ಗರುಡ'ದಿಂದ ದೀಪಾ ಔಟ್



ದೀಪಾ ಸನ್ನಿಧಿ ಸಲ್ಲದ ಕಾರಣಕ್ಕಾಗಿ ಪದೇ ಪದೇ ಸುದ್ದಿಯಾಗುತ್ತಿದ್ದಾರೆ. ಕನ್ನಡ ಸಿನಿಮಾರಂಗವೇ ಬೇಡ ಅಂತ ಹೋದವರು, 'ಚಕ್ರವರ್ತಿ' ಚಿತ್ರದ ಮೂಲಕ ಮತ್ತೆ ವಾಪಸ್ಸಾದರು. ನಂತರ ಹೊಸ ಹುಡುಗನ ಜತೆ ನಟಿಸಲು ಒಪ್ಪಿಕೊಂಡರು. ಆ ಸಿನಿಮಾ ಕೂಡ ಅರ್ಧಕ್ಕೆ ನಿಂತಿತು. ಆನಂತರ ಸಿದ್ಧಾರ್ಥ ಮಹೇಶ್ ಮುಖ್ಯ ಭೂಮಿಕೆಯ 'ಗರುಡ' ಸಿನಿಮಾದಲ್ಲಿ ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆಂಬ ಸುದ್ದಿ ಹರಡಿತ್ತು. ಈಗ ಅಲ್ಲಿಂದಲೂ ಔಟ್ ಆಗಿದ್ದಾರೆ. ಡೇಟ್ ಹೊಂದಾಣಿಕೆ ಆಗದೇ ಇರುವ ಕಾರಣಕ್ಕಾಗಿ ಸಿನಿಮಾ ಬಿಟ್ಟಿದ್ದಾಗಿ ಹೇಳಿದ್ದಾರೆ. ದೀಪಾ ಕೈಯಲ್ಲಿ ಸದ್ಯ ಒಂದೂ ಸಿನಿಮಾ ಇಲ್ಲ. ಆದರೂ, ಡೇಟ್ ಹೊಂದಾಣಿಕೆ ಹೇಗೆ ಕಷ್ಟವಾಗಿದೆ ಎಂಬ ಪ್ರಶ್ನೆಗೆ ಅವರಲ್ಲಿ ಉತ್ತರವಿಲ್ಲ. 'ಗರುಡ' ಸಿನಿಮಾ ಬಿಡುವುದಕ್ಕೆ ಬೇರೆ ಕಾರಣವಿದೆ ಎನ್ನಲಾಗುತ್ತಿದೆ. ಸ್ಟಾರ್ ನಟರೊಬ್ಬರು ಹೊಸಬರ ಸಿನಿಮಾದಲ್ಲಿ ನಟಿಸದಂತೆ ನಿರ್ಬಂಧ ಹೇರಿದ್ದಾರೆಂಬ ಮಾತೂ ಕೇಳಿಬರುತ್ತಿದೆ. ಹಾಗಾಗಿ ದೀಪಾ ಸುಳ್ಳು ಹೇಳಿದ್ದಾರೆ ಎನ್ನುತ್ತಿವೆ ಕೆಲ ಮೂಲಗಳು. ಈಗಾಗಲೇ ಒಂದು ಬಾರಿ ದೀಪಾ ಸಿನಿಮಾ ರಂಗದಿಂದ ದೂರವಾಗಿದ್ದರು. ಈಗ ಮತ್ತೆ ಅದೇ ಹಾದಿ ಹಿಡಿಯುವ ಸೂಚನೆ ಸಿಗುತ್ತಿದೆ.

ಹರಿಪ್ರಿಯಾ ವಿಲನ್



ಚಿರಂಜೀವಿ ಸರ್ಜಾ ಮುಖ್ಯ ಭೂಮಿಕೆಯ 'ಸಂಹಾರ' ಸಿನಿಮಾದಲ್ಲಿ ಹರಿಪ್ರಿಯಾ ವಿಭಿನ್ನ ಪಾತ್ರ ಮಾಡಲಿದ್ದಾರೆಂಬ ಸುದ್ದಿ ಹರಡಿತ್ತು. ಆದರೆ, ಪಾತ್ರದ ಬಗ್ಗೆ ಮಾತ್ರ ಯಾವುದೇ ಮಾಹಿತಿಯನ್ನು ಹರಿಬಿಟ್ಟಿರಲಿಲ್ಲ. ಈಗ ಪಾತ್ರದ ಸೀಕ್ರೆಟ್ ರಿವೀಲ್ ಆಗಿದೆ. ಹರಿಪ್ರಿಯಾ ಈ ಸಿನಿಮಾದಲ್ಲಿ ನೆಗೆಟಿವ್ ರೋಲ್ ನಿರ್ವಹಿಸುತ್ತಿದ್ದಾರಂತೆ. ಅದು ಒಂದು ರೀತಿಯಲ್ಲಿ ವಿಲನ್ ಪಾತ್ರ ಎಂದು ಹೇಳಲಾಗುತ್ತಿದೆ.

ಈಗಾಗಲೇ ಮೊದಲ ಹಂತದ ಚಿತ್ರೀಕರಣ ಮಂಗಳೂರಿನಲ್ಲಿ ಮುಕ್ತಾಯ ಆಗಿದೆ. ಗುರು ದೇಶಪಾಂಡೆ ನಿರ್ದೇಶನದ ಈ ಚಿತ್ರದಲ್ಲಿ ಇಬ್ಬರು ನಾಯಕಿಯರು. ಹರಿಪ್ರಿಯಾ ಜತೆ ಕಾವ್ಯ ಶೆಟ್ಟಿ ಕೂಡ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ.

ಇದೊಂದು ರೊಮ್ಯಾಂಟಿಕ್ ಥ್ರಿಲ್ಲರ್ ಸಿನಿಮಾ. ಚಿರಂಜೀವಿ ಅಂಧ ವ್ಯಕ್ತಿಯ ಪಾತ್ರ ನಿರ್ವಹಿಸುತ್ತಿದ್ದರೆ, ಕಾವ್ಯ ಶೆಟ್ಟಿ ಅವರದ್ದು ಪತ್ರಕರ್ತೆಯ ಪಾತ್ರ. ಪೊಲೀಸ್ ಪಾತ್ರದಲ್ಲಿ ಚಿಕ್ಕಣ್ಣ ಕಾಣಿಸಿಕೊಂಡಿದ್ದಾರೆ.

ರಾಧಿಕಾ ಮತ್ತೆ ಸಕ್ರಿಯ



ರಾಧಿಕಾ ಕುಮಾರಸ್ವಾಮಿ ಸಿನಿಮಾ ರಂಗದಿಂದಲೇ ದೂರವಾಗಿದ್ದರು. ಈಗ ಮತ್ತೆ ಸಕ್ರಿಯರಾಗುತ್ತಿದ್ದಾರೆ. ಮೊನ್ನೆಯಷ್ಟೇ ಅರ್ಜುನ್ ಸರ್ಜಾ ನಟನೆಯ ಚಿತ್ರಕ್ಕೆ ನಾಯಕಿಯಾಗಿ ಆಯ್ಕೆಯಾಗಿದ್ದ ಇವರು, ಈಗ ಜೆಡಿ ಚಕ್ರವರ್ತಿ ಅವರ ಹೊಸ ಸಿನಿಮಾವನ್ನೂ ಒಪ್ಪಿಕೊಂಡಿದ್ದಾರೆ. ಜತೆಗೆ ಸ್ಟಾರ್ ಸುವರ್ಣ ವಾಹಿನಿಯಲ್ಲಿ ಮೂಡಿ ಬರಲಿರುವ ಡಾನ್ಸ್ ಕಾರ್ಯಕ್ರಮಕ್ಕೂ ತೀರ್ಪುಗಾರರಾಗಿ ಆಯ್ಕೆಯಾಗಿದ್ದಾರೆ. 'ಸ್ವೀಟಿ' ಸಿನಿಮಾದ ನಂತರ ರಾಧಿಕಾ ಸ್ವಲ್ಪ ದಿನ ಬೆಂಗಳೂರಿನಲ್ಲೂ ಇರಲಿಲ್ಲ. ತವರೂರಿನಲ್ಲಿಯೇ ನೆಲೆಯೂರಲಿದ್ದಾರೆಂಬ ಸುದ್ದಿಯೂ ಹಬ್ಬಿತ್ತು. ಅಲ್ಲದೇ, ಸಿನಿಮಾ ರಂಗದಲ್ಲಿಯೂ ಅವರು ಕಾಣಿಸಿಕೊಂಡಿರಲಿಲ್ಲ. ಹಾಗಾಗಿ ಅವರು ಚಿತ್ರರಂಗದಿಂದ ದೂರವಿದ್ದಾರೆಂದು ನಂಬಲಾಗಿತ್ತು. ಈಗ ಸಖತ್ ಬಿಜಿ ಆಗುವ ಮೂಲಕ ಅಚ್ಚರಿ ಮೂಡಿಸಿದ್ದಾರೆ.

ರಾಧಿಕಾಗೆ ನೃತ್ಯವೆಂದರೆ ಪ್ರಾಣ. ಮಗಳು ಶಮಿಕಾ ಕೂಡ ಅಮ್ಮನಂತೆಯೇ ಡಾನ್ಸ್ ಮಾಡುತ್ತಾಳಂತೆ. ಮಗಳಿಗಾಗಿ ಡಾನ್ಸ್ ಶೋ ಒಪ್ಪಿಕೊಂಡಿದ್ದೇನೆ ಅಂದಿದ್ದಾರೆ ರಾಧಿಕಾ. ಈ ನಡುವೆಯೇ ಸಿನಿಮಾವನ್ನು ನಿರ್ಮಾಣ ಮಾಡುವುದಾಗಿಯೂ ಅವರು ಹೇಳಿದ್ದಾರೆ. ತಮಗೆ ಒಪ್ಪುವಂತಹ ಮತ್ತು ಕುಟುಂಬ ಇಷ್ಟಪಡುವಂತಹ ಕತೆಗಾಗಿ ಅವರು ಹುಡುಕುತ್ತಿದ್ದಾರಂತೆ. ಸ್ಟೋರಿ ಸಿಕ್ಕ ಕೂಡಲೇ ನಿರ್ಮಾಣಕ್ಕೂ ಇಳಿಯಲಿದ್ದಾರಂತೆ ರಾಧಿಕಾ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com